# ಪ್ರಸಾದ

ಮಾಸಿಕ

ಜುಲೈ 2025

ಸಂಪುಟ 40 ಸಂಚಿಕೆ 7



ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು



ಸುತ್ತೂರು ಶ್ರೀಕ್ಷೇತ್ರದಲ್ಲಿ ಜೆಎಸ್‌ಎಸ್ ವಸತಿ ಶಾಲೆ, ಶಾಲಾ ಶಿಕ್ಷಣ ಮತು ಸಾಕ್ಷರತಾ ಇಲಾಖೆ, ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ಸಹಯೋಗದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಸೀಡ್ ಬಾಲ್ ವಿತರಣಾ ಕಾರ್ಯಕ್ರಮವನ್ನು ಶ್ರೀ ಬಿ.ವೈ. ವಿಜಯೇಂದ್ರರವರು ಉದ್ಘಾಟಿಸಿದರು. ಶ್ರೀ ಕುಂಬ್ರಳ್ಳಿ ಸುಬ್ಬಣ್ಣ, ಶ್ರೀಮತಿ ಮಾಳವಿಕಾ ಅವಿನಾಶ್, ಡಾ. ಶೈಲೇಂದ್ರ ಬೆಲ್ದಾಳೆ, ಶ್ರೀ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮತ್ತು ಶ್ರೀ ಟಿ.ಎಸ್. ಶ್ರೀವತ್ಸರವರುಗಳಿದ್ದಾರೆ (18 ಜುಲೈ 2025)

# ಪ್ರಸಾದ

**ಸಂಪುಟ 40 : ಸಂಚಿಕೆ 7** **ಜುಲೈ 2025**

**ಡಾ. ಎಂ.ಎನ್. ನಂದೀಶ್ ಹಂಚೆ**
ಸಂಪಾದಕರು

**ಜೆಎಸ್‌ಎಸ್ ಮಹಾವಿದ್ಯಾಪೀಠ**
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ
ಮೈಸೂರು 570 004
ದೂರವಾಣಿ : 0821–2548212, Extn. 223



**ಸಂಸ್ಥಾಪಕರು**
ಶ್ರೀಮನ್ಮಹಾರಾಜ ರಾಜಗುರುತಿಲಕ
**ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**
**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**

**ಸಂಪಾದಕ ಸಲಹಾ ಸಮಿತಿ**
ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು
ಡಾ. ಸಿ.ಜಿ. ಬೆಟಸೂರಮಠ
ಶ್ರೀ ಎಸ್.ಪಿ. ಮಂಜುನಾಥ್
ಡಾ. ಎನ್.ಎಸ್. ತಾರಾನಾಥ
ಡಾ. ಬಿ.ವಿ. ವಸಂತಕುಮಾರ್
ಡಾ. ವೈ.ಸಿ. ಭಾನುಮತಿ
ಪ್ರೊ. ಮೊರಬದ ಮಲ್ಲಿಕಾರ್ಜುನ

**ಸಂಪಾದಕ ಸಮಿತಿ**
ಡಾ. ಎಂ.ಎನ್. ನಂದೀಶ್ ಹಂಚೆ (ಸಂಪಾದಕರು)
ಶ್ರೀ ಆರ್.ಎಸ್. ಪೂರ್ಣಾನಂದ
ಶ್ರೀ ಕುಮಾರಸ್ವಾಮಿ ವಿರಕ್ತಮಠ

---

ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ ಮುಂತಾದ ವಿಷಯಗಳ ಬಗ್ಗೆ ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ. ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು

---

ಮುಖಪುಟ ಚಿತ್ರ

ಮೈಸೂರು ಶ್ರೀ ಸುತ್ತೂರು ಮಠಕ್ಕೆ ಈಶಾ ಫೌಂಡೇಷನ್‌ನ ಸದ್ಗುರು ಶ್ರೀ ಜಗ್ಗಿ ವಾಸುದೇವ್‌ರವರು ಭೇಟಿ ನೀಡಿದ ಸಂದರ್ಭದಲ್ಲಿ ಪರಮಪೂಜ್ಯ ಜಗದ್ಗುರುಗಳವರು ಗೌರವಿಸಿದರು (20 ಜುಲೈ 2025)

**ದಶವಾರ್ಷಿಕ ಚಂದಾ : 500/- * ಬಿಡಿ ಪ್ರತಿ : 10/-**

# ಪರಿವಿಡಿ


ಗುರುವಾಣಿ 5

ಸಂಪಾದಕೀಯ 7

ಜ್ಞಾನಲಾಂದ್ರ 10
ಶ್ರೀ ಸಿದ್ಧೇಶ್ವರ ಸ್ವಾಮಿಗಳು
(ಪ್ರವಚನಸಾರ)

ಕರ್ಮಯೋಗಿ 15
ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮಿಗಳು

ಶಬರಶಂಕರ ವಿಲಾಸ ಟೀಕು : ದ್ವಿತೀಯಾಶ್ವಾಸ 18
ಸಿದ್ಧಾಂತಿ ಶಿವಶಂಕರಶಾಸ್ತ್ರಿಗಳು
(ವೀರಶೈವ ಟೀಕು ಸಾಹಿತ್ಯ ಸರಣಿ)

ಪದ್ಮಶ್ರೀ ಬಿ. ಶಿವಮೂರ್ತಿಶಾಸ್ತ್ರಿಗಳವರ ಸಾಹಿತ್ಯಸೇವೆ 24
ಡಾ. ಬಿ. ನಂಜುಂಡಸ್ವಾಮಿ

ಶರಣ ಸಂಸ್ಕೃತಿ – ಒಂದು ಅವಲೋಕನ 29
ಎಚ್.ಎಸ್. ಸಿದ್ಧಗಂಗಪ್ಪ

ವಿದ್ಯೆ ಮತ್ತು ವಿಧಾಯಕತೆ 40
ಸ.ರಾ. ಸುಳಕೂಡೆ

ತುರುವನೂರು ಧಾರ್ಮಿಕ ಕ್ಷೇತ್ರ ದರ್ಶನ 46
ಡಾ. ಎಸ್.ಜಿ. ರಾಮದಾಸ ರೆಡ್ಡಿ
(ಧಾರ್ಮಿಕ ಕ್ಷೇತ್ರಗಳ ದರ್ಶನಮಾಲಿಕೆ)

ವಾರ್ತಾವಿಹಾರ 51
ಕುಮಾರಸ್ವಾಮಿ ವಿರಕ್ತಮಠ

ಕೃತಿ–ಸ್ವೀಕೃತಿ 63

## ನಿನ್ನ ಪೂರ್ವಾಪರವಾವುದಮ್ಮ

ಎಲೆ ತಂಗಿ,
ಶರಣ-ಸತಿ ಲಿಂಗ-ಪತಿಯಾದ ಪತಿವ್ರತಾಭಾವದ ಚಿಹ್ನೆ
ನಿನ್ನ ನಡೆ-ನುಡಿಯಲ್ಲಿ ಹೊಗರುದೋರುತ್ತಿದೆ
ನಿನ್ನ ಪೂರ್ವಾಪರವಾವುದಮ್ಮ?

ಸುತ್ತೂರು ಸಿಂಹಾಸನದ ಪರ್ವತದೇವರ ಶಿಷ್ಯರು –
ಭಂಡಾರಿ ಬಸವಪ್ಪೊಡೆಯರು !
ಆ ಭಂಡಾರಿ ಬಸವಪ್ಪೊಡೆಯ ದೇವರ ಶಿಷ್ಯರು–
ಕೂಗಲೂರು ನಂಜಯ್ಯದೇವರು !
ಆ ನಂಜಯ್ಯದೇವರ
ಕರಕಮಲದಲ್ಲಿ ಉದಯವಾದ ಶರಣವೆಣ್ಣಯ್ಯ ನಾನು !

ಎನ್ನ ಗುರುವಿನ ಗುರು ಪರಮ ಗುರು
ಪರಮಾರಾಧ್ಯ ತೋಂಟದಾರ್ಯನಿಗೆ
ಗುರುಭಕ್ತಿಯಿಂದೆನ್ನ ಶರಣು ಮಾಡಿದರು !

ಆ ತೋಂಟದಾರ್ಯನು
ತನ್ನ ಕೃಪೆಯೆಂಬ ತೊಟ್ಟಿಲೊಳಗೆನ್ನಂ ಮಲಗಿಸಿ
ಪ್ರಮಥಗಣಂಗಳ
ವಚನಸ್ವರೂಪ ತತ್ತ್ವಾರ್ಥವೆಂಬ
ಹಾಲು-ತುಪ್ಪವಂ ಸದಾ ದಣಿಯಲೆರೆದು
ಅಕ್ಕರಿಂದ ರಕ್ಷಣೆಯಂ ಮಾಡಿ
ಘನಲಿಂಗಿಯೆಂಬ ನಾಮಕರಣಮಂ ಕೊಟ್ಟು

ಸತ್ಯ-ಸದಾಚಾರ-ಜ್ಞಾನ-ಕ್ರೀಗಳೆಂಬ
ದಿವ್ಯಾಭರಣಂಗಳಂ ತೊಡಿಸಿ
ಅರಿವೆಂಬ ಬಣ್ಣವ ನಿರಿವಿಡಿದುಡಿಸಿ
ಅರ್ತಿಯ ಮಾಡುತಿಪ್ಪ ಸಮಯದಲ್ಲಿ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನಂ
ತನಗೆ ನಾನಾಗಬೇಕೆಂದು ಬೇಡಿ ಕಳುಹಲು
ಎಮ್ಮವರು ಅವರಿಂಗೆ ಮಾತನಿಕ್ಕಿದರಮ್ಮಾ!

– ಘನಲಿಂಗಿದೇವರು

# ಗುರುವಾಣಿ

ಕತ್ತಲೆಯೊಳೇನನೋ ಕಂಡು ಬೆದರಿದ ನಾಯಿ ।
ಎತ್ತಲೋ ಸಖನೊರ್ವನಿಹನೆಂದು ನಂಬಿ ॥
ಕತ್ತೆತ್ತಿ ಮೋಳಿಡುತ ಬೊಗಳಿ ಹಾರಾಡುವುದು ।
ಭಕ್ತಿಯಂತೆಯೆ ನಮದು – ಮಂಕುತಿಮ್ಮ ॥

ಡಿ.ವಿ.ಜಿ.ಯವರು ಮೇಲಿನ ಕಗ್ಗದಲ್ಲಿ ಭಕ್ತಿಯ ಸ್ವರೂಪ ಹಾಗೂ ಮನುಷ್ಯನ ಮಾನಸಿಕ ವ್ಯವಹಾರಗಳನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿದ್ದಾರೆ. ಕತ್ತಲಲ್ಲಿ ಭ್ರಮಿಸಿ ಏನನ್ನೋ ಕಂಡಂತಾಗಿ ಹೆದರಿದ ನಾಯಿಯೊಂದು, ತನ್ನನ್ನು ಕಾಪಾಡುವ ಯಾರೋ ಒಬ್ಬ ಸ್ನೇಹಿತನಿರುವನೆಂದು ತಿಳಿದು ತಾನು ಕಂಡ ವಸ್ತುವಿಗೆ ಹೆದರದೆ ಕತ್ತೆತ್ತಿ ಮೋಳಿಡುತ (ಗೋಳಾಡುವುದು) ಬೊಗಳಿ, ಹಾರಾಡಿ ಪರದಾಡುತ್ತದೆ. ನಮ್ಮ ಭಕ್ತಿಯೂ ಸಹ ಇದೇ ರೀತಿಯದಾಗಿದೆ ಎಂದಿದ್ದಾರೆ.

ಈ ಪದ್ಯದ ಮೊದಲನೆಯ ಸಾಲಿನಲ್ಲಿ ಬರುವ 'ಕತ್ತಲೆ' ಹಾಗೂ 'ನಾಯಿ' ಎಂಬ ಪದಗಳು ಇಡೀ ಪದ್ಯದ ತೋರುಮಾರ್ಗವಾಗಿವೆ. "ಕತ್ತಲೆ" ಎಂದರೆ ಇಲ್ಲಿ "ಅಜ್ಞಾನ"ವೆಂದರ್ಥ. ಅಜ್ಞಾನ ಆವರಿಸಿದಾಗ ಸಹಜವಾಗಿಯೇ ಭಯ ಉಂಟಾಗುತ್ತದೆ. ಮನುಷ್ಯನ ಸಕಲ ಸಂಕಷ್ಟಗಳ ಮೂಲ ಹುಟ್ಟುವುದು ಅಜ್ಞಾನದಿಂದಲೇ. ಅಂಥ ಅಜ್ಞಾನದ ತೀವ್ರತೆ ಎಷ್ಟಿರುತ್ತದೆ ಎಂದರೆ ಅದನ್ನು ವಚನಕಾರರು "ತುಪ್ಪದ ಸವಿಗೆ ಅಲಗ ನೆಕ್ಕಿದ ಸೊಣಗನಂತೆ" ಎಂದು ವರ್ಣಿಸುತ್ತಾರೆ. ನಾಯಿಗೆ ತುಪ್ಪದ ಸವಿ ಮುಖ್ಯ. ಆದರೆ ಹರಿತವಾದ ಅಲಗನ್ನು ಅದು ಗಮನಿಸುವುದಿಲ್ಲ. ಅದು ತುಪ್ಪದ ವಾಸನೆಗೆ ಮಾರುಹೋಗಿ ಅಲಗಿನ ಅದರ ಸವಿಗೆ ಆಸೆ ಪಟ್ಟು ಅಲಗನ್ನು ನೆಕ್ಕತೊಡಗುತ್ತದೆ. ನಾಯಿಯ ನಾಲಿಗೆ ಕತ್ತಿಯ ಅಲಗಿಗೆ ಸೋಕಿದೊಡನೆ ಕತ್ತರಿಸಿಹೋಗುತ್ತದೆ. ಅದು ಬೊಗಳಲಾರದು ಮಾತ್ರವಲ್ಲ, ಏನನ್ನು ತಿನ್ನಲೂ, ಸವಿಯಲೂ ಅದಕ್ಕೆ ಆಗದು. ಇಂದ್ರಿಯದೌರ್ಬಲ್ಯ ನಾಯಿಗೆ ತಂದಿಟ್ಟ ಆಪತ್ತು ಅಂತಹದು. ಇಲ್ಲಿನ ನಾಯಿ ಮನುಷ್ಯನ ಮನಸ್ಸನ್ನು ಪ್ರತಿನಿಧಿಸುತ್ತಿದೆ.

ಅಜ್ಞಾನವೆಂಬುದು ಮನುಷ್ಯನ ಬದುಕಿನಲ್ಲಿ ಅಸತ್ಯ, ಅಸ್ಪಷ್ಟತೆ, ಅವಿವೇಕ ಮೊದಲಾದ ಅಪಾಯಗಳನ್ನು ಸೃಷ್ಟಿಸುತ್ತದೆ. ಇದರಿಂದಾಗಿ ಯಾವುದು ನನ್ನದು,

ಯಾವುದು ಅಲ್ಲ ಎಂಬ ಅರಿವು ಮಂಕಾಗುತ್ತದೆ. ನಾವು ಉಸಿರಾಡುವ ಗಾಳಿ, ಕುಡಿಯುವ ನೀರು, ಸುಡುವ ಅಗ್ನಿ – ಹೀಗೆ ಯಾವ ವಸ್ತುವೂ ನಮ್ಮವಲ್ಲ. ಆದರೆ ಬದುಕಿರುವಷ್ಟು ದಿನವೂ ಮನುಷ್ಯ ಸಕಲವೂ ನನ್ನದು, ನನ್ನಿಂದಲೇ, ನನಗಾಗಿಯೇ ಇವೆ ಎಂಬ ಭ್ರಮೆಯಲ್ಲಿರುತ್ತಾನೆ. ಯಾವುದೋ ಒಂದು ನಿಜದ ಗಳಿಗೆಯಲ್ಲಿ ತನ್ನಿಂದ ಎಲ್ಲವೂ ದೂರವಾಗುವ ಸಮಯ ಬಂದಾಗ ಕಳೆದುಕೊಳ್ಳುವ ಆತಂಕ, ಅದರಿಂದ ಭಯ ಬೆಳೆಯುತ್ತದೆ. ಈ ಎಲ್ಲ ಲೋಕವ್ಯವಹಾರಗಳೂ ಅಮೂರ್ತವಾದವುಗಳೇ. ಅವುಗಳಿಗೆ ತಮ್ಮದೇ ಸ್ವರೂಪವಿರುವುದಿಲ್ಲ, ಅವುಗಳ ಸ್ವರೂಪವನ್ನು ಅರಿಯುವುದು ಅಸಾಧ್ಯ. ಏಕೆಂದರೆ ಅಜ್ಞಾನ ಎಂಬ ಕತ್ತಲೆ ಮನುಷ್ಯನನ್ನು ಆವರಿಸಿರುವುದರಿಂದ ಸದಾ ಭಯಗ್ರಸ್ತನಾಗಿರುತ್ತಾನೆ. ತನ್ನನ್ನು ಕಾಪಾಡುವ ಒಬ್ಬ ಗೆಳೆಯ ಇದ್ದಾನೆಂಬ ಭ್ರಮೆಯಿಂದ ನಾಯಿಯು ಭ್ರಮೆಗೊಳಗಾಗಿ ಬೊಗಳಿ ಹಾರಾಡುತ್ತದೆ. ಜನರು ನಂಬುವ ಭಗವಂತನೆಂಬ ಭಾವವೂ ಅಮೂರ್ತವೇ. ಅವನ ಸ್ವಯವನ್ನು ಅರಿಯಲು ಕೂಡ ಜ್ಞಾನದ ಅಗತ್ಯವಿದೆ. ಮನುಷ್ಯನಿಗೆ ಅರಿವು ಮೂಡಿದಾಗ ಮಾತ್ರ ಪರಮಾತ್ಮನ ಮೂರ್ತ ಸ್ವರೂಪ ಗೋಚರವಾಗುತ್ತದೆ. ಆಗ ಸಹಜವಾಗಿಯೇ ಮನುಷ್ಯನ ಎಲ್ಲ ಕ್ಲೇಶಗಳೂ ತೊಲಗಿ ಬೆಳಕು ಮೂಡುತ್ತದೆ.

ಈ ಕತ್ತಲೆಯ ವಿರುದ್ಧ ಹೋರಾಡಿ, ಜ್ಯೋತಿಸ್ವರೂಪನಾದ ಭಗವಂತನನ್ನು ಕಾಣಲು ಇರುವ ಮಾರ್ಗವೇ ಭಕ್ತಿ. ಭಕ್ತಿ ಎಂಬುದು ಮನಸ್ಸಿನ ಪರಿಶುದ್ಧತೆ ಮತ್ತು ಜ್ಞಾನದಿಂದ ಕೂಡಿದ ದೈವೀಭಾವ. ಅದೊಂದು 'ಅನ್ಯಥಾ ಶರಣಂ ನಾಸ್ತಿ' ಎನ್ನುವ ಪ್ರಪತ್ತಿಯ ಸ್ಥಿತಿ. ಯಾವ ಬೇಡಿಕೆಯನ್ನೂ ಮಂಡಿಸದೆ ನಿರಪೇಕ್ಷವಾಗಿ ಭಗವಂತನನ್ನು ಧ್ಯಾನಿಸುವ ಕ್ರಿಯೆಯೇ ಭಕ್ತಿ. ಮೂಲತಃ ಕರ್ಮ, ಜ್ಞಾನ, ಭಕ್ತಿ ಎಂಬ ತ್ರಿಸ್ಥಾನ ಪ್ರಮೇಯಗಳಿವೆ. ಕರ್ಮದಲ್ಲಿ ಕಾಮ್ಯ, ಅಕಾಮ್ಯ ಎಂದು ಎರಡು ವಿಧ. ಕಾಮ್ಯಕರ್ಮವೆಂದರೆ ನಮ್ಮ ಬಯಕೆಗಳ ಈಡೇರಿಕೆಗಾಗಿ ಭಗವಂತನನ್ನು ಪ್ರಾರ್ಥಿಸುವುದು. ಹೀಗೆ ಕಾಮ್ಯಕರ್ಮವನ್ನು ಮಾಡುವುದು ಮನುಷ್ಯನ ಅಜ್ಞಾನದಿಂದ ಎಂದು ತತ್ವಜ್ಞಾನಿಗಳು ಅಭಿಪ್ರಾಯ ಪಡುತ್ತಾರೆ. ಬಯಕೆಗಳನ್ನು ಹೇಳಿದರೆ ಮಾತ್ರ ಭಗವಂತನಿಗೆ ಅರ್ಥವಾಗುತ್ತದೆ, ಇಲ್ಲದಿದ್ದರೆ ಅವನಿಗೆ ಅವುಗಳು ತಿಳಿಯುವುದಿಲ್ಲ ಎಂಬ ಅಜ್ಞಾನಮೂಲದಿಂದ ಕಾಮ್ಯಕರ್ಮ ಉದಿಸುತ್ತದೆ. ಭಗವಂತನನ್ನು ಅರಿಯಲು ಭಕ್ತಿಯೇ ಮಾರ್ಗ. ಅಜ್ಞಾನದಿಂದ ಮುಕ್ತಿ ದೊರೆಯುವುದಿಲ್ಲವೆಂಬುದನ್ನು ಸರ್ವರೂ ಅರಿಯಬೇಕು.

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

# ಸಂಪಾದಕೀಯ

ಹೊಸ ಚಿಗುರು ಹಳೆ ಬೇರು ಕೂಡಿರಲು ಮರಸೊಬಗು
ಹೊಸ ಯುಕ್ತಿ ಹಳೆ ತತ್ತ್ವದೊಡಗೂಡೆ ಧರ್ಮ
ಋಷಿವಾಕ್ಯದೊಡನೆ ವಿಜ್ಞಾನ ಕಲೆ ಮೇಳವಿಸೆ
ಜಸವು ಜನಜೀವನಕೆ – ಮಂಕುತಿಮ್ಮ

ಪ್ರತಿ ಕಾವ್ಯ, ಗದ್ಯ, ಕಥೆ, ಕಾದಂಬರಿ, ಕವನ, ವಚನ – ಎಲ್ಲವೂ ಕವಿ, ಕಾವ್ಯ, ಕಾಲ, ದೇಶಗಳ, ಸಂದರ್ಭಗಳ ಚೌಕಟ್ಟಿನಲ್ಲಿ ಪರಂಪರಾಗತ ಅರ್ಥವೊಂದನ್ನು ವ್ಯಕ್ತಪಡಿಸುತ್ತದೆ. ಹಾಗೆಯೇ ಈ ಕಗ್ಗಕ್ಕೆ ಕೂಡ ಸಾಂಪ್ರದಾಯಿಕ ಅರ್ಥವೊಂದು ಇದ್ದೇ ಇದೆ. ಆದರೆ ಒಂದು ಕಲಾಪ್ರಕಾರಕ್ಕೆ ಅನನ್ಯತೆ ಪ್ರಾಪ್ತವಾಗುವುದು ಅದರ ಅಸೀಮತೆಯಿಂದ, ಅದರ ಕಲಾತೀತವಾದ ಅರ್ಥಪ್ರೇರಣೆಯಿಂದ.

ವಾಸ್ತವವಾಗಿ ಈ ಕಗ್ಗವನ್ನು ಉದಾಹರಿಸಲು ಇತ್ತೀಚಿನ ಕಾರಣವೊಂದಿದೆ. ಅದೇನೆಂದರೆ, ಈಗ್ಗೆ 15 ದಿನಗಳ ಹಿಂದೆ "ನ್ಯೂಸ್ 18" ಟಿ.ವಿ. ವಾಹಿನಿಯಲ್ಲಿ ಒಂದು ಸುದ್ದಿ ಬಿತ್ತರಗೊಂಡಿತು. ಅಮೆರಿಕದ ಪ್ರಸಿದ್ಧ ಕಂಪೆನಿಯೊಂದು ಪಾದರಸವನ್ನು ಬಳಸಿಕೊಂಡು 5500 ಕಿಲೋ ಚಿನ್ನವನ್ನು ಉತ್ಪಾದಿಸಲು ಸಜ್ಜಾಗಿದೆ. ಅದರ ಪ್ರಾಯೋಗಿಕ ಪರೀಕ್ಷೆಯೂ ಯಶಸ್ವಿಯಾಗಿದೆ. 2024 ರಿಂದ ಚಿನ್ನ ತಯಾರಿಕೆ ಆರಂಭವಾಗುತ್ತದೆ. ಇದರಿಂದ ಜಾಗತಿಕವಾಗಿ ಚಿನ್ನದ ವ್ಯಾಪಾರದ ಮೇಲೆ ಉಂಟಾಗುವ ಪರಿಣಾಮವನ್ನು ಕುರಿತು ಚರ್ಚೆ ಆರಂಭವಾಗಿದೆ. ಈ ಸುದ್ದಿ ಪ್ರಕಟವಾದೊಡನೆಯೇ ಜಾಗತಿಕ ಷೇರುಮಾರುಕಟ್ಟೆ, ಚಿನಿವಾರಪೇಟೆಯಲ್ಲಿ ಚಿತ್ರವಿಚಿತ್ರ ಸುದ್ದಿಗಳು ಹರಿಯತೊಡಗಿದವು. ಹಣದುಬ್ಬರದಿಂದ ಮೊದಲುಗೊಂಡು ಚಿನ್ನದ ಕುರಿತಂತೆ ಅಸೀಮ ವ್ಯಾಮೋಹವುಳ್ಳ ಭಾರತೀಯರ ನಡವಳಿಕೆಯವರೆಗೆ ಅನೇಕ ಸಂಗತಿಗಳು ಚರ್ಚೆಯ ಮುನ್ನೆಲೆಗೆ ಬಂದವು.

ಈ ಸುದ್ದಿಯನ್ನು ಗಮನಿಸಿದ ನನಗೆ ತಕ್ಷಣಕ್ಕೆ ನೆನಪಿಗೆ ಬಂದದ್ದು ನಮ್ಮ ಪುರಾತನರು ಸಾವಿರಾರು ವರ್ಷಗಳ ಹಿಂದೆಯೇ ಇಂತಹದೊಂದು ವಿದ್ಯೆಯನ್ನು ಕುರಿತು ಆಲೋಚಿಸಿರುವುದು. ಪಾದರಸದಿಂದ ಚಿನ್ನ, ಬೆಳ್ಳಿಯನ್ನು ತಯಾರಿಸುವ ರಸವಿದ್ಯೆಯೊಂದನ್ನು ಕುರಿತು ಗಂಭೀರವಾಗಿ ಚಿಂತಿಸಿದ್ದರು. ನಮ್ಮಲ್ಲಿ ನವನಾಥ ಸಿದ್ಧರಲ್ಲಿ ಬರುವ 'ರಸಸಿದ್ಧರು' ಇವರಲ್ಲಿ ಒಬ್ಬರು. ಕೆಲವೊಮ್ಮೆ ಅಘೋರಿಗಳು ಕೂಡ

ರಾತ್ರಿ ಹೊತ್ತು ಯಾವುದೋ ಊರಿನ ಮನೆಯ ಬಾಗಿಲನ್ನು ಬಡಿದು ಹೋಗುತ್ತಾರೆ, ಆ ಮನೆಯ ಬಾಗಿಲು ಚಿನ್ನವಾಗಿಬಿಡುತ್ತದೆ ಎಂಬ ರಂಜನೀಯ ಕಥೆಗಳು ಚಾಲ್ತಿಯಲ್ಲಿದ್ದವು. ಆದರೆ ರಸಸಿದ್ದರು ಮತ್ತು ರಸವಿದ್ಯೆಯ ಬಗ್ಗೆ ನಮ್ಮ ಪೂರ್ವಿಕರು ಎಷ್ಟೇ ಗಂಭೀರವಾಗಿ ಹೇಳಿದರೂ ನಾವು ಅದನ್ನು ನಂಬುವ ಸ್ಥಿತಿಯಲ್ಲಿ ಇರಲಿಲ್ಲ. ಈ ರಸವಿದ್ಯೆಯನ್ನು ಕಲಿಯಲು ಹೋಗಿ ಪ್ರಾಣ ಕಳೆದುಕೊಂಡವರ ಕಥೆಗಳೂ ಹೇರಳವಾಗಿ ಸಿಗುತ್ತವೆ. ಆದರೂ ಜನರು ಈ ಸಂಗತಿಯನ್ನು ಸಾರಾಸಗಟಾಗಿ ತಿರಸ್ಕರಿಸಿದ್ದು ಅಷ್ಟೇನೂ ಸರಿಯಾಗಿರಲಿಲ್ಲ. ಮೈಸೂರಿನವರೇ ಆದ ಡಾ. ಟಿ.ಆರ್. ಅನಂತರಾಮು ಅವರು “ರಸವಾದ” (ಹುಚ್ಚು ಕುದುರೆಯ ಬೆನ್ನೇರಿ) ಎಂಬ ಪುಸ್ತಕವನ್ನು ಬರೆದು ‘ರಸವಿದ್ಯೆ ಎಂಬುದು ಶುದ್ಧ ಸುಳ್ಳು’ ಎಂದು ಹೇಳಿದರು. ತೆಲುಗಿನಲ್ಲಿ “ರಸವಾದಂ ಆದಿವಾದಂ – ರಸಾಯನಶಾಸ್ತ್ರ ಕಥಲು” ಎಂಬ ಪ್ರೊ. ಮೋಹನ್ ಅವರ ಪುಸ್ತಕವೂ ಪ್ರಕಟವಾಗಿದೆ.

ಪ್ರಾಚೀನ ಭಾರತೀಯರಷ್ಟೇ ಅಲ್ಲದೆ, ಪ್ರಪಂಚದ ಎಲ್ಲ ಭಾಗಗಳಲ್ಲೂ ಈ ರಸವಿದ್ಯೆಯ ಬಗ್ಗೆ ಗಾಢವಾದ ಜ್ಞಾನಪರಂಪರೆಯೊಂದಿತ್ತು. ನಮ್ಮಲ್ಲಿಯೂ ನಾಗಾರ್ಜುನ ಹಾಗೂ ನಿತ್ಯನಾಥ ಎಂಬುವ ಸಾಧಕರಿದ್ದರು; ಅವರನ್ನು ‘ಸಿದ್ಧ’ ಎಂದೂ ಕರೆಯಲಾಗುತ್ತಿತ್ತು. ಇವರು ರಚಿಸಿದ “ರಸೇಂದ್ರ ಮಂಗಳಂ” ಹಾಗೂ “ರಸರತ್ನಾಕರ” ಗ್ರಂಥಗಳು ಮೌಲಿಕವಾದ ಕೃತಿಗಳಾಗಿವೆ. ಪಾದರಸದಿಂದ ಚಿನ್ನವನ್ನು ತಯಾರಿಸುವ ವಿಧಾನವನ್ನು ನಾಗಾರ್ಜುನಸಿದ್ಧರು ಆವಿಷ್ಕರಿಸಿದ್ದರು ಎನ್ನಲಾಗುತ್ತದೆ. ಈ ಕುರಿತು ಡೇವಿಡ್ ಗಾರ್ಡನ್ ವೈಟ್‌ರವರ ಸಂಶೋಧನಾತ್ಮಕ ಗ್ರಂಥ “ದಿ ಆಲ್‌ಕೆಮಿಕಲ್ ಬಾಡಿ” ಪರಾಮರ್ಶನಯೋಗ್ಯವಾಗಿದೆ.

ರಸವಾದಕ್ಕೆ ಸಂಬಂಧಿಸಿದಂತೆ ಸಂಸ್ಕೃತದಲ್ಲಿ 39 ಗ್ರಂಥಗಳಿವೆ ಎಂಬ ಮಾಹಿತಿಯನ್ನು ಜಿ. ಜಾನ್ ಮ್ಯೂಲೆನ್‌ವೆಲ್ಡ್ ಅವರು “ಭಾರತೀಯ ವೈದ್ಯಕೀಯ ಸಾಹಿತ್ಯ ಇತಿಹಾಸ” ಗ್ರಂಥದಲ್ಲಿ ಉಲ್ಲೇಖಿಸುತ್ತಾರೆ. “ರಸ–ಜಲ–ನಿಧಿ” ಎಂಬ ಭೂದೇಬ್ ಮುಖರ್ಜಿಯವರ ಬೃಹತ್ ಸಂಪುಟಗಳು ಭಾರತೀಯ ರಸವಿದ್ಯೆಗಳನ್ನು ಕುರಿತ ಮಹತ್ವದ ಗ್ರಂಥವಾಗಿದ್ದು, ಮೊದಲನೆಯ ಸಂಪುಟದಲ್ಲಿ ಚಿನ್ನ ಮತ್ತು ಬೆಳ್ಳಿಯನ್ನು ತಯಾರಿಸುವ ವಿವರಗಳಿವೆ.

ಈ ರಸಸಿದ್ಧರು ಮತ್ತು ರಸವಿದ್ಯೆಯನ್ನು ಕುರಿತ ಪ್ರಾಚೀನ ಉಲ್ಲೇಖಗಳಲ್ಲಿ ಕನ್ನಡದ ಮೊಟ್ಟಮೊದಲ ಗದ್ಯಕೃತಿಯಾದ “ವಡ್ಡಾರಾಧನೆ”ಯಲ್ಲಿ “ಚಾಣಾಕ್ಯ ರಿಸಿ” ಎಂಬ ಕಥೆ ಉಲ್ಲೇಖಾರ್ಹ. ಮಹೋದಕ ಎಂಬ ಪಟ್ಟಣದ ದೊರೆಯಾದ ಕುಮುದನೆಂಬುವನ ಪತ್ನಿ ಮಂದೆಯೆಂಬುವವಳು ಗರ್ಭ ಧರಿಸಿದಾಗ ಚಂದ್ರನನ್ನು ನುಂಗಬೇಕೆಂಬ ಬಯಕೆ ಹೊಂದಿದ್ದಳು. ಆಗ ಈ ವಿಷಯ ತಿಳಿದ ಚಾಣಾಕ್ಯ ರಿಸಿ

ಗಾಜಿನ ಬಟ್ಟಲಿನಲ್ಲಿ ಚಂದ್ರಬಿಂಬ ಬೀಳುವಂತೆ ಮಾಡಿ, ಆ ಬಟ್ಟಲಿನ ನೀರನ್ನು ಕುಡಿಸಿ ಅವಳ ಬಯಕೆಯನ್ನು ಈಡೇರಿಸಿದನು. ಅನಂತರ ಹುಟ್ಟಿದ ಮಗುವಿಗೆ ಚಂದ್ರಭುಕ್ತನೆಂಬ ಹೆಸರಿಟ್ಟರು. ಆತನಿಗೆ 16 ವರ್ಷ ವಯಸ್ಸಾದಾಗ ಸಾಮಂತರು, ನಗರರಕ್ಷಕರನ್ನು ಒಟ್ಟುಗೂಡಿಸಿ ದೊಡ್ಡ ಸೈನ್ಯವನ್ನು ಚಾಣಾಕ್ಯ ರಿಸಿ ಕಟ್ಟಿದನು. ಅವರೆಲ್ಲರನ್ನೂ ಶ್ರೀ ಪರ್ವತದಲ್ಲಿ (ಶ್ರೀಶೈಲ) ನಿಲ್ಲಿಸಿ ಚಾಣಕ್ಯ ರಿಸಿಯು ಏಕಾಂಗಿಯಾಗಿ ಹೋಗಿ ಚಿನ್ನ ತಯಾರಿಕೆಗೆ ಬೇಕಾದ ಮೂಲಿಕೆ, ಮದ್ದುಗಳನ್ನು ಹುಡುಕುತ್ತಿದ್ದನು. ಆಗ ಶ್ರೀ ಪರ್ವತದ ತಪ್ಪಲಿನಲ್ಲಿ ಆಳವಾದ ಸಿದ್ದರಸದ ಬಾವಿಯನ್ನು ಕಂಡನು. ಅದು ಹುಳಿಮಜ್ಜಿಗೆಯಂತೆ ವಾಸನೆ ಬರುತ್ತಿತ್ತು. ಅದನ್ನು ಕಂಡು, ಅದಕ್ಕೆ ಮುಚ್ಚಿದ ಕಲ್ಲನ್ನು ಸರಿಸಿ ನೋಡಿದನು. ಒಳಗಿದ್ದ ಮನುಷ್ಯನನ್ನು ಕುರಿತು, "ನೀನು ಇಲ್ಲಿ ಏಕೆ ಇದ್ದೀಯೆ?" ಎಂದು ಕೇಳಿದಾಗ ಆತನು ಹೀಗೆ ಹೇಳಿದನು: ರಸವಾದಕನೆಂಬ ಒಬ್ಬ ಸಂನ್ಯಾಸಿಯು ನನ್ನೊಡನೆ ಬಂದು 'ಈ ಬಾವಿಯೊಳಗಿಳಿದು ಈ ರಸವನ್ನು ಮೊಗೆದುಕೊಟ್ಟರೆ ಅದರ ಸಹಾಯದಿಂದ ಬರುವ ಚಿನ್ನದಲ್ಲಿ ನಿನಗೂ ಸಮನಾದ ಪಾಲು ನೀಡುತ್ತೇನೆ' ಎಂದನು. ನಾನು ಚಿನ್ನದ ದುರಾಶೆಯಿಂದ ಬಾವಿಗಿಳಿದು ಸೋರೆಬುರುಡೆಯಲ್ಲಿ ರಸವನ್ನು ತುಂಬಿಸಿ ಬೇಕಾದಷ್ಟನ್ನು ಮೊಗೆದುಕೊಟ್ಟೆನು. ಆಮೇಲೆ ಅವನು ನನ್ನನ್ನು ಮೇಲೆ ತೆಗೆಯದೆ ಹೊರಟುಹೋದನು. ಹಿಂದೆಯೂ ಹೀಗೆ ಸಾಯಿಸಿದ್ದಾನೆ ಎಂದನು. ಆಗ ಚಾಣಾಕ್ಯನು "ನಾನು ನಿನ್ನನ್ನು ಬದುಕಿಸುತ್ತೇನೆ. ನನಗೆ ಆ ರಸವನ್ನು ಮೊಗೆದುಕೊಡು" ಎಂದನು. ಸಾಕಷ್ಟು ಸಿದ್ಧರಸವನ್ನು ತುಂಬಿಸಿಕೊಂಡನು. ಆತನನ್ನು ಬಾವಿಯಿಂದ ಮೇಲೆತ್ತಿ, ಒಳ್ಳೆಯ ಔಷಧಗಳನ್ನು ಮಾಡಿ, ಅವನನ್ನು ಬದುಕಿಸಿ ಕಳುಹಿಸಿದನು. ಆಮೇಲೆ ಆ ಸಿದ್ಧರಸದಿಂದ ಎಷ್ಟೋ ಚಿನ್ನದ ರಾಶಿಯನ್ನು ಮಾಡಿದನು". ಕತೆ ಹೀಗೆ ಮುಂದುವರೆಯುತ್ತದೆ.

ಹೀಗೆ 'ಚಾಣಾಕ್ಷ ರಿಸಿ' ಕಥೆಯಲ್ಲಿ ಸಿಗುವ ಹಲವಾರು ವಿವರಗಳು ನಮ್ಮ ಪೂರ್ವಿಕರಿಗೆ ರಸವಿದ್ಯೆ ಗೊತ್ತಿತ್ತು ಎಂಬುದಕ್ಕೆ ಸೂಚನೆ ನೀಡುತ್ತವೆ. ಆದರೆ ಆಧುನಿಕ ಶಿಕ್ಷಣ ಪಡೆದ ನಮ್ಮ ಜನ ದೇಶದ ಎಲ್ಲ ಪ್ರಾಚೀನ ಜ್ಞಾನಪರಂಪರೆಯನ್ನೂ ಅನುಮಾನದಿಂದಲೇ ನೋಡಿದರು. ವಿದೇಶಿ ಜ್ಞಾನದಲ್ಲಿನ ಎಲ್ಲವನ್ನೂ, ಅಲ್ಲಿ ಏನಿಲ್ಲದಿದ್ದರೂ, ಬಿಗಿದಪ್ಪಿಕೊಂಡರು. "ಹೊಸದರಲ್ಲಿ ಎಲ್ಲವೂ ಇಲ್ಲ, ಹಳೆಯದರಲ್ಲಿ ಏನೂ ಇಲ್ಲದಿಲ್ಲ" ಎಂಬ ಮಾತು ಮನನೀಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಪರಂಪರಾಗತ ಜ್ಞಾನವನ್ನು ಮುಕ್ತ ಮನಸ್ಸಿನಿಂದ ನೋಡಬೇಕಾದುದು ಅಗತ್ಯ.

**ಡಾ. ಎಂ.ಎನ್. ನಂದೀಶ್ ಹಂಚೆ**

ಪ್ರವಚನಸಾರ

# ಜ್ಞಾನಲಾಂದ್ರ

ಶ್ರೀ ಸಿದ್ಧೇಶ್ವರ ಸ್ವಾಮಿಗಳು

ಚಿಂತನೆ ಮನಸ್ಸಿಗೆ ಮುದವನ್ನು ಕೊಡುತ್ತದೆ. ನಮಗೆ ವಸ್ತು ಪ್ರಿಯವಾದಷ್ಟೂ ಆ ವಸ್ತುವಿನ ಭಾವನೆ, ನೆನಹು, ಆಲೋಚನೆ ಹೆಚ್ಚು ಸುಖಕರ. ಎಂತಲೇ ಮನುಷ್ಯನಿಗೆ ಚಿಂತನೆ ಇಷ್ಟ. ವಸ್ತುಗಳ ಚಿಂತನೆ ಅವನಿಗೆ ನಿಸರ್ಗಸಿದ್ಧ. ಅದರ ಸುಖ ಅವನಿಗೆ. ವಿಷಯಗಳ ಚಿಂತನ ಹಾಗೂ ಸುಖಾನುಭವ ಅವನ ಜೀವನವನ್ನೆಲ್ಲಾ ವ್ಯಾಪಿಸುತ್ತದೆ. ವಿಷಯಗಳ ಧ್ಯಾನ ತಪ್ಪುವುದಿಲ್ಲ. ಕೇವಲ ಇರುವ ವಸ್ತು ಅಷ್ಟೇ ಅಲ್ಲ ಮರೆಯಾಗಿ ಹೋದ ವ್ಯಕ್ತಿ, ವಸ್ತುಗಳ ನೆನಹು ಕೂಡ ದುಃಖವೀಯುತ್ತದೆ. ಹೀಗೆ ಚಿಂತನೆಯಲ್ಲಿ ರಮಿಸುವುದೇ 'ಬದುಕು, ಸಂಸಾರ' ಮನುಷ್ಯನಿಗೆ. ಹೀಗಾಗಿ ಲೋಕದ ಚಿಂತನೆ ಮಾಡಿರಿ ಎನ್ನುವ ಪ್ರಶ್ನೆಯೇ ಇಲ್ಲ. ಬಾಲ್ಯದಿಂದಲೇ ಅದು ಆರಂಭ. ಸಾವಿನವರೆಗೂ ಸಾಗುತ್ತದೆ.

ವಿಷಯಗಳು ನಮ್ಮ ಸುತ್ತಲಿವೆ. ಮತ್ತೆ ಮತ್ತೆ ನೋಡಲು, ಕೇಳಲು, ಮುಟ್ಟಲು ದೊರೆಯುತ್ತವೆ. ಅವುಗಳ ನೆನಹು ಗಟ್ಟಿಗೊಳ್ಳುತ್ತದೆ. ಸಂತಸ ಸಾಗುತ್ತದೆ, ಅನಾಯಾಸವಾಗಿ. ಆದ್ದರಿಂದ ಲೌಕಿಕ ಚಿಂತನೆಗೆ ಪ್ರೋತ್ಸಾಹಿ ಸುವ ಪ್ರಶ್ನೆಯೇ ಇಲ್ಲ. ಅಲೌಕಿಕ (ಪಾರಮಾರ್ಥಿಕ) ಚಿಂತನೆ ಹಾಗಲ್ಲ. ಅದರಿಂದ ನಮಗೆ ಶಾಂತಿ ದೊರೆಯುವುದಾದರೂ ಅತ್ತ ನಮಗೆ ಉದಾಸೀನ. ಎಂದೇ ಈಗ ಭಗವಚ್ಚಿಂತನ! ತುಕಾರಾಮ ಸದಾ ದೇವಚಿಂತನಾಶೀಲ. ಅವನಿಗೇನೂ ಚಿಂತನೆ ಮಾಡು ಎಂದು ಹೇಳುವ ಅವಶ್ಯಕತೆ ಇಲ್ಲ. ಕುಳಿತರೂ ವಿಠಲ, ನಿಂತರೂ ವಿಠಲ, ನನಸು ಕನಸುಗಳಲ್ಲೆಲ್ಲಾ ವಿಠಲ!

ಒಂದು ಸಲ ಒಬ್ಬ ಪಂಡಿತ ಬಂದು ಹೇಳುತ್ತಾನೆ, "ತುಕಾರಾಮರೆ, ತಾವು ಸಂತರು. ತಮಗಾಗಿ ಶ್ರೇಷ್ಠವಾದ ಗ್ರಂಥ ಬಹಳ ದೂರದಿಂದ ತಂದಿದ್ದೇನೆ, ತಮಗೆ ಅರ್ಪಣ ಮಾಡಬೇಕು ಎಂದು. ಸ್ವೀಕರಿಸಿ." ವಿನಂತಿಸಿಕೊಂಡ. ಆಗ ತುಕಾರಾಮರು ಹೇಳಿದರು "ನೋಡಿ, ನನಗೆ ಈ ಗ್ರಂಥ ಓದಲಿಕ್ಕಾಗದು. ಸ್ವೀಕರಿಸಿ ಏನು ಮಾಡುವುದು? ತಾವೇ ಇಟ್ಟುಕೊಳ್ಳಿ." "ಏನು? ಇಂಥ ಪವಿತ್ರ ಗ್ರಂಥವನ್ನು ತಾವು ಓದಲು ಇಚ್ಛಿಸುವುದಿಲ್ಲವೆ?" ನುಡಿದ ಪಂಡಿತ ಅಚ್ಚರಿಯಿಂದ. "ಗೆಳೆಯನೆ, ಈ ಕಣ್ಣಿನಲಿ, ಈ ಹೃದಯದಲಿ ವಿಠಲ ತುಂಬಿದ್ದಾನೆ. ಬೇರೆ ಏನೂ ಒಳಗಿಳಿಯದು. ಅವಕಾಶವಿರದಷ್ಟು ಗಾಢವಾಗಿ ಒಳಗೆ ಆತ ನೆಲೆಸಿದ್ದಾನೆ. ನಾನೇನೋ ಓದಬೇಕು, ನಿಜ. ಆದರೇನು ಮಾಡಲಿ? ಒಳಗೆ ಸ್ಥಳವಿಲ್ಲ!"

ನಮ್ಮೆಲ್ಲರ ಸ್ಥಿತಿಯೂ ತುಕಾರಾಮನಂತೆಯೇ. ನಮ್ಮ ಕಣ್ಣು, ಹೃದಯ ಎಲ್ಲ ತುಂಬಿದೆ! ಅವನಲ್ಲಿ ವಿಠಲ ತುಂಬಿದ್ದರೆ ನಮ್ಮಲ್ಲಿ ವಿಷಯ ತುಂಬಿದೆ! ಅವನಿಗಿಂತ ನಾವು ಶ್ರೇಷ್ಠ ಭಕ್ತರು. ಪ್ರಪಂಚ ಭಕ್ತರು. ಈಗ ಪಾರಮಾರ್ಥಿಕ ಅಭಿಚಿಂತನೆಗೆ ಅವಕಾಶ ಕಲ್ಪಿಸಿಕೊಂಡಿದ್ದೇವೆ. ಇದರ ರುಚಿ-ರಸ ನಮಗೆ ಒಗ್ಗಿದರೆ ನಮ್ಮ ಬದುಕೇ ಬದಲಿಸುತ್ತದೆ. ಚಿಂತನೆಯ ಅಮಲು ಏರಿದರೆ ನಡೆ ನುಡಿ ನೋಟ ಎಲ್ಲ ಬದಲು!

ಭಗವಚ್ಚಿಂತನ ಕೇಳುವುದೆಂದರೆ ಚಿಂತನರಸದ ರುಚಿ ನೋಡುವುದು. ಚಿಂತನದ ಪರಿಚಯ ಇಲ್ಲದಿದ್ದರೆ ಅದು ಕಠಿಣವೆನಿಸುತ್ತದೆ. ಅರುಚಿ ಎನಿಸುತ್ತದೆ. ಆದುದರಿಂದ ರುಚಿಗೊಳಿಸುವ ಅವಶ್ಯಕತೆ. ಆತ್ಮಚಿಂತನ, ಆತ್ಮಜ್ಞಾನ ಅಪರಿಚಿತವಾದುದರಿಂದ ಕಠಿಣ. ಆದರೆ ಅದು ನಿಜವಾಗಿ ಅತಿ ಸುಲಭ. ಜೀವನದ ದರ್ಶನ ಅದು. ಈ ಮಾರ್ಮಿಕ ವಚನ ನೋಡಿ:

ಸಂಸಾರವೆಂಬುದೊಂದು ಗಾಳಿಯ ಸೊಡರು
ಸಿರಿಯೆಂಬುದೊಂದು ಸಂತೆಯ ಮಂದಿ ಕಂಡಯ್ಯಾ!
ಇದ ನೆಚ್ಚಿ ಕೆಡಬೇಡ ಸಿರಿಯೆಂಬುದ!
ಮರೆಯದೆ ಪೂಜಿಸು ನಮ್ಮ ಕೂಡಲಸಂಗಮದೇವನ

ಎಲ್ಲರಿಗೂ ಗೊತ್ತಿರುವ, ಸದೈವ ಸತ್ಯವಾದ ತಿಳಿ ಮಾತು ಇಲ್ಲಿದೆ! ಬಾಳ ದರ್ಶನವಿದು! ಇದನ್ನೇ ತರ್ಕಬದ್ಧವಾದ ರೀತಿಯಲ್ಲಿ ಪಾಂಡಿತ್ಯ ಭಾಷೆಗಿಳಿಸಿದರೆ ಕಠಿಣ ಶಾಸ್ತ್ರವಾಗಿ ಕಾಣುತ್ತದೆ.

ಪರಮಾರ್ಥ ಕ್ಷೇತ್ರದಲ್ಲಿ ಪ್ರವೇಶಿಸಲು, ಮಹದ ಅನುಭಾವ ಹೊಂದಲು, ಸತ್ಯ ದರ್ಶಿಸಲು ತರ್ಕ, ವ್ಯಾಕರಣ ಮುಂತಾದುವುಗಳ ಅನಿವಾರ್ಯ ಆವಶ್ಯಕತೆಯೇನಿಲ್ಲ! ತೆರೆದ ಕಣ್ಣು, ಅರಳಿದ ಭಾವ, ವಿಕಸಿಸಿದ ಮನಸ್ಸು ಸಾಕು.

ಮಹಾಜ್ಞಾನಿ ಶಂಕರಾಚಾರ್ಯರು ಒಂದು ದಿನ ದಾರಿಯಿಂದ ಹೊರಟಿದ್ದರು. ಒಬ್ಬ ವೃದ್ಧ ಒಕ್ಕಲಿಗನನ್ನು ಕಂಡರು. ಹಾಗೇ ಮಾತನಾಡುತ್ತ "ನೀನು ಆಚಾರ್ಯ ಶಂಕರರ ಹೆಸರು ಕೇಳಿದ್ದೀಯಾ?" ಎಂದರು. ಆತ ನುಡಿದ "ಅಹುದು, ಕೇಳಿದ್ದೇನೆ. ಅವರನ್ನು ಕಾಣಬೇಕೆಂಬ ಇಚ್ಛೆ ಬಹು ದಿನಗಳಿಂದ ಅವರೊಡನೆ ಒಂದೆರಡು ಮಾತನಾಡುವ ಬಯಕೆ." ಆಗ ಆಚಾರ್ಯರು ನುಡಿದರು, "ನಾನೇ ಶಂಕರ. ನನ್ನನ್ನೇಕೆ ಕಾಣಬಯಸಿದ್ದೆ?" "ಸಂತೋಷ, ಆಚಾರ್ಯರೆ; ಲಕ್ಷಾಂತರ ಜನ ತಮ್ಮನ್ನು ಕೊಂಡಾಡುತ್ತಾರೆ. ತಮ್ಮ ಅದ್ವೈತ ವೇದಾಂತ ಮನೆಮಾತಾಗಿದೆ. ಘನ ವಿದ್ವಾಂಸರನ್ನೆಲ್ಲ ಸೋಲಿಸಿದ ಶ್ರೇಯ ಬೇರೆ. ಆಚಾರ್ಯರೆ ತಮ್ಮ ಆ ಮಹಾಜ್ಞಾನವನ್ನು ಅರಿವ ಹಂಬಲ. ಹೇಳಿ, ಎರಡು ವಾಕ್ಯದಲ್ಲಿ." ಆಚಾರ್ಯರು ಹೇಳಿದರು, "ನಿನಗೆ ತಿಳಿವಂತೆ ಹೇಳುವುದಾದರೆ, ಈ ಜಗತ್ತು, ಜೀವನ ಮಿಥ್ಯ. ದೇವನೊಬ್ಬನೇ ಸತ್ಯ. ಇದನ್ನು ತಿಳಿದರದೇ ಮುಕ್ತಿ."

"ಹಾಗೋ? ನಾನೇನೋ ಅದ್ಭುತ ಜ್ಞಾನ ನಿಮ್ಮದೆಂದುಕೊಂಡಿದ್ದೆ. ಈ ಜಗತ್ತು ಸುಳ್ಳು; ಬದುಕು ಒಂದು ಕನಸು. ಈ ಮಾತು ಯಾರಿಗೆ ಗೊತ್ತಿಲ್ಲ? ಈ ಸರ್ವವಿದಿತ ಸತ್ಯವರಿಯಲು ಅಷ್ಟೇಕೆ ಶ್ರಮಿಸಿದಿರಿ? ಜಗತ್ತೇ ಸುಳ್ಳಾದ ಮೇಲೆ ನಿಮ್ಮ ವಾದ-ವಿಜಯ ಹೇಗೆ ಸತ್ಯ? ಅದಕ್ಕಾಗಿ ಅಷ್ಟೇಕೆ ಛಲದಿಂದ ಹೋರಾಡಿದಿರಿ?"

ಆಚಾರ್ಯರನ್ನು ಆತನ ಮಾತು ಅಲುಗಾಡಿಸಿತು. "ಓ ವೃದ್ಧರೆ, ನಾನು ಬಾಲಕನಾಗಿದ್ದಾಗಲೇ ನೀವು ದೊರೆತಿದ್ದರೆ ನಾನು ಈ ಶಾಸ್ತ್ರೀಯ ಪ್ರಯಾಸ ಮಾಡುತ್ತಿರಲಿಲ್ಲ!" ಒಕ್ಕಲಿಗ ಹೇಳಿದ, "ಆಚಾರ್ಯರೆ, ಲೋಕದವರಿಗಾಗಿ ಶಾಸ್ತ್ರಗಳು, ತರ್ಕ ಚಿಂತನೆ ಏನೆಲ್ಲ ಬೇಕು. ಆ ದಿಸೆಯಲ್ಲಿ ನಿಮ್ಮ ಪ್ರಯಾಸವೇನೂ ವ್ಯರ್ಥವಲ್ಲ. ಇಷ್ಟೇ, ಒಂದು ಮಾತು ನೆನಪಿರಬೇಕು. ಈ ಶಾಸ್ತ್ರಾದಿಗಳು ನಿಮಗಲ್ಲ, ಲೋಕದವರಿಗೆ. ನಿಮಗಾಗಿ ಯಾವುದೂ ಬೇಕಿಲ್ಲ. ಸುತ್ತಮುತ್ತ ಕಣ್ತೆರೆದು ನೋಡಿದರೆ ಸತ್ಯದ ದರ್ಶನ ಸಹಜವಾಗಿಯೇ ಆಗುತ್ತದೆ. ಮುಳುಗುವ ಸೂರ್ಯನ ಕಂಡಾಗ, ಆರುವ ದೀಪ ನೋಡಿದಾಗ ಬದುಕಿನ ನಶ್ವರತೆಯ ದರ್ಶನವಾಗುತ್ತದೆ!"

ಎಲ್ಲವೂ ಕಾಲಾಂತರದಲ್ಲಿ ಮರೆಯಾಗುತ್ತದೆ; ಇದನ್ನು ಅರಿತರೆ ಮುಕ್ತನೇ! ನಾವೆಲ್ಲ ಮುಕ್ತರೇ. ಕಟ್ಟಿದ್ದೆಲ್ಲ ಬೀಳುತ್ತದೆ; ಹಚ್ಚಿದ್ದೆಲ್ಲ ಆರುತ್ತದೆ. ಬದುಕಿದ್ದೆಲ್ಲ ಸಾಯುತ್ತದೆ. ಆದರೂ ನಾವು ಕಟ್ಟಬೇಕು, ಹಚ್ಚಬೇಕು, ಬಾಳಬೇಕು! ಅದು ಮುಕ್ತಜೀವನ. ನಿಶ್ಚಿಂತ ಬಾಳು. ಇಂತು ಪರಮಾರ್ಥ ಜ್ಞಾನ ಸುಲಭ ಅರಿತರೆ. ಹಾಗೆ ನೋಡಿದರೆ ನಿಜವಾಗಿ ಪರಮಾರ್ಥ ಜ್ಞಾನಕ್ಕಿಂತ ಲೌಕಿಕ ಸಾಧನೆ ಕಠಿಣ. ಉದಾಹರಣೆಗಾಗಿ ಹಣ ಗಳಿಸುವುದು. ಬೇಕಾದಷ್ಟು ಬುದ್ಧಿವಂತರು ಇದ್ದರೂ ಹಣ ಗಳಿಸಬರದು. ಅದು ಕಲೆ. ಕೆಲವರಿಗೆ ಅವಗತ. ಅವರು ಬರಿಗೈಯಿಂದ ಬಜಾರಕ್ಕೆ ಹೋಗಿ ತುಂಬಿದ ಕೈಯಿಂದ ಮನೆಗೆ ಬರುತ್ತಾರೆ.

ತುಕಾರಾಮನಿಗೆ ಆ ಕಲೆ ಇಲ್ಲ. ಅವರ ಸಂಬಂಧಿಕನಾದ ಭಾವನು ತುಕಾರಾಮನಿಗೆ ಒಂದು ದಿವಸ ಹೇಳಿದ, "ಏನು ತುಕಾರಾಮರೆ, ದುಡಿಯದಿದ್ದರೆ ಹೇಗೆ? ನಾನು ಒಂದು ಅಂಗಡಿ ಹಾಕಿಕೊಡುತ್ತೇನೆ. ನೀವು ನಡೆಸಿಕೊಂಡು ಹೋಗಿ" ಎಂದ. ಆಗ ಈ ಮಾತು ಕೇಳಿ ತುಕಾರಾಮರು ಸಂತೋಷ ವ್ಯಕ್ತ ಮಾಡಿದರು. ಹೇಳಿದರು, "ನಿಮ್ಮ ಇಚ್ಛೆ ಇದ್ದರೆ ಆಯಿತು. ಅಂಗಡಿ ಹಾಕಿಕೊಡಿ." ಭಾವನು ಅಂಗಡಿ ಹಾಕಿಕೊಟ್ಟ. ತುಕಾರಾಮ ಅಂಗಡಿಯೊಳಗೆ ಕೂತ, ಭಜನೆ ಮಾಡುತ್ತ. ಭಾವನು ಬಂದು ಕೇಳಿದ, "ಏನಿದು? ಭಜನೆ ಏಕೆ?" "ಭಾವನೇ, ವ್ಯಾಪಾರ ಮುಗಿದೇಹೋಗಿದೆ. ಈಗ ಉಳಿದಿರುವುದು ಭಜನೆ ಮಾತ್ರ." ಭಜನೆಯ ಮಧ್ಯ ವ್ಯಾಪಾರ ಮರೆತ. ವ್ಯಾಪಾರ ನಿಂತುಹೋಯಿತು. ಮತ್ತೆ ತುಕಾರಾಮ ಅಂಗಡಿಯಿಂದ ಹೊರಗಾದ. ಬರಿಗೈಯಿಂದ ಪ್ರಪಂಚ ಮಾಡುವುದು ಕಠಿಣ! ದೇವರ ಕಾಣುವುದು ಸುಲಭ. ಪ್ರಪಂಚ ಮಾತ್ರ ಬಿಗಿ. ಈ ಆಧ್ಯಾತ್ಮ ಸುಲಭ, ಅದರಷ್ಟು ಕಷ್ಟಕರವಲ್ಲ. ನೋಡುವ ದೃಷ್ಟಿಯಲ್ಲಿ ಸ್ವಲ್ಪ ಬದಲಾದರೆ ಆಯ್ತು. ಆ ದೃಷ್ಟಿ ಬದಲಿಸಲು ಈಗ ಭಗವಚ್ಚಿಂತನ. ಅದು ದೀಪ, ಜ್ಞಾನದ ದೀಪ ಹೊತ್ತಿಸುತ್ತದೆ. ಆಗ ಸಾಂಸಾರಿಕ ತಾಪದ ಕೊನೆ.

ಹಿಂದಿನ ಕಾಲದಲ್ಲಿ ಒಬ್ಬ ಸಂತ ಇದ್ದ. ಅವನ ಹತ್ತಿರ ಒಬ್ಬ ಕುರುಡ ಬಂದ. 'ಸಂತರೆ, ನನಗೊಂದು ಲ್ಯಾಂಟ್ರನ್ ಕೊಡಿ' 'ಏಕೆ?' 'ಜನ ನನ್ನನ್ನು ಸರಿಯಾಗಿ ನೋಡಲಿ ಎಂದು. ಇಲ್ಲವಾದರೆ ನನ್ನ ಮೇಲೆ ಬೀಳುವ ಸಂಭವ!' ಸಂತ ಕೊಟ್ಟ. ಬಹಳ ಸಂತೋಷವಾಯಿತು ಕುರುಡನಿಗೆ. ಆತ ಅದನ್ನು ಹಿಡಿದುಕೊಂಡು ಹೊರಟ. ಬಹಳ ಚೆನ್ನಾಗಿತ್ತು ಅದು. ನಾಲ್ಕು ಹೆಜ್ಜೆ ಹೊರಟಿರಲಿಲ್ಲ ಒಬ್ಬ ಬಂದು ಮೈಮೇಲೆ ಬಿದ್ದ. ಆಗ ಕುರುಡ ನುಡಿದ, 'ಕಾಣಿಸೋದಿಲ್ಲವೆ? ನಿನ್ನಂಥವರಿಗಾಗಿಯೇ ಈ ಲ್ಯಾಂಟ್ರನ್ ಹಿಡಿದು ಹೊರಟುದು! ಆದರೂ ಕಾಣಲಿಲ್ಲ?'

'ನಿನ್ನ ಲಾಂದ್ರ ಚೆನ್ನಾಗಿದೆ; ಆದರೇನು ಅದರೊಳಗೆ ದೀಪವಿಲ್ಲವಲ್ಲ?'

'ಓ ಹೀಗೋ? ನಾನು ದೀಪ ಹೊತ್ತಿಸ ಮರೆತೆ.' ಮತ್ತೆ ಹೊತ್ತಿಸಿಕೊಂಡು ಹೊರಟ. ನಾಲ್ಕು ಹೆಜ್ಜೆ ಹೋಗಿರಬೇಕು ಮತ್ತೆ ಒಬ್ಬ ಮೈಮೇಲೆ ಬಂದು ಬಿದ್ದ. ಅವನಿಗೆ ಆಶ್ಚರ್ಯ ಆಯಿತು. 'ದೀಪ ಆರಿದೆಯೋ ಅಥವಾ ನಿನಗೆ ಕಾಣಲಿಲ್ಲವೋ?' 'ಏನು ಮಾಡುವುದು ಹೇಳು? ಕಣ್ಣೇನೋ ಇದೆ; ನಿನ್ನ ಲಾಂದ್ರವೂ ಉರಿಯುತ್ತಿದೆ. ಆದರೆ ಆ ಕ್ಷಣ ಕಣ್ಣು ಮುಚ್ಚಿದ್ದೆ!' ಇದ್ದವರು ಕಣ್ಣು ಮುಚ್ಚಿದ್ದಾರೆ; ಯಾರು ಕಣ್ಣು ತೆರೆದಿದ್ದಾರೆ ಅವರಿಗೆ ದೀಪ ಇಲ್ಲ. ಇವನಿಗೆ ದೀಪ ಇದೆ, ಕಣ್ಣಿಲ್ಲ! ಏನು ವಿಚಿತ್ರ ಜೀವನ! ದೀಪ ಉರಿಯಬೇಕು. ಕಣ್ಣು ತೆರೆದಿರಬೇಕು. ಆಗ ಯಾರೂ ಮೈಮೇಲೆ ಬಂದು ಬೀಳುವುದಿಲ್ಲ. ಸುರಕ್ಷಿತತೆ ಇರುತ್ತದೆ.

ಹಾಗೆ ನಮಗೆ ಕಾಣದಿದ್ದರೂ ಚಿಂತೆ ಇಲ್ಲ. ನಮ್ಮ ಕೈಯೊಳಗೆ ಈ ಚಿಂತನ ದೀಪ ಇರಬೇಕು. ಭಗವತ್ ಚಿಂತನೆ ಎಂಬ ದೀಪ! ಅಂದರೆ, ಕನಿಷ್ಠ ಕಣ್ಣು ತೆರೆದವರು ನಮ್ಮ ಮೈಮೇಲೆ ಬಂದು ಬೀಳುವುದಿಲ್ಲ. ಸಂತನು ಜ್ಞಾನಲಾಂದ್ರ (ಜ್ಞಾನಗ್ರಂಥ) ಕೊಡುತ್ತಾನೆ. ಅದರಲ್ಲಿ ಅನುಭವದ ದೀಪ! ಅದನ್ನು ಹತ್ತಿಸಿಡುತ್ತಾನೆ.

ಕೆಲವರು ಅವಸರದಲ್ಲಿ ಪುಸ್ತಕಲಾಂದ್ರ ತೆಗೆದುಕೊಂಡು ಹೊರಟೇಬಿಡುತ್ತಾರೆ. ಜೀವನದಲ್ಲಿ ಪತಿತರಾಗುತ್ತಾರೆ. ಈ ಕುರುಡನಿಗೆ ವೇಳೆ ಇರಲಿಲ್ಲ. ದೀಪ ಹಚ್ಚಿಕೊಳ್ಳುವಷ್ಟು ವ್ಯವಧಾನ ಇರಲಿಲ್ಲ. ಹೀಗೇ ಹೊರಟಿದ್ದ. ಎಷ್ಟೋ ಸಲ ಶಾಸ್ತ್ರ ಕಲಿಯುವ ಅವಸರದಲ್ಲಿ ಜ್ಞಾನ ದೀಪ ಹತ್ತಿದೆಯೇ ಇಲ್ಲವೇ ನೋಡುವುದೇ ಇಲ್ಲ. ಶಾಸ್ತ್ರ, ಶಾಸ್ತ್ರ ವಚನ ನಿಧಾನವಾಗಿ ಚಿಂತಿಸಬೇಕು. ಅದರಿಂದ ಕಾಲಾಂತರದಲ್ಲಿ ಬೆಳಕು ಮೂಡುತ್ತದೆ.

ಭಗವಚ್ಚಿಂತನ ಸಾವಕಾಶವಾಗಿ ನಡೆಯಬೇಕಾಗುತ್ತದೆ. ಅದರಿಂದಾಗಿ ಮನಸ್ಸು ನಿರ್ಮುಕ್ತಗೊಳ್ಳುತ್ತದೆ. ಕಷ್ಟ ನಷ್ಟ ಏನೇ ಬಂದರೂ ಅದರ ಪ್ರಪಾತಕ್ಕೆ ಮನಸ್ಸು ಸಿಕ್ಕಿಬೀಳುವುದಿಲ್ಲ. ಎಡವುದಿಲ್ಲ. ಕಲ್ಲು ಕಾಣದಿದ್ದರೆ ಗೃಹಸ್ಥ ಏನು? ಸಂನ್ಯಾಸಿ ಏನು? ಎಡವುವವರೇ. ಜೀವನದಲ್ಲಿ ಕಷ್ಟ ನಷ್ಟ ಅನಿವಾರ್ಯ, ಎಲ್ಲರಿಗೂ. ಆದರೆ ಭಗವಚ್ಚಿಂತನದ ದೃಷ್ಟಿ ತೆರೆದಿದ್ದರೆ ಕಷ್ಟನಷ್ಟಗಳ ದುಷ್ಪರಿಣಾಮವಿರದು.

ಆದ್ದರಿಂದ ಚಿಂತನ ಎಲ್ಲರಿಗೂ ಅವಶ್ಯ. ಅದು ದಿನದಿನವೂ ಸಾಗಬೇಕು. ಪೂಜೆ ಆರಾಧನೆಗಿಂತ ಅದು ಮಹತ್ವದ್ದು. ಶಾಸ್ತ್ರ ಅಧ್ಯಾಪನ ಅಧ್ಯಯನಾದಿಗಳ ಉದ್ದೇಶ ಚಿಂತನೆ. ಸಕಲ ಸಾಧನೆಗಳ ಉದ್ದೇಶ ಚಿಂತನೆ. ಮತ ಸ್ಥಾಪನೆಯೂ ಅಲ್ಲ; ಮಂಡನೆಯೂ ಅಲ್ಲ. ವಿಶ್ವವನ್ನು ನಮ್ಮ ನಮ್ಮ ಮತೀಯ ಚೌಕಟ್ಟಿಗೆ ಸಿಕ್ಕಿಸುವುದು ಬಹು ಕಷ್ಟ. ಅದು ಸುಖಕರ ಕಾರ್ಯವೇನೂ ಅಲ್ಲ. ಸತ್ಯಕ್ಕೆ ನೂರು ಮುಖಗಳು. ನೂರು ಸೌಂದರ್ಯ. ಎಲ್ಲ ಸರಿ. ಕೇಳಿ ನೋಡಿ ಭಾವಿಸಿ ಆನಂದಿಸುವುದು. ಇದಕ್ಕಾಗಿ ಭಗವಚ್ಚಿಂತನ.

□

ಅನಾದಿಪರಶಿವನಿಂದ ಸಾಕಾರಲೀಲೆಯ
ಧರಿಸಿ, ಮರ್ತ್ಯಕ್ಕವತರಿಸಿ
ಶ್ರೀಗುರುಲಿಂಗಜಂಗಮದಿಂದ
ವೇಧಾ–ಮಂತ್ರ–ಕ್ರಿಯಾದೀಕ್ಷೆಯ ಪಡೆದು
ಲಿಂಗಾಂಗಸಮರಸಾನಂದವನರಿದು
ತನ್ನ ಸ್ವಸ್ವರೂಪು ನಿಲುಕಡೆಯ ತಿಳಿದು
ಸತ್ಯ–ಸದಾಚಾರ–ಸನ್ಮಾರ್ಗದ ಗೊತ್ತನರಿದು
ಪಂಚಸೂತಕಪಾತಕ, ಅರುವೈರಿ, ಅಷ್ಟಮದಂಗಳಡಿಮೆಟ್ಟಿ
ಆಚರಿಸುವ ಭಕ್ತಗಣಂಗಳು
ಇಂತಿಷ್ಟು ಸತ್ತುಚಿತ್ತಾನಂದನಿತ್ಯಪರಿಪೂರ್ಣ ಅವಿರಳಾನಂದ
ನಿಜಾಚರಣೆಯನರಿಯದ
ಗುರುವಾಗಲಿ, ಲಿಂಗವಾಗಲಿ, ಜಂಗಮವಾಗಲಿ
ಶರಣನಾಗಲಿ, ಭಕ್ತನಾಗಲಿ, ಪ್ರಸಾದಿಯಾಗಲಿ
ಅವರಿಂದ ಪಾದೋದಕಪ್ರಸಾದವ ಕೊಂಡರೆ
ಯಮದಂಡಣೆಗೊಳಗು ನೋಡಾ
ಅಂತ್ಯದಲ್ಲಿ ರೌರವ, ಎಂದಾತನಂಬಿಗರ ಚೌಡಯ್ಯ.

**– ಅಂಬಿಗರ ಚೌಡಯ್ಯ**

# ಕರ್ಮಯೋಗಿ

**ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮಿಗಳು**
ಶ್ರೀಕ್ಷೇತ್ರ, ಶ್ರವಣಬೆಳಗೊಳ ಜೈನಮಠ

ಶ್ರೀ ಸುತ್ತೂರು ಮಠದ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು 'ಇನ್ನಿಲ್ಲ' ಎಂಬ ವಾರ್ತೆ ಕೇಳಿ ನಮ್ಮಿಬ್ಬರ ಮನಸ್ಸಿಗೆ ಆಘಾತವಾಯಿತು. ಆ ಮಾತನ್ನು ನಂಬಲಿಕ್ಕೇ ಆಗಲಿಲ್ಲ. ಕಳೆದ ಮೂವತ್ತು ವರ್ಷಗಳಿಂದ ಅವರ ದರ್ಶನಾಶೀರ್ವಾದ ಪಡೆಯುತ್ತ ಬಂದ ನಮ್ಮ ಪಾಲಿಗೆ ಅವರು ಗುರು, ತಂದೆ ಹಾಗೂ ಅಂತಃಕರುಣೆಯ ತಾಯಿ ಆಗಿದ್ದರು. ಹೋದ ವರುಷ ಡಿಸೆಂಬರ್‌ನಲ್ಲಿ ವಿಶ್ವಕನ್ನಡ ಸಮ್ಮೇಳನಕ್ಕೆ ಮೈಸೂರಿಗೆ ಹೋದಾಗ ಪೂಜ್ಯರ ದರ್ಶನ ಪಡೆದೆವು. ಪ್ರಸಾದರೂಪ ಮೃಷ್ಟಾನ್ನ ಭೋಜನ ಮಾಡಿದೆವು, ಶ್ರೀಗಳವರ ಆಶೀರ್ವಾದ ಪಡೆದೆವು. ನಾಲ್ಕು ದಿನ ಇದ್ದು ವಿಶ್ರಾಂತಿಪಡೆದು ಹೋಗಿರಿ ಎಂದು ತಾಯಿವಾತ್ಸಲ್ಯದಿಂದ ಹೇಳಿದ ಶ್ರೀಗಳವರು ಇನ್ನಿಲ್ಲ ಎಂಬ ನೋವು ಮರೆಯಲಾರದಂತಹದು. ಆದರೆ ಅಂತಹ ತಪೋನಿಷ್ಠ ಮಹಾಚೇತನ ನಮ್ಮೆಲ್ಲರಿಗೆ ಮಾರ್ಗದರ್ಶಿಯಾಗಿರಬಲ್ಲದೆಂಬ ಆತ್ಮವಿಶ್ವಾಸ ನನ್ನದು.

ದುಂಡುಮುಖ; ಭಕ್ತಿ, ಜ್ಞಾನ, ವೈರಾಗ್ಯಗಳ ಸಂಕೇತದಂತೆ ಅವರ ಹಣೆಯಲ್ಲಿ ಸದಾ ಶೋಭಿಸುವ ಭಸ್ಮ; ಆಧ್ಯಾತ್ಮ ತೇಜಸ್ಸಿನಿಂದ ಕಂಗೊಳಿಸುವ ಕಣ್ಣುಗಳು, 'ಶಿಶು ಕಂಡ ಕನಸಿನಂತಹ ಮಂದಸ್ಮಿತ ವದನ 'ಯಾರೇ ಅವರ ದರ್ಶನಕ್ಕೆ ಹೋದರೂ ಇವನಾರು?' ಎಂದು ಎಂದೂ ಕೇಳಲಿಲ್ಲ. 'ಇವನಮ್ಮವ' ಎಂಬ ಶ್ರೀಗಳವರ ವಿಶಾಲ ಮನೋಭಾವನೆ ಅವರನ್ನು ನಿಜವಾದ ಜಗದ್ಗುರುವನ್ನಾಗಿಸಿತ್ತು. ಸದಾ ಸಕಲ ಜೀವಾತ್ಮರಿಗೆ ಲೇಸನ್ನು ಬಯಸಿದ ಮಹಾನುಭಾವರವರು.

ಶ್ರೀ ಮಾಳವಾಡರು ಬಸವೇಶ್ವರ ಅಷ್ಟಶತಮಾನೋತ್ಸವ ಕಾಲಕ್ಕೆ 'ಬಸವೇಶ್ವರ' ಗ್ರಂಥದ ಸಂಪಾದನಾಕಾರ್ಯಕ್ಕಾಗಿ ಸುತ್ತೂರು ಮಠದಲ್ಲಿ 15 ದಿನವಿದ್ದರು. ಆಗ ಶ್ರೀಗಳವರೊಂದಿಗೆ ಆತ್ಮೀಯತೆ ಬೆಳೆದು ಬಂದಿತು. ಆಗ ಶ್ರೀಗಳವರು ಬಹುಶಃ ಪ್ರತಿನಿತ್ಯವೂ ಅರಮನೆಗೆ ಹೋಗಿ ರಾಜಕುಟುಂಬದವರಿಗೆ ಆಧ್ಯಾತ್ಮಿಕ ಸಾಂತ್ವನ ಒದಗಿಸುತ್ತಿದ್ದರಂತೆ. ಕೆಲವರ್ಷಗಳ ನಂತರ ನಾವಿಬ್ಬರೂ ಪುಟ್ಟ ವಿಜಯಾ, ಚೆನ್ನಬಸವರೊಂದಿಗೆ ನಾಲ್ಕುದಿನ ಮಠದಲ್ಲಿ ವಾಸವಾಗಿದ್ದೆವು. ಆಗ ಶ್ರೀಗಳವರು ಒಂದು ದಿನ ತಮ್ಮ ಕಾರು ಕೊಟ್ಟು ಶಂಭುಲಿಂಗನ

ಬೆಟ್ಟ, ಮಾದೇಶ್ವರ ಬೆಟ್ಟ, ಸುತ್ತೂರು ನೋಡಿ ಬರುವ ಏರ್ಪಾಡನ್ನು ಮಾಡಿದರು. ಊಟದ ತೊಂದರೆಯಾಗಬಾರದೆಂದು ಅಡಿಗೆಗೆ ಮಾರ್ಗದರ್ಶನಕ್ಕೆ ಶಿವಣ್ಣನನ್ನು ಕಳಿಸಿದರು. ಆ ಪವಿತ್ರ ಸ್ಥಾನಗಳನ್ನು ನೋಡಿ ಧನ್ಯತೆಯ ಭಾವ ನಮ್ಮಲ್ಲಿ ಮೂಡಿತು. ಆ ಪ್ರವಾಸ, ಶ್ರೀಗಳವರ ಪ್ರೀತಿ ವಾತ್ಸಲ್ಯ ಇನ್ನೂ ನಮ್ಮಿಬ್ಬರ ಮನದಲ್ಲಿ ಬರುವ ಹಲವಾರು ಹಳ್ಳಿಗಳಲ್ಲಿ ಪೂಜ್ಯರು ನಡೆಸುತ್ತಿದ್ದ ಶಾಲೆಗಳು ಪ್ರಸಾದನಿಲಯಗಳು ಪೂಜ್ಯರ ಶಿಕ್ಷಣಪ್ರೇಮಕ್ಕೆ ಸಾಕ್ಷಿಯಾಗಿ ನಿಂತಿವೆ.

ಗೋಲಿಗುಂಡು, ಬೆಣಿಫಣಿ ಆಡುವ ಬಾಲ್ಯದ 12ನೆಯ ವರುಷಕ್ಕೆ ಸುತ್ತೂರು ಪೀಠದ ಅಧಿಕಾರಸ್ಥರಾದ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ತಮ್ಮ ಗುರುಗಳಾದ ಜಗದ್ಗುರು ಶಿವರಾತ್ರೀಶ್ವರರ ನೆರಳಿನಂತೆ ಬಾಳಿದರು. ತಪೋನಿಷ್ಠರೂ, ಸದಾ ಕಾರ್ಯನಿರತರೂ, ಜನಸುಖ ಬಯಸುತ್ತಿದ್ದವರೂ ಆದ ಆ ಶ್ರೀಗಳವರು ಕೋಟಿ ಕೋಟಿ ಪಂಚಾಕ್ಷರಿ ಮಂತ್ರ ಬರೆದು, ಮಂತ್ರ ಮಹರ್ಷಿ ಎಂದು ಖ್ಯಾತರಾದರು. ಅಂಥವರ ಪ್ರೀತಿ ವಿಶ್ವಾಸ ಗಳಿಸಿದರು. ಆ ಹಿರಿಯ ಜಗದ್ಗುರುಗಳವರು ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರಿಗೆ ತಮ್ಮ ತಪೋಶಕ್ತಿಯನ್ನೇ ಧಾರೆ ಎರೆದರು. ಸ್ವಾಮಿ ವಿವೇಕಾನಂದರಿಂದ ರಾಮಕೃಷ್ಣ ಪರಮಹಂಸರ ಹೆಸರು ವಿಶ್ವವ್ಯಾಪಿಯಾದಂತೆ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಅನ್ನದಾಸೋಹ, ಜ್ಞಾನದಾಸೋಹದ ಮೂಲಕ ಸುತ್ತೂರು ಶ್ರೀಮಠದ ಕೀರ್ತಿ ಎಲ್ಲೆಡೆ ಹರಡುವಂತೆ ಮಾಡಿದರು. ಅವರ ಪ್ರಸಾದನಿಲಯದಲ್ಲಿದ್ದು ಶಿಕ್ಷಣ ಪಡೆದ ನೂರಾರು ಜನ ಪ್ರತಿಭಾವಂತರು ಕನ್ನಡನಾಡಿನ ಗಣ್ಯ ವ್ಯಕ್ತಿಗಳಾಗಿದ್ದಾರೆ. ಗುರುಶಿಷ್ಯರಿದ್ದರೆ ಧಾರವಾಡದ ಮೃತ್ಯುಂಜಯಪ್ಪಗಳಂತೆ, ಮಹಾಂತ ಸ್ವಾಮಿಗಳಂತಿರಬೇಕು. ಜಗದ್ಗುರು ಶಿವರಾತ್ರೀಶ್ವರರು ಹಾಗೂ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳಂತಿರಬೇಕು ಎಂಬ ನಾಣ್ಣುಡಿಯಂತೆ ಈ ಇಬ್ಬರೂ ಮಹಾಸ್ವಾಮಿಗಳು ಬಾಳಿಬೆಳಗಿದರು. ಹಿರಿಯ ಸ್ವಾಮಿಗಳು ತೋರಿದ ಭಕ್ತಿ, ಜ್ಞಾನ, ವೈರಾಗ್ಯ ಮಾರ್ಗದಲ್ಲಿ ಸಾಗುತ್ತಾ, ಅನ್ನದಾಸೋಹ, ಜ್ಞಾನದಾಸೋಹವನ್ನು ಬೆಳೆಸುತ್ತ ನಾಡಿಗೇ ಬೆಳಕಾದರು. 'ಅರ್ಚನ' ಅವರ 70ನೇ ವರ್ಧಂತಿ ಸಂದರ್ಭದಲ್ಲಿ ಅರ್ಪಿಸಿದ ಸಂಭಾವನಾ ಗ್ರಂಥ ಅವರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಂತಿದೆ.

ನಾವಿಬ್ಬರೂ, ಕರ್ನಲ್ ತಣಬರಗಿಮಠ ದಂಪತಿಗಳು ಮತ್ತೊಂದು ಸಲ ಮೈಸೂರಿಗೆ ಹೋದಾಗ ಶ್ರೀಮಠದಲ್ಲಿ ಎರಡು ದಿನ ಇದ್ದೆವು. ಆಗ ಶ್ರೀಗಳವರಿಗಿದ್ದ ಆಧ್ಯಾತ್ಮ ಚಿಂತನೆ, ಲೋಕಚಿಂತನೆಗಳ ಆಳದ ಅನುಭವವಾಯಿತು. ಈ ಪೂಜ್ಯರ ಮೂಲಕ ನಮಗೆ ಮೈಸೂರು ಪಂಚಗವಿಮಠದ ಮಹಾಮೇಧಾವಿ ಶ್ರೀ ಗೌರೀಶಂಕರ ಮಹಾಸ್ವಾಮಿಗಳವರ ದರ್ಶನ ಒದಗಿಬಂದಿತ್ತು. ಪ್ರೊ. ಮಲ್ಲೇದೇವರು ಧಾರವಾಡದಲ್ಲಿ ಕಟ್ಟಿಸಿದ ಕಟ್ಟಡದ ಗೃಹಪ್ರವೇಶಕ್ಕೆ ಜಗದ್ಗುರುಗಳವರು ಆಗಮಿಸಿದ್ದರು. ಆಗ ನಮ್ಮ 'ಪ್ರಶಾಂತ'ಕ್ಕೂ ಆಗಮಿಸಿದ್ದರು. ಆ ಸಂದರ್ಭದಲ್ಲಿ ಕಲ್ಯಾಣನಗರದ ಸೋದರಿಯರು ಹೇಳಿದ ಭಕ್ತಿಗೀತೆಗಳನ್ನು ಕೇಳಿ

ಆನಂದಿಸಿದರು; ತುಂಬು ಹೃದಯದಿಂದ ಆಶೀರ್ವದಿಸಿದರು. ಹೀಗೆ ನೆನಪಿನ ಕಣಜದಿಂದ ಒಂದೊಂದೇ ನೆನಪು ಹೊರ ಬರುತ್ತಿವೆ.

ಪೂಜ್ಯ ಜಗದ್ಗುರುಗಳವರು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಿ ಪ್ರಥಮ ಸಮ್ಮೇಳನದ ಏರ್ಪಾಡು ಕೈಕೊಂಡಿದ್ದರು. ಆ ಸಮ್ಮೇಳನಕ್ಕೆ ಮಾಳವಾಡರು ಬರಲೇಬೇಕೆಂದು ಆಮಂತ್ರಣ ಕಳಿಸಿದರು. ಇತ್ತೀಚೆಗೆ ಯಾವ ಕಾರ್ಯಕ್ರಮಕ್ಕೂ ಒಪ್ಪದ ಮಾಳವಾಡರು ಶ್ರೀಗಳವರ ಪ್ರೀತಿ, ವಾತ್ಸಲ್ಯಕ್ಕೆ ಮಣಿದು ಒಪ್ಪಿ ಕೊಂಡರು. ಅವರು ಭಾಷಣದ ಸಿದ್ಧತೆ ನಡೆಸಿದಾಗಲೇ ಶ್ರೀಗಳವರು ಭೌತಿಕವಾಗಿ ನಮ್ಮೊಂದಿಗಿಲ್ಲ ಎಂಬ ಸಮಾಚಾರ ನಮ್ಮನ್ನು ದಿಗ್ಭ್ರಾಂತ ಗೊಳಿಸಿತು. ತಮ್ಮ ಭಾಷಣ ಸಿದ್ಧಗೊಳಿಸಿದ ಮಾಳವಾಡರು ಅದು ಶ್ರೀಗಳವರ ಸ್ಮೃತಿಗೆ ಅರ್ಪಿತವೆಂದು ಭಾವಿಸಿದರು. ನಮ್ಮೆಲ್ಲರ ಮನದಲ್ಲಿ ಜಗದ್ಗುರುಗಳವರ ನೆನಪು ಸದಾ ಹಚ್ಚಹಸಿರಾಗಿದೆ. ನಾವೆಲ್ಲ ಅವರ ಕೃಪಾಶೀರ್ವಾದದ ಹೊನಲಲ್ಲಿ ಬಾಳೋಣ.

□

ಗುರುಕಾರುಣ್ಯವ ಪಡೆದು
ಲಿಂಗದೊಳವಗ್ರಾಹಕನಾಗದೆ
ಅಂಗಲಿಂಗ, ಪ್ರಾಣಲಿಂಗ,
ಆತ್ಮಲಿಂಗಸಂಬಂಧದ ವಿಚಾರವಿಲ್ಲದೆ
ಬರಿಯ ಜ್ಞಾನಯೋಗವೆಂಬ
ಶೂನ್ಯದನುಭಾವಿಗೆ ಗುರುಭಕ್ತಿ ಇಲ್ಲ
ಗುರುಭಕ್ತಿ ಇಲ್ಲವಾಗಿ ಲಿಂಗಭಕ್ತಿ ಇಲ್ಲ,
ಲಿಂಗಭಕ್ತಿಯಿಲ್ಲವಾಗಿ ಜಂಗಮಭಕ್ತಿ ಇಲ್ಲ
ಜಂಗಮಭಕ್ತಿ ಇಲ್ಲವಾಗಿ ಪ್ರಸಾದವಿಲ್ಲ
ಪ್ರಸಾದಪ್ರಸನ್ನವಿಲ್ಲವಾಗಿ ಮೋಕ್ಷವಿಲ್ಲ
ಇದು ಕಾರಣ
ಸದ್ಗುರು ಸಿದ್ಧಸೋಮನಾಥನಲ್ಲಿ ಗುರುಕರಜಾತರಾದ
ಲಿಂಗಾಂಗಸಂಬಂಧಿಗಳಪೂರ್ವವಯ್ಯಾ ಪ್ರಭುವೆ

**– ಅಮುಗಿದೇವಯ್ಯ**

# ಶಬರಶಂಕರ ವಿಲಾಸ ಟೀಕು : ದ್ವಿತೀಯಾಶ್ವಾಸ

ಸಿದ್ಧಾಂತಿ ಶಿವಶಂಕರ ಶಾಸ್ತ್ರಿಗಳು

(ಮುಂದುವರಿದಿದೆ)

ಚಂ॥ ಸುಳಿದುದು ಬಾಳೆ ನುಣ್ದೊಡೆಯನಪ್ಪುತ ಕಂಪನಮಂ ನಿಮಿರ್ಚಿ ಸಾ ।
ರ್ದೆಳವಿಸಿ ಗುಚ್ಛಮೆಂಬ ಮೊಲೆಯಂ ಮಧುಘರ್ಮಕಣಾಳಿಯಂ ಪದಂ ॥
ಗೊಳಿಸಿ ಲತಾಂಗಮಂ ಪದೆದು ಸೋಂಕಿ ನವಾಂಕುರರೋಮಹರ್ಷಮಂ ।
ಬಳಯಿಸಿ ತದ್ವನಸ್ಥಳಿಗೆ ಕಾಮುಕನಂತಿರೆ ಮಂದಮಾರುತಂ ॥ 50 ॥

**ಟೀಕೆ** ॥ ಮಂದಮಾರುತಂ – ಕಿರುಗಾಳಿಯು, ತದ್ವನಸ್ಥಳಿಗೆ – ತತ್, ಆ ವನ – ತೋಟದ, ಸ್ಥಳಿಗೆ – ಸ್ಥಳಕ್ಕೆ, ತಾನು, ಕಾಮುಕನಂತಿರೆ – ವಿಟಪುರುಷನ ಹಾಗಿರಲು, ಬಾಳೆ ನುಣ್ದೊಡೆಯನು – ಬಾಳೆಗಿಡದ ಹಾಗಿರುವ, ನುಣ್ದೊಡೆಯಂ – ನುಣ್ಣಗಿರುವ ತೊಡೆಯನ್ನು, ಅಪ್ಪುತ – ಆಲಿಂಗಿಸುತ, ಕಂಪನಮಂ – ಚಲನವನ್ನು, ಕಾಮಕಂಪಾವಸ್ಥೆಯನ್ನು, ನಿಮಿರ್ಚಿ – ಹುಟ್ಟಿಸಿ, ಸಾರ್ದು – ಬಳಿಸೇರಿ, ಗುಚ್ಛಮೆಂಬ – ಗೊಂಚಲೆಂಬ, ಮೊಲೆಯಂ – ಸ್ತನವನ್ನು, ಯೆಳವಿಸಿ – ಮರ್ದಿಸಿ, ಮಧುಘರ್ಮಕಣಾಳಿಯಂ – ಮಧುಚೈತ್ರಮಾದ, ಮಧು – ಪುಷ್ಪರಸವೆಂಬ, ಘರ್ಮಕಣ – ಬೆವರುಹನಿಗಳ, ಅಳಿಯಂ – ಸಾಲನ್ನು, ಪದಂಗೊಳಿಸಿ – ನೆಲೆಗೊಳಿಸಿ, ಲತಾಂಗಮಂ, ಲತಾ – ಬಳ್ಳಿಯ ಹಾಗಿರುವ, ಅಂಗಮಂ – ಮೈಯನ್ನು, ಪದೆದು – ಪ್ರೀತಿಸಿ, ಸೋಂಕಿ – ಸ್ಪರ್ಶಮಾಡಿ, ನವಾಂಕುರ – ಹೊಸ ಮೊಳಕೆಗಳೆಂಬ, ರೋಮಹರ್ಷಮಂ – ರೋಮಾಂಚವನ್ನು (ಸಂತಸದ ಗುಂಗುರ್ಕೂದಲನ್ನು) ಬಳಯಿಸಿ – ಬಳಸುವಂತೆ ಮಾಡಿ, ಸುಳಿದುದು – ತಿರುಗಿತು.

**ತಾ** ॥ ಕಿರುಗಾಳಿಯೇ ವಿಟಪುರುಷನು, ವನಮೇ ಕಾಮಿನಿ, ಅಲ್ಲಿ ಗಾಳಿ ಬೀಸಲು ವನಾವಯವಗಳು ಕಾಮಿನ್ಯವಯವಗಳ ಹಾಗೂ ಮಾರುತ ಪ್ರಚಾರವು ಕಾಮುಕನ ಉಪಭೋಗದ ಹಾಗೂ ಇತ್ತೆಂದು ಶೃಂಗಾರರಸದ ಸಂಭೋಗಾವಸ್ಥೆಯು ಬಣ್ಣಿಸಲ್ಪಟ್ಟಿದೆ. ಕ್ಲಿಷ್ಟಶ್ಲಿಷ್ಟರೂಪಕೋತ್ಪ್ರೇಕ್ಷಾಲಂಕಾರವು ॥ 50 ॥

ಚಂ॥ ನೆಗೆದೊಗೆದೇಳ್ವ ಬಾಳೆ ನೆಳೆಮುಂಚು ಸರೋಜ ರಜಃಪಿಶಂಗ ಮ ।
ಧ್ಯಗತ ತರಂಗಮಬ್ಜದಳ ಸಂಗಮಿಂದ್ರಶರಾಸನಂ ಪಯಃ ॥
ಖಗರುಲಿ ಘೋಷಮಾಗೆ ಗಿರಿಶೃಂಗ ತಟಾಹತಮಲ್ಲಿ ಬೀಳ್ದುದೋ ।
ಮುಗಿಲೆನೆ ದಂತಿ ದಾನ ರಸಮೇಚಕಿತಾಂಬುರಸಂ ವಿರಾಜಿಕುಂ ॥ 51 ॥

**ಟೀಕೆ** ॥ ನಗೆದು – ಒಗೆದು, ಹೊರಬಿದ್ದು, ಏಳ್ವ – ಏಳುತ್ತಿರುವ, ಬಾಳೆ – ಸಣ್ಣಮೀನೆ, ನೆಳೆಮಿಂಚು – ಏಳುವ ಮಿಂಚು, ಸರೋಜ – ತಾವರೆಯ, ರಜಃ – ಪುಡಿಯಿಂದ, ಪಿಶಂಗ – ಪಿಂಗಳವರ್ಣವಾದ, ಮಧ್ಯಗ – ಮಧ್ಯಭಾಗವಂ ಪೊಂದಿದ, ತರಂಗ – ಅಲೆಯು, ಅಬ್ಜದಳಸಂಗತಂ – ತಾವರೆಯ ಎಲೆಯಿಂದ ಕೂಡಿದೆ, ಇಂದ್ರಶರಾಸನಂ – ಶಕ್ರಚಾಪವೂ, ಪಯಃಖಗರ – ನೀರುಹಕ್ಕಿಗಳ, ಉಲಿ – ಸಪ್ಪುಳೇ, ಘೋಷಂ – ಗುಡುಗು, ಆಗೆ – ಆಗುತ್ತಿರಲು, ಗಿರಿಶೃಂಗ – ಬೆಟ್ಟದ ಕೋಡುಗಲ್ಲಿನ, ತಟ – ಪುಟದಿಂದ, ಆಹತಂ – ಹೊಡೆಯಲ್ಪಟ್ಟದ್ದಾಗಿಯೂ, ದಾನರಸಮೇಚಕಿತಾಂಬುರಸಂ – ದಾನರಸ ಮದೋದಕದ ಹಾಗೆ, ಮೇಚಕಿತ – ಕಪ್ಪಾದ, ಅಂಬುರಸಂ – ನೀರುಳ್ಳ, ಮುಗಿಲ್ – ಮೇಘವು, ಬೀಳ್ದುದೋ – ಬಿತ್ತೋ, ಯೆನೆ – ಯೆಂಬಂತೆ, ದಂತಿ – ಆನೆಯು, ವಿರಾಜಿಕುಂ – ಬೆಳಗುವುದು.

**ತಾ** ॥ ಕೊಳವನ್ನು ವರ್ಣಿಸುತ್ತಾನೆ – ಕೊಳದಲ್ಲಿ ನೆಗೆವ ಮೀನೇ ಮಿಂಚು, ತಾವರೆಯ ಪುಪ್ಪುಡಿಯೂ ಎಲೆಯೂ ಕೂಡಿದ ಅಲೆಯೇ ಇಂದ್ರಚಾಪ, ಜಲಪಕ್ಷಿಘೋಷವೇ ಗುಡುಗು, ನೀರು ಕುಡಿಯಲ್ಬಂದ ಆನೆಯೇ ಮೇಘವು ಎಂಬಂತೆ ತೋರಿತು. ದಾನರಸದ ಹಾಗೆ ಕಪ್ಪುನೀರುಳ್ಳದ್ದು ಮೇಘ. ದಾನರಸವೆಂಬ ಕಪ್ಪು ನೀರುಳ್ಳದ್ದು ಅಥವಾ ಕಪ್ಪು ನೀರಿನ ಹಾಗಿರುವ ದಾನರಸವುಳ್ಳದ್ದು ದಂತಿ. ಅಲ್ಲಿ ಶ್ಲೇಷವು ರೂಪಕೋತ್ಪ್ರೇಕ್ಷಾಲಂಕಾರವು. ॥ 51 ॥

ಕಂ॥ ಸ್ಫುರಿತ ಶಿಳೀಮುಖಮುತ್ಪಲ ।
ಸರಕ್ತಕಂಜಾತಯುತಮುಪಾತ್ತಕಬಂಧಂ ॥
ಶರಭಂಗಾನ್ವಿತಮಿರದನು ।
ಕರಿಸಿದುದಾ ಬನದ ತಿಳಿಗೊಳಂ ಕೊಳುಗುಳಮಂ ॥ 52 ॥

**ಟೀಕೆ** ॥ ಸ್ಫುರಿತಶಿಲೀಮುಖಂ – ಹೊಳೆಯುವ ತುಂಬೆಗಳುಳ್ಳದ್ದು, ಬಾಣಗಳುಳ್ಳದ್ದು; ಉತ್ಪಲಸರಕ್ತಕಂಜಾತಯುತಂ : ಉತ್ಪಲ – ನೈದಿಲೆಯಿಂದಲೂ, ಸರಕ್ತ – ಕೆಂಬಣ್ಣದಿಂ ಕೂಡಿದ, ಕಂಜಾತ – ತಾವರೆಯಿಂದಲೂ, ಯುತಂ – ಸಹಿತವಾದ್ದು, ಉತ್ – ಅಧಿಕವಾದ ಮಾಂಸವೂ, ಸರಕ್ತ– ರಕ್ತದಿಂದ ಕೂಡಿದ, ಕುಜಾಂತಕ – ತಲೆಗಳ ಗುಂಪಿನಿಂದ, ಯುತಂ – ಕೂಡಿದ್ದು, ಉಪಾತ್ತ ಕಬಂಧಂ, ಉಪಾತ್ತ ಹೊಂದಲ್ಪಟ್ಟ, ಕಬಂಧಂ – ನೀರುಳ್ಳದ್ದು, ಉಪಾತ್ತ – ಬಳಿಯಲ್ಲಿ ಪಡೆಯಲ್ಪಟ್ಟ ಕಬಂಧಂ – ಮೋಡಗಳುಳ್ಳದ್ದು; ಶರಭಂಗಾನ್ವಿತಂ ಶರ – ಜಂಬುಹುಲ್ಲಿನಿಂದಲೂ, ಭಂಗ – ಅಲೆಗಳಿಂದಲೂ, ಅನ್ವಿತಂ – ಕೂಡಿದ್ದು, ಶರ – ಬಾಣಗಳ, ಭಂಗ – ಹತಿಯಿಂದ, ಅನ್ವಿತಂ – ಕೂಡಿದ್ದು, ಆದ, ಆ ವನದ – ಆ ತೋಟದ, ತಿಳಿಗೊಳಂ – ನಿರ್ಮಲ ಸರಸ್ಸು, ಕೊಳುಗುಳಮಂ – ಯುದ್ಧವನ್ನು, ಇರದೆ – ಬಿಡದೆ, ಅನುಕರಿಸಿದುದು – ಹೋಲಿತು.

**ತಾ** ॥ ಕೊಳವು ಕೊಳುಗುಳದ ಹಾಗಿತ್ತು, ಪೂರ್ಣಪದ್ಯಕ್ಕೆ ಕೊಳದಲ್ಲಿಯೂ ವರ್ತಿಸುವಂತೆ ಅರ್ಥಶ್ಲೇಷವಿರುವದರಿಂದ ಶ್ಲೇಷಮೂಲಕ ಉಪಮಾಲಂಕಾರವು. ವಾಚನಿಕಾರ್ಥ ಸಾದೃಶ್ಯವಲ್ಲದೆ ವಾಸ್ತವಿಕಾರ್ಥ ಸಾದೃಶ್ಯವಿಲ್ಲದ್ದರಿಂದ ಇದು ಕವಿಪ್ರೌಢೋಕ್ತಿಯೆನಿಸುವುದು.

ಚಂ॥ ಮಿಸುನಿಯ ಕಾಶೆವೋಲ್ ಮಿಸುಗೆ ಕಂಜರಜಂಪೊಳೆದೊಪ್ಪೆ ಬಾಳೆಗಣ್ಬಿ
ಸಜಮುಖಂ ಮರುಚ್ಚಳಿತಮೊಂದೆ ತರಂಗಭುಜಾಬ್ದ ಪಾಣಿ ರಂ ॥
ಈ ಪಚಲದಬ್ದಕೋಶಕಲುಚಮಲ್ಲಿ ಕದಕ್ಕದಿಸುತ್ತ ತೋರಕ ॥
ಣ್ಗೆ ಸರಸಿನರ್ತಿಪಂತೆಸೆದುದುದ್ಭ್ರಮರಧ್ವನಿ ಕಿಂಕಿಣೀ ರುತಂ ॥ ೫೩ ॥

ಕಂ॥ ಸ್ಮರಶಸ್ತ್ರಸದನಮಿಂದಿರೆ।
ಯರಮನೆಯಳಿಗಣದ ಶಾಶ್ವತಪ್ರಪೆ ಕೋಕೋ।
ತ್ಕರದ ಸುರತಾಲಯಂ ಭಾ।
ಸುರಮಂದಾರನಿಲನ ಕೋಶಮಾ ಕಾಸಾರಂ ॥ 54 ॥

**ಟೀ** ॥ ಆ ಕಾಸಾರಂ – ಆ ಕೊಳವು, ಸ್ಮರಶಸ್ತ್ರಸದನಂ – ಕಾಮನ ಆಯುಧಶಾಲೆ, ಇಂದಿರೆಯರಮನೆ – ಲಕ್ಷ್ಮಿಯಅರಮನೆ, ಅಳಿಗಣದ – ತುಂಬಿವಿಂಡಿನ, ಶಾಶ್ವತಪ್ರಪೆ – ನಿತ್ಯವಾದ ಉದಕಶಾಲೆ, ಕೋಕೋತ್ಕರದ – ಜಕ್ಕವಕ್ಕಿಗಳ ಗುಂಪಿನ, ಸುರತಾಲಯಂ – ಭೋಗಭವನವು, ಮಂದಾನಿಲನ – ಕಿರುಗಾಳಿಯ, ಕೋಶಂ – ಭಂಡಾರವು.

**ತಾ** ॥ ಕೊಳದಲ್ಲಿ ತಾವರೆಯು ಕಾಮನ ಆಯುಧದ ಹಾಗೆ ಕಾಮೋದ್ದೀಪಕವಾಗಿದೆ. ಲಕ್ಷ್ಮಿ ಕಮಲಾಕರದಲ್ಲಿರುವಳು. ತುಂಬಿಗಳಿಗೆ ನಿತ್ಯಜೀವನ ದೊರೆಯುವದು. ಜಕ್ಕವಕ್ಕಿಗಳು ಕ್ರೀಡಿಸುತ್ತಿರುವವು. ಕಿರುಗಾಳಿಯು ಶೈತ್ಯಪರಿಮಳಗಳನ್ನು ಪಡೆಯುವುದು. ಸ್ವರೂಪೋತ್ಪ್ರೇಕ್ಷಾಲಂಕಾರವು ॥ ೫೪ ॥

ಮ॥ ನಳಿನಂ ಶುಕ್ತಿಗೆ ತಳ್ತ ನೀರ್ವನಿಗಳೇ ನುಣ್ಮುತ್ತು ನೀರುಂಬ ನಿ।
ಶ್ಚಲ ಮಾತಂಗಮೆ ತೀರ ನೀರದಮಹೀಂದ್ರಂ ನೀಳ್ದ ಫೇನಾಳಿ ಮಾ ॥
ರ್ಪೊಳೆವರ್ಕಂ ಬಡಬಾಗ್ನಿ ಪೊಕ್ಕ ಕುಧರಂ ತದ್ಭೂಧರಚ್ಛಾಯೆ ಕಂ।
ಗೊಳಿಪನ್ನಂ ಕಮಳಾಕರಂ ತಳೆದುದಾ ರತ್ನಾಕರಾಕಾರಮಂ ॥ ೫೫ ॥

**ಟೀಕೆ** ॥ ನಳಿನಂ – ತಾವರೆಯು, ಶುಕ್ತಿಗೆ – ಚಿಪ್ಪಿಗೆ, ತಳ್ತ – ಹಾಕಿದ, ನೀರ್ವನಿಗಳೇ – ನೀರಿನ ಹನಿಗಳೇ, ನುಣ್ಮುತ್ತು – ನುಣ್ಣಗಿರುವ ಮುತ್ತುಗಳು, ನೀರುಂಬ – ನೀರು ಕುಡಿಯುವ, ನಿಶ್ಚಲ – ಕದಲದೆಯಿರುವ, ಮಾತಂಗಮೆ – ಆನೆಯೇ, ತೀರ – ತಡಿಯಲ್ಲಿರುವ, ನೀರದಂ – ಮೇಘವು, ನೀಳ್ದ – ನೀಳವಾದ, ಫೇನಾಳಿ – ನೊರೆಯ ಸಾಲೇ, ಅಹೀಂದ್ರ – ಸರ್ಪರಾಜನು, ಪೊಳೆವ – ಪಡಿನೆಳಲಾದ, ಅರ್ಕಂ – ಸೂರ್ಯನೆ, ಬಡಬಾಗ್ನಿ – ಕಡಲ ಬೆಂಕಿಯು, ತದ್ಭೂಧರಚ್ಛಾಯೆ – ಆ ಬೆಟ್ಟದ ನೆರಳೇ, ಪೊಕ್ಕ ಕುಧರಂ – ಒಳಹೊಕ್ಕಿರುವ ಮೈನಾಕನು ಆಗಿ, ಕಂಗೊಳಿಪನ್ನಂ – ಶೋಭಿಸುವಂತೆ, ಕಮಲಾಕರಂ – ತಾವರೆಗೊಳವು, ಆ ರತ್ನಾಕರಮಂ – ಆ ಸಮುದ್ರದ ಆಕೃತಿಯನ್ನು,

ತಳೆದುದು – ಧರಿಸಿತು.

**ತಾ** ॥ ಕೊಳವು ಕಡಲಿನ ಹಾಗಿತ್ತು. ಕೊಳದೊಳಗಿನ ತಾವರೆಯಿಂದ ಕಪ್ಪೆಚಿಪ್ಪಿನಲ್ಲಿ ಬಿದ್ದ ನೀರುಹನಿಗಳು ಮುತ್ತುಗಳಂತೆ ಹಾಗೂ ನೀರು ಕುಡಿಯುವ ಆನೆಯು ಮೇಘದ ಹಾಗೂ ನೊರೆಯು ಶೇಷನ ಹಾಗೂ ನೀರಲ್ಲಿ ಮಾರ್ಪೊಳೆದ ಸೂರ್ಯಬಿಂಬವು ಬಡಬಾಗ್ನಿಯ ಹಾಗೂ ಬೆಟ್ಟದ ನೆರಳು ಇಂದ್ರನ ಭಯದಿಂದ ಕಡಲಂ ಪೊಕ್ಕಿರುವ ಮೈನಾಕದ ಹಾಗೂ ತೋರಿತು. ನಳಿನೋಚ್ಚುಕ್ತಿಗೆಯೆಂಬ ಪಾಠದಲ್ಲಿ ತಾವರೆಯೆಂಬ ಮುತ್ತಿನ ಚಿಪ್ಪಿಗೆ ಬಿದ್ದ ನೀರ ಹನಿಗಳೇ ಮುತ್ತುಗಳೆಂದು ಭಾವವು, ರೂಪಕೋತ್ಪ್ರೇಕ್ಷೋಪ ಮಾಲಂಕಾರಗಳ ಸಂಸೃಷ್ಟಿ ॥ ೫೫ ॥

ಕಂ॥ ಶರದೋಳ್ಮುಳುಂಗಿ ನೆಗಪಿದ ।
ಕರಿಕುಂಭಂ ಫೇನಪಿಹಿತಮಿಂಬಾದುದು ತೆ ।
ಳ್ದರೆಮೇಲುದರಿಂ ಪೊಣ್ಮಿದ ।
ಸರಸಿಯ ಮಲಯಜವಿಲಿಪ್ತ ಕುಚಕುಂಭದ ವೋಲ್ ॥ ೫೬ ॥

**ಟೀಕೆ** ॥ ಶರದೋಳ್ – ನೀರಿನಲ್ಲಿ ಮುಳುಂಗಿ, ನೆಗಪಿದ – ಎತ್ತಿದ, ಕರಿಕುಂಭಂ – ಆನೆಯ ತಲೆಯಂಬಿದುವು, ಫೇನಪಿಹಿತಂ – ನೊರೆಯಿಂದ ಮುಚ್ಚಲ್ಪಟ್ಟದಾದ್ದರಿಂದಲೇ, ತೆಳ್ದರೆಮೇಲುದಾರಿಂ – ತೆಳುಹಾದ ಅಲೆಯೆಂಬ ಮೇಲುಸೆರಗಿನಿಂದ, ಪೊಣ್ಮಿದ – ಸಿಂಗರಿಸಲ್ಪಟ್ಟ, ಸಿರಿಯ – ಭಾಗ್ಯವುಳ್ಳ, ಮಲಯಜವಿಲಿಪ್ತ – ಶ್ರೀಗಂಧದಿಂದ ಬಳಿಯಲ್ಪಟ್ಟ, ಕುಚಕುಂಭದ ವೋಲ್ – ಸ್ತನಕಲಶದ ಹಾಗೆ, ಇಂಬಾದುದು – ಚನ್ನಾಯಿತು.

ಆನೆಯು ಕೊಳದ ನೀರಿನಲ್ಲಿ ಮುಳುಗಿ ತಲೆಯೆತ್ತುವಾಗ್ಗೆ ಅದರ ಕುಂಭಸ್ಥಳದ ಮೇಲೆ ನೊರೆ ಮುಚ್ಚಿರಲು ಅದು ಬಳೀ ಸೀರೆಯ ಮೇಲುಸೆರಗುಳ್ಳ ಶ್ರೀಗಂಧಲೇಪಿತವಾದ ಕುಚಕಲಶದ ಹಾಗಿತ್ತೆಂದು ಉಪಮಾಲಂಕಾರವು ॥

ಕಂ॥ ಅಮರ್ದುನೆಲೆ ಮೊಲೆಗಳೆಂಬವೊ ।
ಲಮಳ್ವಕ್ಕಿಗಳಿರೆ ತದಗ್ರಕಲ್ಲೋಲ ಸಮಾ ॥
ಕ್ರಮಿತಾಬ್ಜಪತ್ರಮಾಳ್ದುದು ।
ಕಮಲಿನಿ ತೊಟ್ಟಿರ್ದ ಹರಿತಕಂಚುಕದಿರವಂ ॥ ೫೭ ॥

**ಟೀಕೆ** ॥ ಅಮರ್ದುನೆಲೆ – ಹಾಲಿಗೆ ಸ್ಥಲವಾದ, ಮೊಲೆಗಳು – ಸ್ತನಗಳು, ಯೆಂಬವೋಲ್ – ಎಂಬಂತೆ, ಅಮಳ್ವಕ್ಕಿಗಳ್ – ಚಕ್ರವಾಕಪಕ್ಷಿಗಳು, ಯಿರೆ – ಇರಲಾಗಿ, ತದಗ್ರ – ಅದರ ಮುಂದೆಯಿರುವ, ಕಲ್ಲೋಲ – ಅಲೆಯಿಂದ, ಸಮಾಕ್ರಮಿತ – ಮೆಟ್ಟಲ್ಪಟ್ಟ, ಅಬ್ಜಪತ್ರಂ – ತಾವರೆಯ ಎಲೆಯು, ಕಮಲಿನ ತಾವರೆಯ ದಂಟು, ತೊಟ್ಟಿರ್ದ – ಧರಿಸಿದ್ಧ, ಹರಿತಕಂಚುಕದ – ಹಸುರು ಕುಬುಸದ, ಯಿರವಂ – ಬಗೆಯನ್ನು, ಆಳ್ದುದು – ಪೋಷಿಸಿತು.

**ತಾ** ॥ ಕೊಳದಲ್ಲಿ ತಾವರೆಯ ಬಳ್ಳಿಯ ಮೇಲೆ ಚಕ್ರವಾಕ ಪಕ್ಷಿಗಳು ಬಂದು ಕುಳ್ಳಿರಲು, ತಾವರೆಯ ಎಲೆಯು ಅಲೆಯಿಂದ ಅವುಗಳ ಮೇಲೆ ಹೊದಿಸಲ್ಪಟ್ಟಾಗ ಕಮಲಿನಿ ಎಂಬವಳು ತನ್ನ ಮೊಲೆಗಳಿಗೆ ಹಸಿರು ಕುಪ್ಪಸವನ್ನು ತೊಟ್ಟಿರ್ದ ಹಾಗಿತ್ತೆಂದು ಉಪಮಾಲಂಕಾರವು ॥ ೫೭ ॥

ಚ ॥ ಸರದೊಳೆ ಮಿಂದು ನೀರಜರಜಂಗಳನಂಗದೊಳೊಟ್ಟಿಕೊಂಡು ಗಾ ।
ವಳಿಪ ಮದಾಳಿ ಗಾಯಕರ ಗಾನಮನಾಲಿಸಿ ದಾನಮಿತ್ತು ಕಂ ॥
ಧರದೆ ಮೃಣಾಳಹಾರಮನೆ ತಾಳ್ದೆಳೆಮುತ್ತನೆ ಸೂಸುವಂತೆ ಘೂ ।
ತ್ಕರಿಸಿ ಕಣೌಘಮಂ ಕೆದರ್ದುದಲ್ಲಿ ಗಜೇಂದ್ರಮಮಂದ ವಿಭ್ರಮಂ ॥ ೫೮ ॥

**ಟೀಕೆ** ॥ ಅಲ್ಲಿ – ಆ ಕೊಳದೊಳಗೆ, ಅಮಂದವಿಭ್ರಮಂ – ಹೆಚ್ಚು ವಿನೋದವುಳ್ಳ, ಗಜೇಂದ್ರ – ಶ್ರೇಷ್ಠವಾದ ಆನೆಯು, ಸರದೊಳೆ – ಕೊಳದಲ್ಲಿಯೇ, ಮಿಂದು – ಸ್ನಾನ ಮಾಡಿ, ಅಂಗದೊಳು – ಮೈಯಲ್ಲಿ, ನೀರಜರಜಂಗಳನು – ತಾವರೆಯ ಪುಪ್ಪುಡಿಗಳನ್ನು, ಒಟ್ಟಿಕೊಂಡು – ಚಲ್ಲಿಕೊಂಡು, ಗಾವಳಿಪ – ತುಂಡುಗೆಡಿಪ, ಮದಾಳಿ – ಮದಿಸಿದ ಭೃಂಗಗಳೆಂಬ, ಗಾಯಕರ – ಸಂಗೀತಗಾರರ, ಗಾನಮಂ – ಹಾಡನ್ನು, ಆಲಿಸಿ – ಕೇಳಿ, ದಾನಂ – ಮದೋದಕವೆಂಬ, ದಾನಂ – ದೇಹದ್ರವ್ಯವನ್ನು, ಯಿತ್ತು – ಕೊಟ್ಟು, ಕಂಧರದೆ – ಕಂಠದಲ್ಲಿ, ಮೃಣಾಳಹಾರಮನೆ – ತಾವರೆದಂಟಿನ ಸರವನ್ನು, ತಾಳ್ದು – ಧರಿಸಿ, ಯೆಳೆಮುತ್ತನೆ – ಕೋಮಲವಾದ ಮುಕ್ತಾಮಣಿಗಳನ್ನೇ, ಸೂಸುವಂತೆ – ಸುರಿಸುತ್ತಿರುವ ಹಾಗೆ, ಘೂತ್ಕರಿಸಿ – ಸೊಂಡಲಿನಿಂದ ಪುಸ್ಸೆಂದು ಬಿಟ್ಟು, ಕಣೌಘಮಂ – ತುಂತುರುಗಳ ಗುಂಪನ್ನು, ಕೆದರ್ದುದು – ಚೆಲ್ಲಿತು.

**ತಾ** ॥ ಆನೆಯು ಸಿಸ್ತುಗಾರನ ಹಾಗೆ ಮಿಂದು ಅಲಂಕೃತವಾಗಿ ವಿನೋದಿಸಿತೆಂದು ಭಾವವು. ॥ ೫೮ ॥

ಕಂ॥ ಸಿರಿಯರಮನೆಯಂ ಮುರಿದಾ ।
ಕರಿಯಮ್ಮುಳಿದಿಟ್ಟ ಹರಿಯ ಪಾರುಂಬಳೆಯೆಂ ॥
ಬಿರವಂ ತಳೆದಳಿಮಾಲಿಕೆ ।
ತಿರುಗುತ್ತೆಳ್ತಂದುಕಟದೊಳೇನೆರಗಿದುದೊ ॥ ೫೯ ॥

**ಟೀಕೆ** ॥ ಸಿರಿಯ – ಲಕ್ಷ್ಮಿಯ, ಅರಮನೆಯಂ – ರಾಜಗೃಹವಾದ ತಾವರೆಯನ್ನು, ಮುರಿದ – ಮುರಿದುಹಾಕಿದ, ಆ ಕರಿಯಂ – ಆನೆಯನ್ನು, ಮುಳಿದು – ಸಿಟ್ಟುಗೊಂಡು, ಯಿಟ್ಟ – ಹೊಡೆದ, ಹರಿಯ – ಸಿಂಹವೆಂಬ ಹರಿಯ ವಿಷ್ಣುವಿನ, ಪಾರುಂಬಳೆಯೆಂಬ – ಚಕ್ರವೆಂಬ, ಯಿರವಂ – ಸ್ಥಿತಿಯನ್ನು, ದಳೆದು– ಧರಿಸಿ, ಅಳಿಮಾಲಿಕೆ – ಭೃಂಗವಂತಿಯು, ತಿರುಗುತ್ತ ಯೆಳ್ತಂದು – ಬಂದು ಕಟದೋಳ್ – ಆನೆಯ ಗಂಡಸ್ಥಲದಲ್ಲಿ, ಯೇನೆರಗಿದುದೋ – ಯೇನುಬಿತ್ತೋ ಬಿತ್ತೋಯೇನು.

**ತಾ** ॥ ಹರಿಯೆಂದರೆ ಸಿಂಹ. ವಿಷ್ಣುವಿಗೂ ಅದೇ ಹೆಸರುಂಟು. ಆನೆಯ ದವಡೆಯಲ್ಲಿ ತುಂಬಿವಿಂಡು ಮಂಡಲಾಕಾರವಾಗಿ ಎರಗುತಿದ್ದರೆ ಅದು ವಿಷ್ಣುಚಕ್ರದ ಹಾಗಿತ್ತು. ಚಕ್ರವು ಕಬ್ಬಿಣದ ಬಿಲ್ಲೆಯಾದ್ದರಿಂದ ಕಪ್ಪಾಗಿತ್ತೆಂದು ಭಾವವು. ಕಾರಣವೇನೆಂದರೆ ಈ ಆನೆಯು ತನ್ನ ಹೆಂಡತಿಯಾದ ಲಕ್ಷ್ಮಿಯ ಮನೆಯಾದ ಕಮಲವನ್ನು ಕಿತ್ತುಹಾಕಿತೆಂಬ ಸಿಟ್ಟುಳ್ಳ ವಿಷ್ಣುವಿನಿಂದ ಆನೆಯನ್ನು ಕೊಲ್ಲುವ ಬಗ್ಗೆ ಚಕ್ರಾಯುಧವು ಪ್ರಯೋಗಿಸಲ್ಪಟ್ಟಿತೋ ಎಂಬುವುದು ಹೇತೋತ್ಪ್ರೇಕ್ಷಾಲಂಕಾರವು, ಅಲಿಮಾಲಿಕೆ ಪಾರುಂಬಳೆರಯೆ ಯಿರವಂ ತಳೆದುದೆಂಬಲ್ಲಿ ಉಪಮಾಲಂಕಾರವು. ॥ ೫೯ ॥

ಚಂ॥ ಪುಳಿನನಿತಂಬಮಂ ಪದೆದು ಸೋಂಕಿ ತರಳ್ಚಿತರಂಗನೀವಿಯಂ ।
ವಿಳಸಿತ ಚಕ್ರವಾಕಕುಚಯುಗ್ಮಮನಪ್ಪಿ ಮದಾಳಿಮಾಲೆಯಿಂ ॥
ಬಳಿಕಮನೊತ್ತಿ ನೇರ್ಪಡಿಸಿ ತತ್ಸರಸೀರಮೆಯೆಂಬುಜಾಸ್ಯ ಮಂ ।
ಡಲಮನೊರಲ್ದು ಚುಂಬಿಸಿ ಭುಜಂಗನವೋಲ್ಸುಳಿಗುಂ ಸಮೀರಣಂ ॥ ೬೦ ॥

**ಟೀಕೆ** ॥ ಸಮೀರಣಂ – ಗಾಳಿಯೆಂಬ ಪುರುಷನು, ಪುಳಿನನಿತಂಬಮಂ – ಹೊಯ್ಗೆಯೆಂಬ ನಿತಂಬವನ್ನು, ಪಡೆದು – ಪ್ರೀತಿಸಿ, ಸೋಂಕಿ – ಮುಟ್ಟಿ, ತರಂಗ – ನೀವಿಯಂ – ಆಲೆಯೆಂಬ ಮಡಿಲಗಂಟನ್ನು, ತೆರಳ್ಚಿ – ಬಿಚ್ಚಿಹಾಕಿ, ವಿಳಸಿತ – ಶೋಭಿಸುವ, ಚಕ್ರವಾಕ – ಚಕ್ರವಾಕಪಕ್ಷಿಗಳೆಂಬ, ಕುಚಯುಗ್ಮಮಂ – ಸ್ತನದ್ವಯವನ್ನು, ಅಪ್ಪಿ – ಆಲಿಂಗಿಸಿ, ಮದಾಳಿಮಾಲೆಯೆಂಬ – ಮದಿಸಿದ ಭೃಂಗಪಂಕ್ತಿ ಎಂಬ, ಅಲಕಮಂ – ಮುಂಗುರುಳನ್ನು, ಒತ್ತಿ – ಹಿಕ್ಕಿ, ನೇರ್ಪಡಿಸಿ – ಸರಿಮಾಡಿ, ತತ್ಸರಸೀರಮೆಯ – ಆ ಕೊಳವೆಂಬ ಲಕ್ಷ್ಮಿಯ, ಅಂಬುಜಾಸ್ಯಮಂಡಲಮಂ, ತಾವರೆಯೆಂಬ ಮುಖಬಿಂಬವನ್ನು, ಒರಲ್ದು – ಸೀತ್ಕರಿಸಿ, ಚುಂಬಿಸಿ – ಮುತ್ತಿಟ್ಟು, ಭುಜಂಗನವೋಲ್ – ವಿಟಪುರುಷನಂತೆ, ಸುಳಿಗುಂ – ಸಂಚರಿಸುವುದು.

**ತಾ** ॥ ಗಾಳಿಯು ಕೊಳದ ಮರಳ ತಿಟ್ಟಿಗಳನ್ನು ಸೋಂಕಿ, ಅಲೆಗಳನ್ನು ಸಡಿಲಿಸಿ, ಚಕ್ರವಾಕ ಪಕ್ಷಿಗಳನ್ನು ನೂಕಿಕೊಂಡು, ಭೃಂಗಪಂಕ್ತಿಯನ್ನು ಸವರುತ್ತ, ತಾವರೆಯ ಮೇಲೆ ಸುಳಿದಾಡುತ್ತಿರಲು, ಮೇಲೆ ಹೇಳಲ್ಪಟ್ಟ ವಸ್ತುಗಳು ಸ್ತ್ರೀಯಳ ಅಂಗಗಳನ್ನು ಹೋಲಿಸಿ ಸರಸಿಗೆ ಅವಯವಗಳಾಗಿರುವುದರಿಂದ ಗಾಳಿಯೆಂಬ ಪುರುಷನು ಸರೋಲಕ್ಷ್ಮಿ ಎಂಬವಳನ್ನು ಭೋಗಿಸುವಂತೆ ಇರ್ದುದು ರೂಪಕೋಪಮಾಲಂಕಾರವು.

(ಮುಂದುವರಿಯುವುದು)

# ಪದ್ಮಶ್ರೀ ಬಿ. ಶಿವಮೂರ್ತಿಶಾಸ್ತ್ರಿಗಳವರ ಸಾಹಿತ್ಯಸೇವೆ

ಡಾ. ಬಿ. ನಂಜುಂಡಸ್ವಾಮಿ

'ಪಂಡಿತರತ್ನಂ' ಶಿವಮೂರ್ತಿಶಾಸ್ತ್ರಿಗಳು 1939ರಲ್ಲಿ "ಸ್ವತಂತ್ರ ಕರ್ನಾಟಕ" ಎಂಬ ವಾರಪತ್ರಿಕೆಯನ್ನು ಪ್ರಾರಂಭಿಸಿ ಸುಮಾರು ಐದು ವರ್ಷಗಳು ನಡೆಸಿದರು. ಈ ಪತ್ರಿಕೆಯ ಮುದ್ರಣಕ್ಕೋಸ್ಕರ 50,000 ರೂ.ಗಳನ್ನು ಕಳೆದುಕೊಂಡು ಮಾಡಿದ ಸಾಲವನ್ನು ತೀರಿಸಲು ಇದ್ದ ಆಸ್ತಿಯನ್ನು ಮಾರಬೇಕಾಯಿತು. 1938ರಲ್ಲಿ ಕರ್ನಾಟಕ ಏಕೀಕರಣ ಸಂಘವನ್ನು ಸ್ಥಾಪನೆ ಮಾಡಲಾಗಿ ಈ ಸಂಘದ ಅಧ್ಯಕ್ಷರಾಗಿ ಬೆನಗಲ್ ರಾಮರಾಯರು, ಉಪಾಧ್ಯಕ್ಷರಾಗಿ ಎನ್. ಬಾಲಕೃಷ್ಣಯ್ಯ, ಕೋಶಾಧಿಕಾರಿಗಳಾಗಿ ಟಿ. ಸಿದ್ದಲಿಂಗಯ್ಯನವರು, ಕಾರ್ಯದರ್ಶಿಗಳಾಗಿ ಶಿವಮೂರ್ತಿಶಾಸ್ತ್ರಿಗಳು ತಮ್ಮ ಪಾಲಿನ ಸೇವೆಯನ್ನು ಮಾಡಿದರು. ಕರ್ನಾಟಕ ಏಕೀಕರಣದ ವಿಷಯವಾಗಿ "ಸ್ವತಂತ್ರ ಕರ್ನಾಟಕ"ದಲ್ಲಿ ಪ್ರಕಟವಾದ ಒಂದು 120 ಪುಟದ ಪುಸ್ತಕವನ್ನು ನೋಡಿದ್ದೆ. ಅನಂತರ ಪುಸ್ತಕ ನನ್ನ ಅವಲೋಕನಕ್ಕೆ ಲಭ್ಯವಾಗಲಿಲ್ಲ. "ಸ್ವತಂತ್ರ ಕರ್ನಾಟಕ" ಪತ್ರಿಕೆಯ ಸಂಪುಟಗಳು ದರ್ಶನಮಾತ್ರಕ್ಕೂ ದೊರೆಯುತ್ತಾ ಇಲ್ಲ. ಏಕೀಕರಣದ ಇತಿಹಾಸ, ಅಂದಿನ ಜನಜೀವನ, ಸಾಂಸ್ಕೃತಿಕ ಕಾರ್ಯಕ್ರಮಗಳ ಬಗ್ಗೆ ಶಾಸ್ತ್ರಿಗಳು ವಿಶೇಷವಾಗಿ ಬರೆದಿರುತ್ತಾರೆ. ಅಷ್ಟು ಮಹತ್ತ್ವದ ಪತ್ರಿಕಾ ಸಂಪುಟಗಳನ್ನು ರಕ್ಷಿಸಬೇಕಾಗಿತ್ತು.

ಶರಣ ಸಾಹಿತ್ಯ ಗ್ರಂಥಮಾಲೆಯು, ಶಾಸ್ತ್ರಿಗಳ ಸಾಹಿತ್ಯಸೇವೆಯ ಇನ್ನೊಂದು ಕೊಡುಗೆ. ಈ ಮಾಲೆಯ ಪ್ರಥಮ ಪುಸ್ತಕ 1941ರಲ್ಲಿ ಪ್ರಕಟವಾದ "ಶ್ರೀ ನಿಜಗುಣ ಶಿವಯೋಗಿ ವಿರಚಿತ ಪುರಾತನರ ತ್ರಿವಿಧಿ". ಈ ಕೃತಿಯ ಎರಡನೇ ಮುದ್ರಣ 1952ರಲ್ಲಿ ಆಗಿದೆ. ಎರಡನೇ ಮುದ್ರಣದಲ್ಲಿ 'ಅರವತ್ತುಮೂವರು" ಎಂಬ ಒಂದು ಸಂಶೋಧನಾತ್ಮಕ ಪ್ರಬಂಧವನ್ನು ಸೇರಿಸಿ ಮುದ್ರಿಸಿದ್ದಾರೆ. ಶಿವಭಕ್ತರು ಭಕ್ತಿಯಿಂದ ಹೇಳುವ 108+6 ಶ್ಲೋಕಗಳುಳ್ಳ 'ಶಿವಸಂಕಲ್ಪಾಃ' ಗ್ರಂಥವನ್ನು 1941ರಲ್ಲಿ ಮುದ್ರಿಸಿದ್ದಾರೆ. ಅದು 1969ರಲ್ಲಿ ಮತ್ತೆ ಪ್ರಕಟವಾಗಿದೆ. ಮಹಾಕವಿ ಪಾಲ್ಕುರಿಕೆ ಸೋಮನಾಥ ವಿರಚಿತ ಸಂಸ್ಕೃತ 'ಬಸವೋದಾಹರಣಮ್' ಕೃತಿಯು ಗ್ರಂಥಮಾಲೆಯ 7ನೇ ಪುಷ್ಪವಾಗಿ ಪ್ರಕಟವಾಗಿದೆ. ಈ ಕೃತಿಯನ್ನು ಪ್ರಕಟಿಸಲು ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳು 100.00 ರೂ.ಗಳನ್ನು ನೀಡಿ ಆಶೀರ್ವದಿಸಿ ಗ್ರಂಥಮಾಲೆಯನ್ನು ಪ್ರೋತ್ಸಾಹಿಸಿದ್ದಾರೆ. ಇದೇ ಗ್ರಂಥಕ್ಕೆ ವೇ॥ ಟಿ.ಆರ್. ವಿಲೋಚನ ಶರ್ಮಾ ಅವರಿಂದ

ಕನ್ನಡ ಟೀಕೆ ಬರೆಸಿ 1952ರಲ್ಲಿ ಮುದ್ರಿಸಲಾಗಿದೆ. ವೀರಶೈವ ಸಾಹಿತ್ಯ ಇತಿಹಾಸ ಭಾಗ–1 ಪ್ರಥಮ ಮುದ್ರಣ 1953, ದ್ವಿತೀಯ ಮುದ್ರಣ 1962, ವೀರಶೈವ ಸಾಹಿತ್ಯ ಮತ್ತು ಇತಿಹಾಸ ಭಾಗ–2 ಪ್ರಥಮ ಮುದ್ರಣ 1959, ದ್ವಿತೀಯ ಮುದ್ರಣ 1979, ವೀರಶೈವ ಸಾಹಿತ್ಯ ಮತ್ತು ಇತಿಹಾಸ ಭಾಗ–3, ವೀರಶೈವ ಸಾಹಿತ್ಯ ಮತ್ತು ಇತಿಹಾಸ ಭಾಗ–4 1978ರಲ್ಲಿ ಪ್ರಕಟವಾಗಿವೆ. ಕರ್ಣಾಟಕ ಸಂದರ್ಶನ ಭಾಗ–1 ಗ್ರಂಥಮಾಲೆಯ 20ನೇ ಕುಸುಮವಾಗಿ 1962ರಲ್ಲಿ ಪ್ರಕಟಗೊಂಡಿದೆ. ವಿದ್ಯಾರ್ಥಿ ಗ್ರಂಥಮಾಲಾದ ಮೊದಲ ಪ್ರಕಟಣೆ ಗಾಂಧಿ ಗೀತೆಗಳು, ತುಮಕೂರಿನಲ್ಲಿ ಪ್ರಕಟವಾದ ಕೃತಿ ಇರಬೇಕು, ಅವಲೋಕನಕ್ಕೆ ಲಭ್ಯವಾಗಿಲ್ಲ. 1950ರಲ್ಲಿ ಸರ್ವಜ್ಞಮೂರ್ತಿ (ಕವಿ–ಕಾವ್ಯ ವಿಮರ್ಶೆ) ಪ್ರಕಟಗೊಂಡಿದೆ. 'ಬಿದನೂರು ಪ್ರಭು ಶಿವಪ್ಪನಾಯಕ' (ಭಾಗ 1–2) 1963ರಲ್ಲಿ ತೃತೀಯ ಮುದ್ರಣ ಹೊರಬಂದಿದೆ. ಕೊಂಡಗುಳಿ ಕೇಶಿರಾಜ ದಂಡನಾಯಕ ವಿರಚಿತ ಷಡಕ್ಷರ ಮಂತ್ರಮಹಿಮೆ ಪ್ರಥಮ ಮುದ್ರಣ 1954, ದ್ವಿತೀಯ ಮುದ್ರಣ 1967, ಕನ್ನಡ ಶತಕ ಸಾಹಿತ್ಯ 5 ಶತಕಗಳ ಸಂಕಲನ ಪ್ರಕಟಗೊಂಡಿವೆ. ಈ ಕೃತಿಯಲ್ಲಿ ದೇವರಾಯಪಟ್ಟಣದ ಶಂಕರದೇವ ವಿರಚಿತ 'ಶಂಕರಲಿಂಗ ಕಂದ ಶತಕ', 'ಗುರು ಶಂಕರೇಶ್ವರ ಶತಕ', ವಿರಕ್ತ ತೋಂಟದಾರ್ಯ ವಿರಚಿತ 'ನಿರಂಜನಲಿಂಗ ಶತಕ' ಮುಮ್ಮಡಿ ಕೃಷ್ಣರಾಜ ಒಡೆಯ ವಿರಚಿತ 'ಪಾರ್ವತಿ ಭಕ್ತಿಸಾರ' ಮತ್ತು 'ಸಿರಿನಂಜುಂಡ ಶತಕ'ಗಳು ಸಂಕಲನಗೊಂಡಿವೆ. ಪಂಡಿತಾರಾಧ್ಯ ಮತ್ತು ಪಾಲ್ಕುರಿಕೆ ಸೋಮನಾಥ ವಿರಚಿತ ಗಣಸಹಸ್ರನಾಮಾವಳಿ 1955ರಲ್ಲಿ ಗ್ರಂಥಮಾಲೆಯ ಇಪ್ಪತ್ತನೇ ಕುಸುಮವಾಗಿ ಪ್ರಕಟಗೊಂಡಿದೆ. ಈ ಮಹತ್ವದ ಗ್ರಂಥವನ್ನು 2003ರಲ್ಲಿ ಬಸವ ಸಮಿತಿ ಮರುಮುದ್ರಣ ಮಾಡಿದೆ.

'ದುಂಬಿ' ಶಾಸ್ತ್ರಿಗಳು ಬೇರೆ ಬೇರೆ ಕಾಲದಲ್ಲಿ ಬರೆದಿದ್ದ 60 ಕವಿತೆಗಳ ಸಂಕಲನ ಗ್ರಂಥ. ಆ ಕೃತಿ 1951ರಲ್ಲಿ ಪ್ರಕಟವಾಗಿದೆ. ಕೃತಿಯನ್ನು ತಮ್ಮ ವಿದ್ಯಾಗುರುಗಳಾದ ಕೈ॥ ಪಿ.ಆರ್. ಕರಿಬಸವಶಾಸ್ತ್ರಿಗಳಿಗೆ ಅರ್ಪಿಸಿದ್ದಾರೆ. ಈ ಸಂಕಲನದಲ್ಲಿ ಶಾಸ್ತ್ರಿಗಳು ಬರೆದ ಆಧುನಿಕ ವಚನಗಳು ಇವೆ. ತುಮಕೂರು ನಗರದ ಅಧಿದೇವತೆಯಾದ 'ಸೋಮೇಶ್ವರ'ನನ್ನು, ಶಾಸ್ತ್ರಿಗಳು ಬಾಲ್ಯದಲ್ಲಿ ಶ್ರದ್ಧಾಭಕ್ತಿಯಿಂದ ಸೇವೆಯನ್ನು ಮಾಡಿದ್ದರು. ಆದ್ದರಿಂದ ತಮ್ಮ ವಚನಗಳಿಗೆ 'ಚಿದ್ಘನಲಿಂಗ ಸೋಮೇಶ್ವರಾ' ಎಂಬ ಅಂಕಿತವನ್ನು ಇಟ್ಟುಕೊಂಡಿದ್ದಾರೆ. 'ವೀರಶೈವ ಮಹಾಪುರುಷರು' 1953ರಲ್ಲಿ ಪ್ರಕಟಗೊಂಡಿದೆ. 28 ಜನ ವಿಭೂತಿಪುರುಷರನ್ನು ಕುರಿತು ಲೇಖನಗಳಿವೆ. ಬಹಳ ಅಮೂಲ್ಯವಾದ ಕೃತಿ. ಈ ಕೃತಿಯ ಬಗ್ಗೆ ವಿಶೇಷವಾದ ಅಧ್ಯಯನ ನಡೆಯಬೇಕು. ಶಾಸ್ತ್ರಿಗಳು ಭಾಗ–1, ಭಾಗ–2ರಲ್ಲಿ ತಾವು ಬರೆಯಬೇಕೆಂದು ಅಂದುಕೊಂಡ ವಿಭೂತಿ ಪುರುಷರ, ಪಟ್ಟಿಯನ್ನು ಕೊಟ್ಟಿದ್ದಾರೆ. ದುರ್ದೈವವೆಂದರೆ ಎರಡನೇ ಭಾಗ ಪ್ರಕಟಗೊಳ್ಳಲಿಲ್ಲ. ರಾಘವಾಂಕ

ವಿರಚಿತ 'ವೀರೇಶ ಚರಿತೆ' 1942ರಲ್ಲಿ ಪ್ರಥಮ ಮುದ್ರಣ, 1966ರಲ್ಲಿ ಎರಡನೇ ಮುದ್ರಣ ಮೈಸೂರು ಶಾರದಾ ಮಂದಿರದಿಂದ 1975ರಲ್ಲಿ ಮೂರನೇ ಮುದ್ರಣ ಹೊರಬಂದಿದೆ. 'ವೀರಶೈವ ಧರ್ಮ ಸಂಸ್ಕೃತಿ' ಗ್ರಂಥಮಾಲೆಯ 29ನೇ ಪುಷ್ಪವಾಗಿ 1970ರಲ್ಲಿ ಪ್ರಕಟಗೊಂಡಿದೆ. ಗುರುಸಿದ್ಧಕವಿ ವಿರಚಿತ "ಮಾದೇಶ್ವರ ಸಾಂಗತ್ಯ" ಗ್ರಂಥಮಾಲೆಯ 24ನೇ ಕುಸುಮವಾಗಿ 1955ರಲ್ಲಿ ಪ್ರಕಟಗೊಂಡಿದೆ. ಮುಂದೆ ಶ್ರೀ ಮಲೈ ಮಾದೇಶ್ವರ ಸ್ವಾಮಿ ದೇವಾಲಯದಿಂದಲೇ ಪ್ರಕಟವಾಗುತ್ತಾ ಬಂದಿದೆ. ನಾಟಕರತ್ನ ಡಾ. ಜಿ.ಎಚ್.ವೀರಣ್ಣನವರ ಒತ್ತಾಸೆಯಿಂದ 'ಗುಬ್ಬಿ ಶ್ರೀ ಚನ್ನಬಸವೇಶ್ವರ ಸುಪ್ರಭಾತ' 1971ರಲ್ಲಿ ರಚನೆಗೊಂಡು ಪ್ರಕಟಗೊಂಡಿದೆ. 1974ರಲ್ಲಿ 'ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ' ಲೇಖನಗಳ ಸಂಗ್ರಹದ ಸಂಪುಟ ಪ್ರಕಟಗೊಂಡಿದೆ. 1974ರಲ್ಲೇ "ಆಸ್ಥಾನಕವಿ, ಅಭಿನವ ಕಾಳಿದಾಸ ಬಸವಪ್ಪ ಶಾಸ್ತ್ರಿಗಳು" ಕೃತಿ ಪ್ರಕಟಗೊಂಡಿದೆ. "ನನ್ನ ನಲವತ್ತು ವರ್ಷದ ಆಸೆ ಈ ಕೃತಿಯ ಪ್ರಕಟಣೆಯಿಂದ ಕೈಗೂಡಿತು" ಎಂದು ಮುನ್ನುಡಿಯಲ್ಲಿ ಶಾಸ್ತ್ರಿಗಳು ಸಂತೋಷ ವ್ಯಕ್ತಪಡಿಸಿದ್ದಾರೆ. ಶಾಸ್ತ್ರಿಗಳ "ಜೀವನ ಸ್ಮೃತಿಗಳು" ಗ್ರಂಥ 1974ರಲ್ಲಿ ಪ್ರಕಟಗೊಂಡಿದೆ. ಈ ಸಣ್ಣ ಗ್ರಂಥದಿಂದ ಶಾಸ್ತ್ರಿಗಳು ನಡೆದು ಬಂದ ದಾರಿಯ ಬಗ್ಗೆ ವಿಶೇಷವಾದ ಮಾಹಿತಿ ಲಭ್ಯವಾಗುತ್ತದೆ. ಪ್ರಥಮ ವಿಶ್ವ ಕನ್ನಡ ಸಮ್ಮೇಳನ ಸಾಹಿತ್ಯ ಮಾಲೆ ವಿಚಾರ ಸಾಹಿತ್ಯದ ಅಡಿಯಲ್ಲಿ ಶಾಸ್ತ್ರಿಗಳ ಲೇಖನಸಂಗ್ರಹ 'ವೀರಶೈವ ಸಾಹಿತ್ಯ 1982ರಲ್ಲಿ ಪ್ರಕಟಗೊಂಡಿದೆ.

ಶಾಸ್ತ್ರಿಗಳು ತಮ್ಮ ಗ್ರಂಥಮಾಲೆಯಿಂದ ಬೇರೆಯವರ ಕೃತಿಗಳನ್ನು ಪ್ರಕಟಿಸಿ ಪ್ರೋತ್ಸಾಹಿಸಿದ್ದಾರೆ. ಜಗದಾಚಾರ್ಯ ಶ್ರೀ ಸ್ವಾಮಿ ವಿರೂಪಾಕ್ಷ ಒಡೆಯರ್, ನಿಜಸಿಂಹಾಸನಾಧ್ಯಕ್ಷರು, ಚೌಡಯ್ಯದಾನಪುರ ಇವರು ರಚಿಸಿದ "ಸಂಕ್ಷಿಪ್ತ ಶಿವಪೂಜಾವಿಧಿ' ಗ್ರಂಥಮಾಲೆಯ ಎಂಟನೇ ಕುಸುಮವಾಗಿ 1950ರಲ್ಲಿ ಪ್ರಕಟಗೊಂಡಿದೆ. ನಾನು ನೋಡಿದ ಶಿವಪೂಜಾವಿಧಿಗಳಲ್ಲಿ ಬಹಳ ಮೌಲ್ಯಯುತವಾದದ್ದು. ಈ ಗ್ರಂಥವನ್ನು ಮರುಮುದ್ರಣ ಮಾಡಿಸಬೇಕಾದ ಅಗತ್ಯವಿದೆ. 1950ರಲ್ಲಿ 'ಯುಗವಾಣಿ' ಕವನ ಸಂಗ್ರಹ ಹೈದರಾಬಾದಿನ ಕನ್ನಡ ತರುಣರು ಬರೆದ ಕವನಗಳ ಸಂಕಲನ. "ಕೆಳದಿಯ ರಾಣಿ ಚೆನ್ನಮ್ಮಾಜಿ"ಯ ಲೇಖಕಿ ಪಂಡಿತ ಸೀತಮ್ಮ ಬೇಲಿ, ಈ ಕೃತಿಯ ಆರನೇ ಮುದ್ರಣ 1964ರಲ್ಲಿ ಹೊರಬಂದಿದೆ. ಕನ್ನಡ ನಾಡಿನ ಬಹು ದೊಡ್ಡ ವಿದ್ವಾಂಸರು, ನಡೆದಾಡುವ ವಿಶ್ವಕೋಶವೆಂದೇ ಪ್ರಖ್ಯಾತರಾದ ಡಿ.ಎಲ್. ನರಸಿಂಹಾಚಾರ್ ಸಂಪಾದಿಸಿದ 'ತುರುಗಾಹಿ ರಾಮಣ್ಣನ ವಚನಗಳು' ಕೃತಿಯನ್ನು 1950ರಲ್ಲಿ ಪ್ರಕಟಿಸಿದ್ದಾರೆ. ಚಿತ್ರದುರ್ಗದ ಹುಲ್ಲೂರು ಶ್ರೀನಿವಾಸ ಜೋಯಿಸರು ರಚಿಸಿದ 'ಕನ್ನಡ ಕಲಿ ಸಿರುಮನ ಚರಿತೆ' 1951ರಲ್ಲಿ ಪ್ರಕಟಗೊಂಡಿದೆ. ಅಷ್ಟಭಾಷಾಕವಿ ಚಂದ್ರಶೇಖರ ವಿರಚಿತ 'ಪಂಪಾಸ್ಥಾನ ವರ್ಣನಂ' 1955ರಲ್ಲಿ ಶ್ರೀ ನ. ಕೃಷ್ಣಜೋಯಿಸ್ ರವರಿಂದ ಸಂಪಾದನೆಗೊಂಡು ಪ್ರಕಟಗೊಂಡಿದೆ.

ಮಹಾಕವಿ ಷಡಕ್ಷರದೇವನನ್ನು ಕುರಿತು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಮಾಡಿದ ಮೂರು ಉಪನ್ಯಾಸಗಳು 1966ರಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯದ ವಿಶೇಷ ಉಪನ್ಯಾಸ ಗ್ರಂಥಮಾಲೆಯಿಂದ ಪ್ರಕಟಗೊಂಡಿತು. 1971ರಲ್ಲಿ ಅದರ ದ್ವಿತೀಯ ಮುದ್ರಣವು ಹೊರಬಂದಿತು. ಶಾಸ್ತ್ರಿಗಳು ತಮ್ಮ ಗ್ರಂಥಮಾಲೆಯಿಂದ ಪ್ರಕಟಿಸಿದ ಮನೋವಿಜಯಂ, ಘನಲಿಂಗಿದೇವರ ವಚನಗಳು, ನ್ಯಾಯಶತಕಮ್, ಕನ್ನಡ ಆದಿತ್ಯ ಪುರಾಣಂ, ಭೈರವೇಶ್ವರ ಕಾವ್ಯದ ಕಥಾಸೂತ್ರರತ್ನಾಕರ ಭಾಗ–1, ಕರ್ಣಾಟಕ ವಿಜಯಂ (ನಾಟಕ) ಇನ್ನೂ ಮುಂತಾದ ಕೃತಿಗಳು ನನ್ನ ಅವಲೋಕನಕ್ಕೆ ಲಭ್ಯವಾಗಲಿಲ್ಲ.

ಶಾಸ್ತ್ರಿಗಳ ದ್ವಿತೀಯ ಪತ್ನಿ ಶ್ರೀಮತಿ ಮುದ್ದಮ್ಮನವರು 3.8.1971ರಂದು ಶಿವೈಕ್ಯರಾದರು. ಆ ಮುಂಚೆ ಶಾಸ್ತ್ರಿಗಳ ಹಿರಿಯ ಪತ್ನಿ ಶಿವೈಕ್ಯರಾಗಿದ್ದರು. ವಯೋಧರ್ಮ, ಸಿಹಿಮೂತ್ರರೋಗ ಈ ಎಲ್ಲಾ ತೊಂದರೆಗಳಿಂದ ಶಾಸ್ತ್ರಿಗಳು ಹಣ್ಣಾದರು. ತಾವು 34 ವರ್ಷ ವ್ರತದಂತೆ ನಡೆಸಿಕೊಂಡು ಬಂದಿದ್ದ 'ಶರಣ ಸಾಹಿತ್ಯ ಪತ್ರಿಕೆ'ಗೆ ಮಂಗಳ ಹಾಡಿದರು. ಶರಣ ಸಾಹಿತ್ಯ ವೀರಶೈವ ಧರ್ಮದ ಒಂದು ದೊಡ್ಡ ನಿಧಿ. ಜೊತೆಗೆ ಕಿರಿಯ ವಿದ್ವಾಂಸರ ಲೇಖನಗಳ ಸೇರ್ಪಡೆಯಿಂದ ಪತ್ರಿಕೆಗೆ ಚೈತನ್ಯ ಬರುತ್ತಾ ಇತ್ತು, ಆದರೆ ಅದಕ್ಕೆ ಅವಕಾಶವಾಗಲಿಲ್ಲ. ತಮ್ಮ ಕಡೆಯ ಸಂಚಿಕೆಯಲ್ಲಿ ನಡೆದಾಡುವ ದೇವರೆಂದು ಪ್ರಖ್ಯಾತರಾಗಿರುವ ಪರಮಪೂಜ್ಯ ಶ್ರೀಮನ್ ನಿ॥ ಪ್ರ॥ ಶಿವಕುಮಾರಸ್ವಾಮಿಗಳ ಸೇವೆಯನ್ನು ಕೊಂಡಾಡಿದ್ದಾರೆ. ಮಾರ್ಚಿ 1972 ಸಂಪುಟ–34, ಸಂಚಿಕೆ–12ಕ್ಕೆ ಶರಣಸಾಹಿತ್ಯ ಸೇವೆ ಮುಕ್ತಾಯವಾಯಿತು. 1972ರಲ್ಲಿ ಬೆಂಗಳೂರು ವೀರಶೈವ ಸಮಾಜ ಹೊರತಂದ "ಶ್ರೀ ಜಗದ್ಗುರು ಪಂಚಾಚಾರ್ಯ ದರ್ಶನ" ವಿಶೇಷ ಸಂಚಿಕೆಯ ಸಂಪಾದಕ ಮಂಡಲಿಯ ಅಧ್ಯಕ್ಷರಾಗಿ ತಮ್ಮ ಪಾಲಿನ ಸೇವೆ ಸಲ್ಲಿಸಿ 'ವೀರಶೈವ ರಾಜ ಮನೆತನ'ಗಳನ್ನು ಕುರಿತು ಆ ಸಂಪುಟದಲ್ಲಿ ಪ್ರೌಢವಾದ ಲೇಖನ ಬರೆದಿದ್ದಾರೆ. ಸಂಪುಟದ ವಿಷಯ ಬಹಳ ಮೇಲುಮಟ್ಟದ್ದು.

14.6.1968ರಂದು ಶಾಸ್ತ್ರಿಗಳ ಷಷ್ಟ್ಯಬ್ದಿಶಾಂತಿ ಸಮಾರಂಭ ಸಮಿತಿಯವರು 'ದೇವಗಂಗೆ' ಎಂಬ ಸಂಭಾವನಾ ಗ್ರಂಥವನ್ನು ಅರ್ಪಿಸಿ ತಮ್ಮ ಗೌರವವನ್ನು ಸಲ್ಲಿಸಿದ್ದಾರೆ. ಶಾಸ್ತ್ರಿಗಳು ಅಪಾರ ಗೌರವ ಸಲ್ಲಿಸುತ್ತಾ ಇದ್ದ ಮೈಸೂರು ಶ್ರೀಮನ್ಮಹಾರಾಜರವರಾದ ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರು ಇದಕ್ಕೆ ಪ್ರಸ್ತಾವನೆ ಬರೆದಿದ್ದಾರೆ. ಈ ಸನ್ಮಾನ ಸಮಿತಿಯ ಅಧ್ಯಕ್ಷರಾಗಿದ್ದರು ಲಿಂ॥ ಶ್ರೀ ಬಿ.ಡಿ. ಜತ್ತಿ ಅವರು. ಈ ಸಂಪುಟದ ಕಡೆಯಲ್ಲಿ 27–1–1966ರಂದು ಧಾರವಾಡ ಮುರುಘಾಮಠದ ಸಂಸ್ಕೃತ ಸಾಹಿತ್ಯ ಸಭೆಯಲ್ಲಿ ಮಂಡಿಸಿದ ಸಂಸ್ಕೃತ ಪ್ರಬಂಧವನ್ನು ಓದಿ ಬೆಕ್ಕಸಬೆರಗಾದೆ. ತುಮಕೂರು ಜಿಲ್ಲಾ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ 1971ರಲ್ಲಿ ಮಾಡಿದ ಅಧ್ಯಕ್ಷ ಭಾಷಣದಲ್ಲಿ ವಿವರಿಸಿರುವಂತೆ ಜಿಲ್ಲೆಯ ಸಮಗ್ರ ಸಾಹಿತ್ಯ ಅವರ ಬೆರಳ

ತುದಿಯಲ್ಲಿತ್ತು. ಹೀಗೆ ಶಾಸ್ತ್ರಿಗಳು ಅರಮನೆ, ಗುರುಮನೆಗಳ ಗೌರವಗಳನ್ನು ಪಡೆದರು. ಅವರ ಬಹುದಿನದ ಆಸೆ ತುಮಕೂರು ನಗರದಲ್ಲಿ ಅಖಿಲ ಭಾರತ ಸಾಹಿತ್ಯ ಸಮ್ಮೇಳನ ನಡೆಸುವುದಾಗಿತ್ತು. ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳ ಸಂಪೂರ್ಣ ಸಹಕಾರದಿಂದ ಅವರ ನೇತೃತ್ವದಲ್ಲಿ ಸಿದ್ಧಗಂಗಾ ಕ್ಷೇತ್ರದಲ್ಲಿ ಸಾಹಿತ್ಯ ಸಮ್ಮೇಳನವನ್ನು ಯಶಸ್ವಿಯಾಗಿ ನೆರವೇರಿಸಿದರು. ಈ ನನ್ನ ಲೇಖನದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿಗೆ ಅವರು ಸಲ್ಲಿಸಿದ ಸೇವೆಯ ಬಗ್ಗೆ ಚರ್ಚಿಸಿಲ್ಲ. ಅಂದಿನ 'ಕನ್ನಡ ನುಡಿ' 'ಪರಿಷತ್ ಪತ್ರಿಕೆ' ಸಮ್ಮೇಳನಗಳ ವಿಶೇಷ ಸಂಚಿಕೆ, ಪತ್ರಿಕಾ ವರದಿ ಉಪಯೋಗಿಸಿಕೊಂಡು ಶಾಸ್ತ್ರಿಗಳು ಸಲ್ಲಿಸಿದ ಸೇವೆ ಬಗ್ಗೆ ವಿಶೇಷ ವರದಿಯನ್ನು ಸಿದ್ಧಪಡಿಸಬೇಕಾಗಿದೆ. 1956–1964ರವರೆಗೆ ಸುಮಾರು 100 ತಿಂಗಳ ಕಾಲ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿ ಶಾಸ್ತ್ರಿಗಳು ಕನ್ನಡ ತಾಯಿಯ ಋಣವನ್ನು ತೀರಿಸಿದರು. ತಾವು ಸಂಗ್ರಹಿಸಿದ ಓಲೆಗರಿ ಕಟ್ಟು, ತಾಮ್ರಶಾಸನಗಳನ್ನು ಮೈಸೂರು, ಕರ್ನಾಟಕ, ಬೆಂಗಳೂರು ಮತ್ತು ಮೈಸೂರಿನಲ್ಲಿರುವ ಪ್ರಾಚ್ಯ ವಿದ್ಯಾಸಂಸ್ಥೆಗಳಿಗೆ ದಾನವಾಗಿ ನೀಡಿದರು. ತಮ್ಮ ಜೀವನದ ನಂತರ ತಮ್ಮ ಗ್ರಂಥಭಂಡಾರವನ್ನು ಬಸವ ಸಮಿತಿಗೆ ನೀಡಿ ಪ್ರೋತ್ಸಾಹಿಸಿದರು. ಹೇಗೆ ಸಂಗ್ರಹಿಸಿದರೋ ಹಾಗೆಯೇ ಧರ್ಮಬುದ್ಧಿಯಿಂದ ವಿತರಿಸಿದರು.

ನನಗೆ ತಿಳಿದ ಮಟ್ಟಿಗೆ ಹಳೆಯ ವಿದ್ವಾಂಸರ ಗ್ರಂಥಭಂಡಾರ ಅವರ ನಿಧನಾನಂತರ ಇದ್ದ ಜಾಗದಲ್ಲೇ ಕರಗಿ ನಾಶವಾಗಿದೆ. ಶಾಸ್ತ್ರಿಗಳ ಸಂಗ್ರಹದಲ್ಲಿ ಇದ್ದ ಸಾವಿರಾರು ಕಾಗದಪತ್ರಗಳು, ಮುದ್ರಿತ ಕರಪತ್ರಗಳು ಮುಂತಾದವು ಪೋಷಣೆ ಇಲ್ಲದೆ ನಾಶವಾಗಿ ಹೋದದ್ದು ಮಾತ್ರ ದುರಂತ. ಈ ವಿಷಯವನ್ನು ತಿಳಿದು ನಾನು ಹತ್ತಾರು ದಿವಸ ಪೇಚಾಡಿದ್ದೂ ಉಂಟು.

1973ರ ಸುಮಾರಿಯಲ್ಲಿ ಶಾಸ್ತ್ರಿಗಳು ಗುಬ್ಬಿ ಶ್ರೀ ಚನ್ನಬಸವೇಶ್ವರ ಸ್ವಾಮಿ ಸುಪ್ರಭಾತ ಗ್ರಾಮಾಫೋನ್ ಬಿಡುಗಡೆಗೆ ಗುಬ್ಬಿಗೆ ಬರುವವರಿದ್ದರು. ಆ ದಿನ ನಾನು ಹಠ ಮಾಡಿ ಕಾರ್ಯಕ್ರಮಕ್ಕೆ ಹೋಗುತ್ತೇನೆ ಎಂದು ಹೇಳಿದೆ. ಅದರೆ ನನ್ನ ಅಮ್ಮ ಶಾಲೆ ತಪ್ಪಿಸಬಾರದು ಎಂದು ಸ್ಪಷ್ಟವಾಗಿ ಹೇಳಿದ್ದರಿಂದ ನಾನು ಶಾಶ್ವತವಾಗಿ ಶಾಸ್ತ್ರಿಗಳ ದರ್ಶನದಿಂದ ವಂಚಿತನಾದೆ. ಅವರ ದರ್ಶನ ಭಾಗ್ಯ ಇಲ್ಲದೆ ಹೋಯಿತು. ಶಾಸ್ತ್ರಿಗಳು 15–1–1976ರಂದು ಮಹಾಲಿಂಗದಲ್ಲಿ ಲೀನರಾದರು. ಅವರ ಅಂತ್ಯಕ್ರಿಯೆ ಅವರ ಅಪೇಕ್ಷೆಯಂತೆ ಸಿದ್ಧಗಂಗಾ ಕ್ಷೇತ್ರದಲ್ಲಿ ಪರಮಪೂಜ್ಯ ಶಿವಕುಮಾರ ಸ್ವಾಮಿಗಳ ನೇತೃತ್ವದಲ್ಲಿ ನೆರವೇರಿತು.

□

# ಶರಣ ಸಂಸ್ಕೃತಿ – ಒಂದು ಅವಲೋಕನ

ಎಚ್.ಎಸ್. ಸಿದ್ಧಗಂಗಪ್ಪ

(ಮುಂದುವರಿದಿದೆ)

ಶರಣ ಹಡಪದ ಅಪ್ಪಣ್ಣ ಆಚಾರದ ಮಹತ್ವ ಹಾಗೂ ಆಚರಣೆಯನ್ನು ಕುರಿತು ಹೀಗೆ ಅಭಿಪ್ರಾಯಪಟ್ಟಿದ್ದಾನೆ:

ಆಚಾರದ ಅರಿವು ಹೊರಗಾದ ಮೇಲೆ
ಅಂಗದ ಮೇಲೆ ಲಿಂಗವಿದ್ದು ಫಲವೇನು!
ಕುರುಡನ ಕೈಯ ಕನ್ನಡಿ ಇದ್ದ ಹಾಗೆ
ಬರಡಾವಿಗೆ ಶಿಶು ಹುಟ್ಟಿದ ಹಾಗೆ
ಕುರುಡಗೆ ಕಣ್ಣ ಬೇನೆ ಬಂದ ಹಾಗೆ
ಕುರುಡಿಗೆ ಮಕ್ಕಳಾದ ಹಾಗೆ
ದೀನನ ಮನೆಯಲ್ಲಿ ಹೊನ್ನಿದ್ದ ಹಾಗೆ
ಇವರೇನ ಮಾಡಿದರೇನು!
ತಮ್ಮ ಹಾನಿವೃದ್ಧಿಯನರಿಯದನ್ನಕ್ಕ
ಕಾಲಕಾಮಾದಿಗಳ ಬಾಯೊಳಗೆ ಸಿಲ್ಕಿ
ಅಗಿದಗಿದು ತಿನಿಸಿ ಕೇಳುತಿಪ್ಪರಲ್ಲ
ಎನ್ನ ದೇವ ಬಸವಪ್ರಿಯ ಕೂಡಲಚೆನ್ನಬಸವಣ್ಣಾ

ಆಚಾರವನ್ನು ಜೀವನದಲ್ಲಿ ಅಳವಡಿಸಿಕೊಳ್ಳದೆ ಹೋದರೆ ಅದು ಕುರುಡನ ಕೈಯಲ್ಲಿ ಕನ್ನಡಿ ಇದ್ದಂತೆ, ಎಲ್ಲವೂ ವ್ಯರ್ಥ ಎಂಬುದನ್ನು ಹಲವಾರು ಉಪಮೆಗಳ ಮೂಲಕ ಸ್ಪಷ್ಟಪಡಿಸಿದ್ದಾನೆ.

ಮಹಾಜ್ಞಾನಿ ಚೆನ್ನಬಸವಣ್ಣ ಆಚಾರದ ಮಹತ್ವವನ್ನು ತನ್ನ ವಚನವೊಂದರಲ್ಲಿ ಹೀಗೆ ಪರಿಚಯ ಮಾಡಿಕೊಟ್ಟಿದ್ದಾನೆ:

ಅರಿವುಳ್ಳಡೆ ಗುರು
ಆಚಾರವುಳ್ಳಡೆ ಲಿಂಗ
ಆಚಾರವುಳ್ಳಡೆ ಜಂಗಮ
ಆಚಾರವುಳ್ಳಡೆ ಪಾದೋದಕ
ಆಚಾರವುಳ್ಳಡೆ ಪ್ರಸಾದ
ಆಚಾರವುಳ್ಳಡೆ ಸದ್ಭಕ್ತ
ಆಚಾರವುಳ್ಳಡೆ ದಾಸೋಹ

ಆಚಾರವಿಲ್ಲದಿದ್ದಡೆ ಗುರುವಲ್ಲ, ನರನು
ಆಚಾರವಿಲ್ಲದಿದ್ದಡೆ ಲಿಂಗವಲ್ಲ, ಶಿಲೆ
ಆಚಾರವಿಲ್ಲದಿದ್ದಡೆ ಜಂಗಮನಲ್ಲ, ವೇಷಧಾರಿ
ಆಚಾರವಿಲ್ಲದಿದ್ದಡೆ ಪಾದೋದಕವಲ್ಲ, ನೀರು
ಆಚಾರವಿಲ್ಲದಿದ್ದಡೆ ಪ್ರಸಾದವಲ್ಲ, ಅಶನ
ಆಚಾರವಿಲ್ಲದಿದ್ದಡೆ ಭಕ್ತನಲ್ಲ, ಭೂತಪ್ರಾಣಿ
ಆಚಾರವಿಲ್ಲದಿದ್ದಡೆ ದಾಸೋಹದ ಮನೆಯಲ್ಲ, ವೇಶಿಯ ಗುಡಿಸಲು
ಇದು ಕಾರಣ, ಕೂಡಲಸಂಗಯ್ಯಾ
ಆಚಾರವಿಲ್ಲದವರಿಗೆ ನಾಯಕನರಕ ತಪ್ಪದು

ಆಚಾರವನ್ನು ಕುರಿತು ಅತ್ಯಂತ ಸರಳವಾಗಿ ಇಲ್ಲಿ ನಿರೂಪಿಸಲಾಗಿದೆ. ಆಚಾರವಿಲ್ಲದ ಮನುಷ್ಯ ನೈತಿಕ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಿವನಿಗೆ ಹತ್ತಿರವಾಗುತ್ತಾನೆ. ಆಚಾರವನ್ನು ಬಿಟ್ಟವನು ಶಿವನಿಂದ ದೂರವಾಗಿ ನರಕದಲ್ಲಿ ತಾನೂ ಒಬ್ಬನಾಗುತ್ತಾನೆ ಎಂದಿದ್ದಾರೆ.

ಅರಿವಿನೊಳಗೊಂಡ ಆಚಾರ ಶಿವಶರಣರದು. ವೂಶರಣ ಮಡಿವಾಳ ಮಾಚಯ್ಯ ಅರಿವನ್ನು ಕುರಿತು ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾನೆ.

ಅರಿವನರಿದನೆಂದು ಕ್ರಿಯೆ ಬಿಡಬಾರದು
ಮಧುರಕ್ಕೆ ಮಧುರ ಒದಗಲಾಗಿ ಸವಿಗೆ ಕೊರತೆಯುಂಟೇ?
ದ್ರವ್ಯಕ್ಕೆ ದ್ರವ್ಯ ಕೂಡಲಾಗಿ ಬಡತನಕೆಡೆವುಂಟೆ?
ನೀ ಮಾಡುವ ಮಾಟ ಶಿವಪೂಜೆಯ ನೋಟ ಭಾವವಿರಬೇಕು.
ಅದು ಕಲಿದೇವರ ದೇವಯ್ಯನ ಕೂಟ ಚಂದಯ್ಯ.

ಶರಣರ ಆಚಾರ ಮತ್ತು ಜ್ಞಾನಗಳು ಕ್ರಿಯೆಯಿಂದ ಸಮ್ಮಿಳಿತಗೊಂಡುದು. ಹೀಗೆ ಸತ್ಕ್ರಿಯಾಚಾರದ ಭದ್ರತಳಹದಿಯ ಮೇಲೆ ಶಿವಶರಣರು ತಮ್ಮ ಸಂಸ್ಕೃತಿಯ ಭವ್ಯ ಸೌಧ ಕಟ್ಟಿದರು. ನಿರಂತರವಾದ ಸಾಧನೆಯಿಂದ ಜಾಗೃತಿಯಿಂದ ಶಿವಪರವಾದ ಗುಣ ಗಳನ್ನು ಅಳವಡಿಸಿಕೊಂಡರು. ಹಾಗೆ ಗುಣಗಳನ್ನು ಸಂಪಾದಿಸುವುದು ಸುಲಭವಾದ ಮಾತಲ್ಲ. 'ಆಚಾರವೆಂಬುದು ಕೂರಲಗು, ತಪ್ಪಿ ಬಂದರೆ ಪ್ರಾಣವ ತಗಲುವುದು, ಅದು ಕಾರಣ ಅರಿತು ಆಚರಿಸಬೇಕು' ಎನ್ನುವ ಚೆನ್ನಬಸವಣ್ಣ ಐವತ್ತು ತೆರದ ಆಚಾರಗಳನ್ನು ಉಲ್ಲೇಖಿಸಿದರೆ, ಬಸವಣ್ಣನವರು ತಾನು ಅರಿತು ಆಚರಿಸುತ್ತಿದ್ದ 52 ತೆರನಾದ ಆಚಾರಗಳ ಪಟ್ಟಿಯನ್ನು ಕೊಟ್ಟಿರುವರು. ಈ ಆಚಾರಗಳ ಸಾಧನೆಯಿಂದ ಪ್ರಕೃತಿಗುಣಗಳು ಅಳಿದು ಲಿಂಗಗುಣಗಳು ನೆಲೆಗೊಳ್ಳುತ್ತವೆ. ಅಷ್ಟಾವರಣ, ಷಟ್‌ಸ್ಥಲಗಳು ಇದಕ್ಕೆ ನೆರವಾಗುವು ದರಿಂದ ಇವೆಲ್ಲವುಗಳನ್ನೂ ಒಟ್ಟಾಗಿ. 'ಸರ್ವಾಚಾರಸಂಪತ್ತು' ಎಂದು ಕರೆದಿರುವರು.[6]

ಶರಣರ ಧಾರ್ಮಿಕ ಸಾಧನೆಗೆ ಆಧಾರಭೂತ ಪ್ರಮುಖ ನೈತಿಕ ಹಿನ್ನೆಲೆ ಪಂಚಾಚಾರಗಳು, ಇವು ನೈತಿಕ ವಿಷಯವನ್ನು ಕುರಿತವು. ಇವುಗಳ ಸ್ವರೂಪವನ್ನು ಚೆನ್ನಬಸವಣ್ಣ ಹೀಗೆ ನಿರೂಪಿಸಿದ್ದಾನೆ:

ಲಿಂಗಾಚಾರ ಸದಾಚಾರ ಶಿವಾಚಾರ ಗಣಾಚಾರ ಭೃತ್ಯಾಚಾರವೆಂಬ
ಪಂಚಾಚಾರವ ಆಚರಣೆಯಂತೆಂದಡೆ
ಲಿಂಗವಲ್ಲದೆ ಅನ್ಯವರಿಯದಿಹುದೇ ಲಿಂಗಾಚಾರ
ಸಜ್ಜನ ಕಾಯಕದಲ್ಲಿ ತಂದು ಗುರುಲಿಂಗ ಜಂಗಮಕ್ಕೆ ನೀಡಿ
ಸತ್ಯಶುದ್ಧನಾಗಿರುವುದೇ ಸದಾಚಾರ
ಶಿವಭಕ್ತರಲ್ಲಿ ಕುಲಗೋತ್ರ ಜಾತಿ ವರ್ಣಾಶ್ರಮವನರಸದೆ
ಅವರೊಕ್ಕುದ ಕೊಂಬುದೇ ಶಿವಾಚಾರ
ಶಿವಾಚಾರದ ನಿಂದೆಯ ಕೇಳದಿಹುದೆ ಗಣಾಚಾರ
ಶಿವಶರಣರೆ ಹಿರಿಯರಾಗಿ ತಾನೇ ಕಿರಿಯನಾಗಿ
ಭಯಭಕ್ತಿಯಿಂದ ಆಚರಿಸುವುದೇ ಭೃತ್ಯಾಚಾರ
ಇಂತೀ ಪಂಚಾಚಾರವುಳ್ಳ ಭಕ್ತರ ಒಕ್ಕುದನಕ್ಕಿ ಸಲಹಯ್ಯ
ಪ್ರಭುವೇ ಕೂಡಲ ಚನ್ನಸಂಗಮದೇವಾ.

ಪಂಚಾಚಾರಗಳನ್ನು ಕುರಿತು ಚೆನ್ನಬಸವಣ್ಣ ತುಂಬಾ ಅರ್ಥಪೂರ್ಣವಾಗಿ ವಿವರಿಸಿದ್ದಾರೆ. ವೀರಶೈವ ಮಾರ್ಗಕ್ಕೆ ಪಂಚಾಚಾರಗಳು ನೈತಿಕ ತಳಹದಿಯನ್ನು ಹಾಕಿಕೊಟ್ಟಿವೆ. ಮೇಲಿನ ಐದು ಆಚಾರಗಳಲ್ಲಿ ಶರಣರು ಪ್ರತಿಪಾದಿಸಿದ ನೈತಿಕ ನಿಷ್ಠೆ, ಪೂರ್ಣ ದೃಷ್ಟಿ ಇವು ಅವರು ಜೀವನವನ್ನು ಕಂಡುದರ ಸಂಕೇತ.

ಲಿಂಗಾಂಗಸಾಮರಸ್ಯ ಎಂಬುದು ವೀರಶೈವ ಧರ್ಮ ಸಾಧನೆಯ ಪರಮಸಿದ್ಧಿ. 'ಲಿಂಗವಲ್ಲದೇ ಅನ್ಯವನು ಅರಿಯದಿಹುದೆ ಲಿಂಗಾಚಾರ' ಎನ್ನುವ ಚೆನ್ನಬಸವಣ್ಣ ಅದು ಶರಣರ ಪಾಲಿಗೆ ಮಹಾಸಂಪತ್ತು ಎಂದಿದ್ದಾರೆ.

ಲಿಂಗವನರಿದರೆ ಮನ ನಿಚ್ಚಣಿಗೆ
ಜಂಗಮವನರಿತರೆ ಧನ ನಿಚ್ಚಣಿಗೆ
ಪ್ರಸಾದವನರಿವರೆ ತನು ನಿಚ್ಚಣಿಗೆ
ಈ ಪವಿತ್ರವನರಿವರೆ ತ್ರಿವಿಧ ನಿಚ್ಚಣಿಗೆ
ಇದು ಕಾರಣ ಕೂಡಲಚನ್ನಸಂಗನ
ಶರಣಂಗಲ್ಲದಿಲ್ಲವೀ ಸಂಪತ್ತು

ಈ ಸಂಪತ್ತನ್ನು ತಮ್ಮದಾಗಿಸಿಕೊಳ್ಳಬೇಕಾದರೆ ಶರಣರು ಅರಿವಿನ ನೆಲಗಟ್ಟಿನ ಮೇಲೆ ನಿಂತು ಸಾಧನೆ ಮಾಡಬೇಕು. ಇಷ್ಟ ಲಿಂಗವು ಧಾರ್ಮಿಕ ಸಾಧನೆಯಿಂದ ಶರಣರ ಅಂತ್ಯದವರೆಗೆ ಅವಿಭಾಜ್ಯ ಅಂಗವಾಗಿದೆ. ವೈಯಕ್ತಿಕ ವಿಕಾಸದ ಜೊತೆ ಸಾಮಾಜಿಕ ಸಮತೆಯನ್ನು ಜಾರಿಗೆ ತಂದರು. ವರ್ಗ, ವರ್ಣ, ಜಾತಿ ಮತ ಪಂಥಗಳ ತಾರತಮ್ಯವನ್ನು ಕಿತ್ತೆಸೆದು ಲಿಂಗದ ಕಳೆ, ಲಿಂಗದ ನುಡಿ, ಲಿಂಗದ ನೋಟ, ಲಿಂಗದ ಕೂಟ ಗಮನಿಸುವುದೇ ಲಿಂಗಾಚಾರ. ಇಂತಹ ಮಹತ್ವಪೂರ್ಣ ಪರಿಣಾಮದಿಂದ, ಸಮಾಜದಲ್ಲಿ ಅಸ್ಪೃಶ್ಯರೆನಿಸಿ ಪುರೋಹಿತಶಾಹಿಗಳಿಂದ ಬಹು ದೂರವೇ ಉಳಿದಿದ್ದ ಮಾದಾರ ಚೆನ್ನಯ್ಯ, ಡೋಹರ ಕಕ್ಕಯ್ಯ, ಹರಳಯ್ಯ, ಧೂಳಯ್ಯ, ಶಿವನಾಗಮಯ್ಯರು

ಅಸ್ಪೃಶ್ಯತೆಯ ಕೂಪದಿಂದ ಹೊರಬಂದು ಲಿಂಗಧಾರಿಗಳಾಗಿ, ಸಾಧನೆಯಿಂದ ಹಿರಿಯ ಮಾಹೇಶ್ವರರಾದರು. ವೈಯಕ್ತಿಕ ಸಾಧನೆಯಲ್ಲಿ ಅತ್ಯುನ್ನತ ವರ್ಣದವರೊಡನೆ ಧಾರ್ಮಿಕ ಸಮಾನತೆಯನ್ನು ಪಡೆದರು. ಸಾಮಾಜಿಕ ಮತ್ತು ಧಾರ್ಮಿಕ ಸಮತೆಯ ಹಿನ್ನೆಲೆಯಲ್ಲಿ ನೈತಿಕ ನಿಯಮವನ್ನು ಅಳವಡಿಸಿಕೊಂಡು ಪಾಲಿಸುವಲ್ಲಿ ಶರಣರು ಸಂಪೂರ್ಣ ಯಶಸ್ವಿಯಾದರು.

ಇಷ್ಟಲಿಂಗಕ್ಕೆ ಒಂದು ವಿಶಿಷ್ಟವಾದ ಶಕ್ತಿ ಇದೆ. ಚಂಚಲವಾದ ಮನಸ್ಸನ್ನು ಚಿತ್ತದಲ್ಲಿ ಕೇಂದ್ರೀಕರಿಸುವ ಶಕ್ತಿ ಇಷ್ಟಲಿಂಗಕ್ಕಿದೆ. ಅಂಗದ ಮೇಲೆ ಲಿಂಗಸ್ಥಾಪನೆಯಾದ ಬಳಿಕ ಜಗತ್ತಿನ ಯಾವ ಚಿಂತೆಗಳೂ ಸಾಧಕನನ್ನು ಬಾಧಿಸಲಾರವು. 'ಅರುಹು ಪೂಜಿಸಲು ಕುರುಹು ಕೊಟ್ಟರೆ, ಅರುಹು ಮರೆದು ಕುರುಹು ಪೂಜಿಸುವ ಕುರುಬನ ನೋಡಾ' ಎಂದು ಶರಣರು ಸಾಧನಾಪಥದಲ್ಲಿ ಸಾಗುವವರಿಗೆ ಕಿವಿಮಾತು ಹೇಳಿದರು. ಗುರುವು ಕರುಣಿಸಿ ಕೊಟ್ಟ ಇಷ್ಟಲಿಂಗವು ಸಾಧನೆಯ ಸಾರಸರ್ವಸ್ವವಾಗಬೇಕು. ಶರಣ ಬಾಹೂರ ಬೊಮ್ಮಣ್ಣ ಹೇಳಿರುವಂತೆ –

ಗುರುನಿಷ್ಠೆ, ಲಿಂಗನಿಷ್ಠೆ, ಜಂಗಮನಿಷ್ಠೆ
ಈ ತ್ರಿವಿಧ ನಿಷ್ಠೆಯಲ್ಲಿ ಏಕಾಂಗ ಲಿಂಗನಿಷ್ಠೆ
ವೀರಧೀರಂಗಲ್ಲದಾಗದು
ಇದು ಸಂಗನ ಬಸವಣ್ಣನಿಂದ ಬಂದ ಸಂತತಿಗಲ್ಲವಾಗದು
ಬ್ರಹ್ಮೇಶ್ವರ ಲಿಂಗವನರಿವುದಕ್ಕೆ
ತ್ರಿಗುಣಸಂದೇಹಿಗಳಿಗೆ ವಸ್ತು ಸಂಧಿಸದು ನೋಡಾ.

ಮಾತು ಲಿಂಗಾಚಾರದ ಮೇಲಿರಿಸಿದ ನಿಷ್ಠೆಗೆ ದ್ಯೋತಕವಾಗಿದೆ. ಲಿಂಗಾಚಾರದ ಮುಂದಿನ ಹಂತ ಸದಾಚಾರ. ಅದು ವ್ಯಕ್ತಿಯ ಪರಿಶುದ್ಧ ಸಾತ್ವಿಕ ಜೀವನಕ್ಕೆ ಆಧಾರಭೂತವಾದದ್ದು. ಲಿಂಗಾಚಾರದ ಸಾರ್ಥಕತೆ, ನೈತಿಕ ಜೀವನಕ್ಕೆ ಪ್ರಾಶಸ್ತ್ಯ ಉಂಟಾಗುವುದು ಸದಾಚಾರದಲ್ಲಿ–

ಕಾಮವುಳ್ಳವರಿಗೆ ಕಾಯ ಸಂಗ ಮೆಚ್ಚು ನೋಡಾ
ಕಾಮವಿಲ್ಲದವರಿಗೆ ಲಿಂಗಸಂಗ ಮೆಚ್ಚು ನೋಡಾ
ಕಾಮವಿಕಾರಿ ಕಾಯದತ್ತ ಮುಂತಾದಡೆ
ನಾ ನಿಮಿತ್ತ ಮುಂತಾದೆ
ಚೆನ್ನಮಲ್ಲಿಕಾರ್ಜುನಯ್ಯಾ
ಕಾಮವಿಕಾರಿಯ ಸಂಗವ ಹೊದ್ದಿದಡೆ ನಿಮ್ಮಾಣೆ

ಎಂಬ ಅಕ್ಕಮಹಾದೇವಿಯ ಲಿಂಗಾಚಾರದಲ್ಲಿ ನೈತಿಕ ಜೀವನದ ನೆಲೆಗಟ್ಟಿನ ಮೇಲೆ ದೃಢವಾಗಿ ನಿಲ್ಲಬೇಕೆಂಬ ಧ್ವನಿ ಇದೆ. ಕಪಟ, ಹುಸಿ, ಕಳವು, ಕೋಪ, ವಂಚನೆ ಮುಂತಾದ ದುರ್ಗುಣಗಳು ಶರಣನ ಲಿಂಗಭಕ್ತಿಗೆ ಅಪಾಯ ಉಂಟುಮಾಡುವಂತಹವು. ಅದಕ್ಕೆ ಮಹಾದೇವಿಯಕ್ಕ ಭಾವಭರಿತಳಾಗಿ–

ಸಜ್ಜನಳಾಗಿ ಮಜ್ಜನಕ್ಕೆರೆವೆ
ಶಾಂತಳಾಗಿ ಪೂಜೆಯ ಮಾಡುವೆ
ಸಮರತಿಯಿಂದ ನಿಮ್ಮ ಹಾಡುವೆ

ಎಂಬ ದಿಟ್ಟ ನಿಲುವನ್ನು ತಾಳಿದ್ದಾಳೆ. ನೈತಿಕ ಜೀವನದ ನಿಷ್ಠೆ ಇಲ್ಲಿ ಪರಿಣಾಮಕಾರಿಯಾಗಿ ಅಭಿವ್ಯಕ್ತಗೊಂಡಿದೆ.

ಶರಣ ಸಂಸ್ಕೃತಿಯಲ್ಲಿ ದಯೆಗೆ ಆತ್ಯಂತಿಕ ಮಹತ್ವವನ್ನು ನೀಡಲಾಗಿದೆ. ದಯೆಯನ್ನು ವೈಯಕ್ತಿಕ ಹಾಗೂ ಸಾಮಾಜಿಕ ಜೀವನದ ಶಾಶ್ವತ ಮೌಲ್ಯವೆಂದು ಶರಣರು ಸಾರಿದರು. ದಯೆಯನ್ನು ಕುರಿತು ಬಸವಣ್ಣನವರ ವಚನ ಪ್ರಸಿದ್ಧವಾಗಿದೆ:

ದಯವಿಲ್ಲದ ಧರ್ಮವದೇವುದಯ್ಯಾ!
ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ
ದಯವೇ ಧರ್ಮದ ಮೂಲವಯ್ಯಾ
ಕೂಡಲಸಂಗಯ್ಯನಂತಲ್ಲದೊಲ್ಲನಯ್ಯಾ

ಯಾವುದೇ ಧರ್ಮಕ್ಕೂ ದಯವೇ ಅಡಿಪಾಯ. ದಯವಿಲ್ಲದ ಧರ್ಮ ನಾಯಿ ಮೊಲೆಯಲ್ಲಿರುವ ಹಾಲಿನಷ್ಟೇ ಅಪ್ರಯೋಜನಕಾರಿ. ದಯೆಯನ್ನು ಜೀವನದಲ್ಲಿ ಅಳವಡಿಸಿಕೊಂಡವನು, ಸರ್ವಜೀವಿಗಳಲ್ಲಿ ಅನುಕಂಪ ಇರುವವನು ಯಾವ ಜೀವಿಯನ್ನೂ ಹಿಂಸಿಸಲಾರ. ಅವುಗಳ ಬಗ್ಗೆ ಅವನು ಅಪಾರವಾದ ಅನುಕಂಪ ವ್ಯಕ್ತಪಡಿಸುವನು. ಜಗತ್ತನ್ನು ಆವರಿಸಿರುವ ಪರಮಾತ್ಮನ ಚಿತ್ ಶಕ್ತಿಯನ್ನು ಧರಿಸಿಕೊಂಡ ಸಾಧಕನಿಗೆ ಯಾರನ್ನು ಹಿಂಸಿಸಿದರೂ ಅದು ನನ್ನ ಆತ್ಮ ಹಿಂಸೆಯೇ ಆಗುವುದೆಂಬ ಮನೋಭಾವ ಶರಣರಲ್ಲಿ ಜಾಗೃತವಾಯಿತು. 'ಎಲೆ ಹೋತೆ, ಕೊಲ್ಲುವವನ ಮುಂದೆ ಅಳು ಕಂಡ್ಯ' ಎಂಬಲ್ಲಿ ಅವರ ಅನುಕಂಪ, ಅಂಥ ಕ್ರೂರ ಆಚರಣೆಯ ಹಿಂದಿನ ವಿಡಂಬನೆ ಒಂದು ಮುಖವಾದರೆ; ಅದರ ಹಿಂದೆಯೇ ಕರುಣೆ, ಅಹಿಂಸೆ, ದಯೆ ಎಂಬ ಮೌಲ್ಯಗಳನ್ನು ಸದಾಚಾರದ ದೃಢ ಹೆಜ್ಜೆಗಳು ಎಂದು ಹೇಳುತ್ತಿರುವಂತೆ ಭಾಸವಾಗುತ್ತದೆ.

ಸದಾಚಾರದಲ್ಲಿ ಕಂಡುಬರುವ ಮತ್ತೊಂದು ಪ್ರಮುಖವಾದ ನಿಷ್ಠೆ ಸತ್ಯಶುದ್ಧಶೀಲ. 'ಸತ್ಯಂ ಶಿವಂ ಸುಂದರಂ' ಸತ್ಯದಲ್ಲಿ ಶಿವನನ್ನು ಕಾಣುವ ಅಂತರಂಗದ ದೃಷ್ಟಿ. 'ಸತ್ಯವೇ ಶಿವನ ಆವಾಸಸ್ಥಾನ', 'ಸತ್ಯದ ಮನೆಯಲ್ಲಿ ಶಿವನಿರ್ಪನಲ್ಲದೆ ಅಸತ್ಯದ ಮನೆಯಲ್ಲಿ ಶಿವನಿರ್ಪನೆ' ಎನ್ನುವ ಶರಣರು, ಸತ್ಯಕ್ಕೆ ನೀಡಿದ ಮಹತ್ವ ದೊಡ್ಡದು. ಇದನ್ನೇ ಬಸವಣ್ಣನವರ 'ನುಡಿಯಲ್ಲಿ ಎಚ್ಚೆತ್ತು ನಡೆಯಲ್ಲಿ ತಪ್ಪಿದಹಡೆ ಹಿಡಿದಿರ್ದ ಲಿಂಗ ಘಟಸರ್ಪ' ಆಗುವುದು ಎಂದಿದ್ದಾರೆ. ಅವರ ಮಾತಿನಲ್ಲಿದ್ದ ನೈತಿಕ ನಿಷ್ಠೆ ಅವರ ಮನದಲ್ಲಿಯೂ ನೆಲೆ ನಿಂತವು. ಅಂತೆಯೇ ಅವರು ಜಗತ್ತಿಗೆ ಸಾರಿದುದು 'ಸಜ್ಜನ ಸದಾಚಾರದಲ್ಲಿ ವರ್ತಿಸಿ ಸತ್ಯವನರಿಯುವುದೇ ಶೀಲ' ಎಂದು.

ಶರಣ ಸಂಸ್ಕೃತಿಯ ಸಾರಸರ್ವಸ್ವ ಬಸವಣ್ಣನವರು ಹೇಳಿರುವ ಸಪ್ತ ಸೂತ್ರಗಳಲ್ಲಿ ಅಂತರ್ಗತವಾಗಿದೆ.

> ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ
> ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ
> ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ
> ಇದೇ ಅಂತರಂಗಶುದ್ಧಿ, ಇದೇ ಬಹಿರಂಗಶುದ್ಧಿ
> ಇದೇ ನಮ್ಮ ಕೂಡಲಸಂಗಮದೇವರನೊಲಿಸುವ ಪರಿ

ಸತ್ಯ ಶುದ್ಧ ಶೀಲ ಜೀವನಕ್ಕೆ ಅಗತ್ಯವಾದ ಸಪ್ತಸೂತ್ರಗಳನ್ನು ಬಸವಣ್ಣನವರು ಇಲ್ಲಿ ಹೇಳಿದ್ದಾರೆ. ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಈ ಸೂತ್ರಗಳು ಯಾವುದೇ ಜಾತಿಗೆ, ವರ್ಗಕ್ಕೆ ಸೀಮಿತವಾದುದಲ್ಲ. ಇಡೀ ಮಾನವ ಜನಾಂಗಕ್ಕೇ ಅನ್ವಯ ಆಗುತ್ತದೆ. ಈ ವಚನ ಜನಸಾಮಾನ್ಯರಿಗೂ ಅನ್ವಯವಾಗುವಂತೆ ಸರಳವಾಗಿದೆ. ಬಸವಣ್ಣನವರ ಹೃದಯದಿಂದ ಮೂಡಿಬಂದ ಮಾತು ನೇರವಾಗಿ ಹೃದಯವನ್ನೇ ತಟ್ಟುತ್ತದೆ.

ಕಳ್ಳತನ ಮಾಡಬಾರದು, ಪ್ರಾಣಿಗಳನ್ನು ಕೊಲ್ಲಬಾರದು, ಇಲ್ಲಿ ಪ್ರಾಣಿಗಳು ಮಾತ್ರವಲ್ಲ ಮನುಷ್ಯನ ಭಾವನೆಗಳನ್ನೂ ಕೊಲ್ಲಬಾರದೆಂಬ ಅರ್ಥವನ್ನು ನಾವು ಗ್ರಹಿಸಬೇಕು. ಸುಳ್ಳು ಹೇಳಬಾರದು, ಕೋಪಗೊಳ್ಳಬಾರದು, ಕೋಪ ನಮ್ಮನ್ನೇ ಸುಡುತ್ತದೆ ಎಂಬುದನ್ನು ಮರೆಯಬಾರದು. ಎಷ್ಟೇ ಅಸಹ್ಯವಾಗಿದ್ದರೂ ಇತರರ ಬಗ್ಗೆ ಅಸಹ್ಯ ಪಟ್ಟುಕೊಳ್ಳಬಾರದು. ಇದು ಒಂದು ರೀತಿಯಲ್ಲಿ ಮಾತೃವಾತ್ಸಲ್ಯವನ್ನು ನೆನಪು ಮಾಡುತ್ತದೆ. ಇಲ್ಲದ ಗುಣಗಳನ್ನು ತನಗೆ ತಾನೇ ಆರೋಪಿಸಿಕೊಳ್ಳುವುದು, ತನಗೆ ಬೇಡವಾದವರನ್ನು ಹಳಿಯುವುದು ಸುಸಂಸ್ಕೃತನ ಲಕ್ಷಣವಲ್ಲ. ಅಂತವರಿಂದ ಸಮಾಜದ ಸ್ವಾಸ್ಥ್ಯ ಕದಡುತ್ತದೆ. ಈ ಮೇಲಿನ ಸಪ್ತಸೂತ್ರಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಅನುಷ್ಠಾನಕ್ಕೆ ತಂದುದೇ ಆದರೆ ವ್ಯಕ್ತಿ ತಾನು ಪರಿಶುದ್ಧನಾಗುತ್ತಾನೆ. ಇದರಿಂದ ಸಮಾಜವು ಪರಿಶುದ್ಧವಾಗುತ್ತದೆ. ಯಾರು ಅಂತರಂಗ ಮತ್ತು ಬಹಿರಂಗ ಗಳೆರಡರಲ್ಲೂ ಏಕತಾನತೆಯನ್ನು ಸಾಧಿಸುತ್ತಾರೋ ಅಂತಹವರು ಕೂಡಲಸಂಗಮದೇವನಿಗೆ ಹತ್ತಿರವಾಗುತ್ತಾರೆ.

ಡಾ. ಎಚ್. ತಿಪ್ಪೇರುದ್ರಸ್ವಾಮಿಯವರು ವಿವರಿಸುವಂತೆ ಸದಾಚಾರದಲ್ಲಿ ವಿವಿಧ ರೀತಿಯ ಶೀಲಗಳು ಅಡಕಗೊಂಡಿವೆ. ಅವುಗಳೆಂದರೆ ಉತ್ತಮ ಶೀಲ, ಉತ್ಕಟ ಶೀಲ, ಆಚಾರ ಶೀಲ, ಉದ್ಯೋಗ ಶೀಲ, ಉತ್ಪನ್ನ ಶೀಲ, ಸಂಬಂಧ ಶೀಲ, ಪ್ರಸನ್ನ ಶೀಲ, ಜ್ಞಾನ ಶೀಲ. ದೀಕ್ಷೆಯನ್ನು ಪಡೆದ ನಂತರ ಲಿಂಗಪೂಜೆ, ಧ್ಯಾನಾದಿಗಳಿಂದ ಲಿಂಗಗುಣಗಳನ್ನು ಅಳವಡಿಸಿಕೊಳ್ಳುವ ಪ್ರಯತ್ನವನ್ನು ಉತ್ಪನ್ನ ಶೀಲ; ತಾನೊಬ್ಬನು ಮಾತ್ರವಲ್ಲದೆ ಇತರರನ್ನು ಅದರಲ್ಲಿ ತೊಡಗಿಸಿಕೊಳ್ಳಲು ನೆರವಾಗುವುದು ಆಚಾರಶೀಲ, ಉದ್ಯೋಗಶೀಲ ಸದಾಚಾರದಲ್ಲಿ ಬಹಳ ಮಹತ್ವದ ಕಲ್ಪನೆ. ವೈಯಕ್ತಿಕ ಮತ್ತು ಸಾಮಾಜಿಕ

ಹಿತಗಳ ಎರಡನ್ನು ಅನುಲಕ್ಷಿಸಿರುವ ಪೂರ್ಣದೃಷ್ಟಿ ಇಲ್ಲಿದೆ. ಉತ್ಕಟ ಶೀಲ ಮೊದಲಾದ ಇತರ ವಿಧಗಳಲ್ಲಿ ಜೀವನದ ಸಮಗ್ರ ದೃಷ್ಟಿಯನ್ನು ಕುರಿತ ನೈತಿಕ ನಿಯಮಗಳು ಸೇರಿಕೊಂಡಿವೆ. ತನಗೆ ಮಾತ್ರವಲ್ಲದೆ ತನ್ನ ಸುತ್ತಲಿನ ಪರಿಸರಕ್ಕೆ ನೈತಿಕ ಪ್ರಭಾವದ ರಕ್ಷೆಯನ್ನು ನಿರ್ಮಿಸಲು ಸಮರ್ಥವಾಗಬೇಕೆಂಬುದು ಇವುಗಳ ಅರ್ಥ.

ಒಟ್ಟಿನಲ್ಲಿ ಹೇಳುವುದಾದರೆ ಲಿಂಗಾಚಾರ, ಸದಾಚಾರಗಳು ಸಾಧಕನನ್ನು ಭಕ್ತಿಸ್ಥಲಕ್ಕೆ ಅರ್ಹನನ್ನಾಗಿಸಿ ಅಲ್ಲಿಂದ ಶಿವಾಚಾರ ಗಣಾಚಾರಗಳಿಗೆ ಮುನ್ನಡೆಸುವ ದೃಷ್ಟಿಯನ್ನು ತಂದುಕೊಡುತ್ತದೆ.

**ಶಿವಾಚಾರ**

ಲಿಂಗಾಚಾರ ಸದಾಚಾರಗಳನ್ನು ನಿಷ್ಠೆ, ಶ್ರದ್ಧೆಯಿಂದ ಆಚರಿಸಿದಾಗ ಅವು ಸಾಧಕನ ಅಂತರಂಗದ ವಿಕಾಸಕ್ಕೆ ಕಾರಣವಾಗುತ್ತದೆ. ಕರಸ್ಥಲದಲ್ಲಿರುವ ಗುರು ಕರುಣಿಸಿದ ಇಷ್ಟಲಿಂಗವು ಕರಸ್ಥಲದಲ್ಲಿ ಮಾತ್ರ ಉಳಿಯದೆ ಭಕ್ತನ ಅಂತರಂಗವನ್ನು ವ್ಯಾಪಿಸಿ ಪ್ರಾಣಲಿಂಗ, ಭಾವಲಿಂಗಗಳ ಅರಿವನ್ನು, ಅನುಭವವನ್ನು ತಂದುಕೊಡುತ್ತದೆ. ಷಟ್‌ಸ್ಥಲ ಮಾರ್ಗದ ಪ್ರಸಾದಿ ಪ್ರಾಣಲಿಂಗಿ ಸ್ಥಲಗಳಲ್ಲಿ ಈ ನಿಲುವು ನೆಲೆನಿಂತಿದೆ. ಅದಕ್ಕೆ ಅನುಗುಣವಾದ ನಡೆನುಡಿಗಳನ್ನು ಶಿವಾಚಾರ ದೊರಕಿಸಿಕೊಡುತ್ತದೆ.

'ಶಿವಭಕ್ತರಲ್ಲಿ ಜಾತಿ ಕುಲವನ್ನರಸದೆ, ವರ್ಣಾಶ್ರಮ ಹುಡುಕದೆ ಅವರೊಕ್ಕುದ ಕೊಂಬುದೇ ಶಿವಾಚಾರ. ಉಂಬಲ್ಲಿ ಉಡುವಲ್ಲಿ ಕುಲವನರಸುವರು. ಕೊಂಬಲ್ಲಿ ಕೊಡುವಲ್ಲಿ ಕುಲವನರಸುವರು ಅವರೆಂತು ಭಕ್ತರೆಂಬೆ' ಎನ್ನುತ್ತಾರೆ ಬಸವಣ್ಣನವರು. ಸದಾಚಾರಗಳಲ್ಲಿ ಶಿವಸ್ವರೂಪವನ್ನು ಕಂಡರೂ ಅದೆಲ್ಲವೂ ಅವನ ಪ್ರಸಾದನೆಂದು ಅರಿಯುವುದೇ ಶಿವಾಚಾರ. ಶಿವಾಚಾರವೆಂಬುದೊಂದುಲ್ಲೈಬ್ಬಾಯ ಕತ್ತಿ. ಸಾಮಾಜಿಕ ಸಮತೆ ಶಿವಾಚಾರದ ಮತ್ತೊಂದು ಪ್ರಮುಖ ಮೌಲ್ಯ.

ಈ ಸಾಮಾಜಿಕ ಸಮಾನತೆಯು ಆಧ್ಯಾತ್ಮಿಕ ಅನುಭವದ ಆಧಾರದ ಮೇಲೆ ನೆಲೆ ನಿಲ್ಲಬೇಕು. 'ಭಾವಶುದ್ಧಿಯಿಂದ ಭಕ್ತಿ ನೆಲೆಗೊಂಡು ಶಿವನ ಕೃಪೆಯನ್ನು ಪಡೆದವರೆಲ್ಲರೂ ಶರಣರ ದೃಷ್ಟಿಯಲ್ಲಿ ಶಿವಸ್ವರೂಪದವರು. ಅವರು ಲಿಂಗ ಜಂಗಮ ಮೆಚ್ಚುವಂತೆ ನಡೆದು ಪ್ರಸಾದವನ್ನು ತನ್ನ ಅಧೀನದಲ್ಲಿರುವಂತೆ ಮಾಡಿಕೊಂಡರೆ ಅವರೇ ಶಿವಾಚಾರಿಗಳು. ಅವರೇ ಸಾಕ್ಷಾತ್ ಶಿವಸ್ವರೂಪರು.' 'ಗುರು ಮಾರ್ಗಾಚಾರದಲ್ಲಿ ನಿಂದ ಶಿವ ಲಾಂಛನಧಾರಿಗಳಲ್ಲಿ ಪರಶಿವಲಿಂಗದಲ್ಲಿವೆರಸಿ ಅರ್ಥ ಪ್ರಾಣಾಭಿಮಾನವನ್ನು ಅರ್ಪಿಸುವುದೇ ಶಿವಾಚಾರವೆಂಬೆನಯ್ಯ' ಶಿವಾಚಾರದ ಬಗ್ಗೆ ಚನ್ನಬಸವಣ್ಣವರ ಈ ವಾಕ್ಯ ಅರ್ಥಪೂರ್ಣವಾಗಿದೆ. 'ಸರ್ವಂ ಲಿಂಗಮಯಂ ಜಗತ್' ಎಂಬುದನ್ನು ಬೌದ್ಧಿಕವಾಗಿ ಮಾತ್ರವಲ್ಲ; ಅನುಭವಪೂರ್ವಕವಾಗಿ ಅರಿವಿಗೆ ತಂದುಕೊಡುವುದೇ ಶಿವಾಚಾರ.

ಇಲ್ಲಿ ಮುಖ್ಯವಾಗಿ ಪ್ರಸಾದಿ ಪ್ರಾಣಲಿಂಗಿ ಸ್ಥಲಗಳ ನಿಲುವು ಅನಾವರಣಗೊಂಡಿದೆ. ಲಿಂಗಾಚಾರ ಸದಾಚಾರಗಳನ್ನು ಅರ್ಥಪೂರ್ಣವಾಗಿ ಅಳವಡಿಸಿಕೊಂಡ ಭಕ್ತ ಮಹೇಶ ಸ್ಥಲಗಳನ್ನು ದಾಟಿ ಬಂದ ಸಾಧಕನ ವಿಕಸಿತ ಜೀವನ ಪ್ರಸಾದಿ, ಪ್ರಾಣಲಿಂಗಿ ಸ್ಥಲಗಳಲ್ಲಿ ಶಿವಾಚಾರ ಸಮ್ಮಿಳಿತವಾಗುತ್ತವೆ. ಶಿವಾಚಾರಿಯಾದವನಿಗೆ ವ್ಯಕ್ತಿ ಮತ್ತು ಸಮಾಜ ಎರಡೂ ಶಿವಸ್ವರೂಪಗಳೆನಿಸುತ್ತವೆ.

ಶಿವಾಚಾರದ ಮುಂದಿನ ಹಂತ ಗಣಾಚಾರ. ಗಣಾಚಾರವೆಂದರೆ 'ಶಿವಾಚಾರದ ನಿಂದೆಯ ಕೇಳದಿಹುದು' ಅಷ್ಟೇ ಅಲ್ಲ, 'ಅಷ್ಟಾವರಣಗಳ ಮೇಲೆ ನಿಂದೆ ಕುಂದುಗಳು ಬಂದರೆ ಗಣಸಮೂಹದೊಡಗೂಡಿ ಆ ಸ್ಥಲವ ತ್ಯಜಿಸುವುದೇ ಗಣಾಚಾರ'. ನೀತಿ ಎನ್ನುವ ಮಾತು ಇಲ್ಲಿ ವಿಶಾಲವಾದ ಅರ್ಥವನ್ನು ಪಡೆಯುತ್ತದೆ. ಸಾಧಕನಾದವನಿಗೆ ಜೀವನಶ್ರದ್ಧೆ, ತಾಂತ್ರಿಕಸಿದ್ಧಿಗಳು ಸಾಧನೆಗೆ ಮೂಲ ಪ್ರೇರಣೆಗಳು.

ಏಕದೇವೋಪಾಸನೆ ಏಕ ನಿಷ್ಠೆ – ಇವು ಗಣಾಚಾರದ ಪ್ರಮುಖ ಹೆಜ್ಜೆಗಳು. ಗಣಾಚಾರವೆಂಬುದು ಶ್ರೇಷ್ಠವಾದುದನ್ನು ಮಾತ್ರ ಅನುಷ್ಠಾನಗೊಳಿಸುತ್ತೇನೆಂಬ ಸತ್ಯ, ನಿಷ್ಠೆಯಾಗಿದ್ದು ಜೀವನದಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸುತ್ತದೆ.

> ನ್ಯಾಯನಿಷ್ಠುರಿ, ದಾಕ್ಷಿಣ್ಯಪರನಲ್ಲ
> ಲೋಕವಿರೋಧಿ ಶರಣನಾರಿಗಂಜುವನಲ್ಲ
> ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ

ಎಂಬುದು ಬಸವಣ್ಣನವರ ದೃಢ ನಿಲುವು. ಸತ್ಯನಿಷ್ಠೆ ಇಲ್ಲಿ ಇಡಿಯಾಗಿ ಅಭಿವ್ಯಕ್ತಗೊಂಡಿದೆ. ಸಮಾಜದ ಹಿತಸಾಧನೆಯ ದೃಷ್ಟಿಯಿಂದ ಕೈಗೊಳ್ಳುವ ಶಿವಪರವಾದ ಕಾರ್ಯಗಳೆಲ್ಲವೂ ಗಣಾಚಾರಗಳೆ. ಆ ಕಾರ್ಯಕ್ಕೆ ಎದುರಾಗುವ ವಿರೋಧಗಳನ್ನು ಗಣಚಾರಿಯು ದಿಟ್ಟತನದಿಂದ ಎದುರಿಸುತ್ತಾನೆ. ಅವುಗಳನ್ನು ನಿವಾರಿಸಲು ಒಂದು ವೇಳೆ ಅಡಚಣೆ ಉಂಟಾದರೆ, ವಿಫಲನಾದರೆ ಆ ಸ್ಥಳದಿಂದಲೇ ನಿರ್ಗಮಿಸುತ್ತಾನೆ. ಯಾವುದೇ ಕಾರಣಕ್ಕೂ ಧರ್ಮವಿರೋಧಿ ಕಾರ್ಯದಲ್ಲಿ ಭಾಗಿಯಾಗುವುದಿಲ್ಲ. ಶರಣರ ಈ ಬಗೆಗಿನ ಕೋಪ, ತಾಪಗಳು ತಾಮಸಿಕ ಭಾವದಿಂದ ಪ್ರೇರಿತವಾದುವಲ್ಲ. ಅವು ಅನೀತಿ, ಅನ್ಯಾಯಗಳನ್ನು ಪರಿವರ್ತಿಸಿ ಸರ್ವರ ಹಿತವನ್ನು ಬಯಸುವ ಅನುಕಂಪದ ಇನ್ನೊಂದು ಮುಖವೆನಿಸುತ್ತದೆ.

ಭೃತ್ಯಾಚಾರ ಅಹಂಕಾರನಿರಸನಕ್ಕೆ ಕಾರಣವಾಗುವ ಪ್ರಾರಂಬಿಕ ಹಂತ. ಬಸವಣ್ಣನವರು ಹೇಳಿರುವಂತೆ 'ಶಿವಭಕ್ತರಿಗಿಂತ ಹಿರಿಯರಿಲ್ಲ ಎನಗಿಂತ ಕಿರಿಯರಿಲ್ಲ' ಎಂಬ ವಿನೀತ ಮನೋಭಾವ ಭೃತ್ಯಾಚಾರಕ್ಕೆ ಹೆಬ್ಬಾಗಿಲು. ಸಾಧಕನು ತನ್ನ ಅಹಂಕಾರವನ್ನು ಕಳೆದುಕೊಂಡು ಪ್ರಸಾದಿ ಪ್ರಾಣಲಿಂಗಿ ಸ್ಥಲಗಳನ್ನೇರಿ ಶರಣ ಐಕ್ಯಸ್ಥಲದ ನಿಲುವಿಗೆ ಬಂದಾಗಲೂ ಈ ಭೃತ್ಯಾಚಾರ ಜೊತೆಜೊತೆಯಲ್ಲೇ ಮುನ್ನಡೆಯುತ್ತದೆ.

ದೂಷಕನವನೊಬ್ಬ ದೇಶವ ಕೊಟ್ಟಡೆ
ಆಸೆ ಮಾಡಿ ಅವನ ಹೊರೆಯಲಿರಬೇಡ
ಮಾದಾರ ಶಿವಭಕ್ತನಾದಡೆ
ಆತನ ಹೊರೆಯಲು ಭೃತ್ಯನಾಗಿಪ್ಪುದು ಕರಲೇಸಯ್ಯಾ
ತೊತ್ತಾಗಿಪ್ಪುದು ಕರಲೇಸಯ್ಯಾ
ಕಾಡಸೊಪ್ಪು ತಂದು ಓಡಿನಲ್ಲಿ ಹುರಿದಿಟ್ಟು
ಕೂಡಿಕೊಂಡಿಪ್ಪುದು ನಮ್ಮ ಕೂಡಲಸಂಗನ ಶರಣರ

ಬಸವಣ್ಣನವರ ಈ ವಚನ 'ಅಹಂ' ಅಳಿದು 'ಸೋಹಂ' ತಲೆದೋರಿದಾಗಲೂ ಅತ್ಯಂತ ಜಾಗರೂಕತೆ ಅತ್ಯಾವಶ್ಯಕ ಎನ್ನುತ್ತದೆ. 'ಸೋಹಂ' ಎಂಬುದು ಅಹಂಕಾರದ ಮುಖವಾಗಿ ಹೆಡೆಯೆತ್ತಬಾರದು. ಶರಣರು ಅದಕ್ಕೆ ಅವಕಾಶ ಕೊಡದ ರೀತಿಯಲ್ಲಿ ಎಚ್ಚರಿಕೆಯ ಭೃತ್ಯಾಚಾರ ಕೈಗೊಂಡರು. ಶಿವಸ್ವರೂಪಿಯಾದ ಪ್ರಪಂಚಕ್ಕೆ ತಮ್ಮನ್ನು ಅರ್ಪಿಸಿಕೊಂಡು ಸಮಾಜದ ಯೋಗಕ್ಷೇಮ ಸಾಧನೆಗೆ ದಾಸೋಹ ಭಾವದಿಂದ ಕರ್ತವ್ಯಬದ್ಧರಾದರು.

ದಾಸೋಹಂ ಎಂದರೆ ಸಂಸ್ಕೃತದಲ್ಲಿ 'ನಾನು ದಾಸ ಆಗಿದ್ದೇನೆ' ಎಂದರ್ಥ. ಸಂಸ್ಕೃತದಲ್ಲಿ ಅದಕ್ಕಿಂತ ಪ್ರಸಿದ್ಧವಾದ ಉಕ್ತಿ ಎಂದರೆ 'ಸೋಹಂ' (ಸಃ ಅಹಂ) ಎಂದರೆ 'ನಾನೇ ಆಗಿದ್ದೇನೆ' ಎಂದರ್ಥ. 'ದಾಸೋಹಂ', 'ಸೋಹಂ' ಎಂಬುದು ಆಧ್ಯಾತ್ಮಿಕ ಕ್ಷೇತ್ರದ ಪಾರಿಭಾಷಿಕ ಪದಗಳು. ಸೋಹಂ ಎಂದರೆ ನಾನು ಅವನೇ, ಎಂದರೆ ಪರಮಾತ್ಮನೇ ಆಗಿದ್ದೇನೆ ಎಂಬ ಅನುಭವದ ಅಭಿವ್ಯಕ್ತಿ. ದಾಸೋಹಂ ಎಂದರೆ ನಾನು ಪರಮಾತ್ಮನ ದಾಸನೇ ಆಗಿದ್ದೇನೆ ಎಂದರ್ಥ. ದಾಸೋಹ ಮತ್ತು ಸೋಹಂ ಇವು ಒಬ್ಬ ಆಧ್ಯಾತ್ಮಿಕ ಸಾಧಕನ ಅನುಭವ ಬೆಳವಣಿಗೆಯ ವಿವಿಧ ಸೂಚಕಗಳು ಅಥವಾ ಸಂಕೇತಗಳು. ಆಧ್ಯಾತ್ಮಿಕ ಸಾಧಕನಾದವನು ಆರಂಭದಲ್ಲಿ ತಾನು ಪರಮಾತ್ಮನ ದಾಸ, ಸೇವಕ ಎಂಬ ಭಕ್ತಿಭಾವನೆಯಿಂದ ಪರಮಾತ್ಮನನ್ನು ಆರಾಧಿಸುತ್ತಾನೆ. ಇಂದ್ರಿಯಗಳನ್ನು ನಿಯಂತ್ರಿಸಿ ಪರಮಾತ್ಮನಿಗೆ ತನ್ನನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡು ಮುಂದುವರಿಯುವ ಸಾಧಕನಿಗೆ ಕ್ರಮೇಣ ತಾನು ಪರಮಾತ್ಮನ ದಾಸ, ಸೇವಕ ಎಂಬ ಅನುಭವದಿಂದ, ಎಂದರೆ ನಾನೇ ಬೇರೆ, ಭಗವಂತನೇ ಬೇರೆ ಎಂಬ ಅನುಭವದಿಂದ, ಭಿನ್ನವಾದ ವಲಯದ ಪರಿಚಯವಾಗುತ್ತದೆ. ಕ್ರಮೇಣ ಆ ಪರಮಾತ್ಮನು ತನ್ನ ಒಳಗೇ ಇದ್ದಾನೆ ಎಂಬ, ಕ್ರಮೇಣ ಅವನೇ ನಾನು, ನಾನೂ ಪರಮಾತ್ಮನೂ ಅಭಿನ್ನ ಎಂಬ ಅನುಭವವಾಗುತ್ತದೆ.[7]

ತಾವು ನಂಬಿದ ತತ್ತ್ವಕ್ಕಾಗಿ, ಅದರ ಸಾಧನೆ ಅನುಷ್ಠಾನಕ್ಕಾಗಿ ತನ್ನ ಸರ್ವಸ್ವವನ್ನೂ ಅರ್ಪಿಸಿಕೊಳ್ಳುವ ಈ ಕಟ್ಟುನಿಟ್ಟಿನ ನಿಷ್ಠೆಯೇ ಭೃತ್ಯಾಚಾರದ ಒಳತಿರುಳು. ಈ ನೈತಿಕ ನೆಲೆಗಟ್ಟಿನ ಹಿನ್ನೆಲೆಯಲ್ಲಿ ಬರುವ ಪಂಚಾಚಾರಗಳನ್ನು ಗಮನಿಸಿದರೆ ಶರಣರಿಗೆ

ತಮ್ಮ ಆಧ್ಯಾತ್ಮಿಕ ಸಾಧನೆಯಷ್ಟೇ ಲೋಕಸಂಗ್ರಹ ಕಾರ್ಯವೂ ಅವಶ್ಯಕವಾದುದು. ಅವರು ಈ ಎರಡು ಕ್ಷೇತ್ರಗಳಲ್ಲೂ ಜೊತೆ ಜೊತೆಯಾಗಿ ನಡೆದು ಭೃತ್ಯಾಚಾರದ ಸಾಮಾಜಿಕ ಮೌಲ್ಯವನ್ನು ಮನಗಂಡರು. ಲೇಖನ ವಿಸ್ತಾರದ ಅರಿವಿನಿಂದ ಷಟ್‌ಸ್ಥಲಗಳಾದ ಭಕ್ತ, ಮಹೇಶ್ವರ, ಪ್ರಸಾದಿ, ಪ್ರಾಣಲಿಂಗ, ಶರಣ ಐಕ್ಯಸ್ಥಲಗಳನ್ನು, ಅಷ್ಟಾವರಣಗಳಾದ ಗುರು, ಲಿಂಗ, ಜಂಗಮ, ದಾಸೋಹ, ಪ್ರಸಾದ, ವಿಭೂತಿ, ರುದ್ರಾಕ್ಷಿ ಹಾಗೂ ಮಂತ್ರಗಳನ್ನು ಕುರಿತು ಇಲ್ಲಿ ವಿಶೇಷವಾಗಿ ಪ್ರಸ್ತಾಪ ಮಾಡಿಲ್ಲ.

ಕಾಯಕ ಮತ್ತು ದಾಸೋಹ ಇವೆರಡೂ ಪರಿಕಲ್ಪನೆಗಳು ಶರಣ ಸಂಸ್ಕೃತಿಯು ಸಮಾಜಕ್ಕೆ ನೀಡಿದ ಅತ್ಯಮೂಲ್ಯ ಕೊಡುಗೆಗಳು. ಬಸವಣ್ಣನವರು ಸಾಮಾಜಿಕ ಹಾಗೂ ವೈಚಾರಿಕ ಆಂದೋಲನಗಳ ಜೊತೆಗೆ ನೀಡಿದ ಬಹು ದೊಡ್ಡ ಕೊಡುಗೆ ಎಂದರೆ ಕಾಯಕ ಮತ್ತು ದಾಸೋಹ ಪರಿಕಲ್ಪನೆ. ಬಸವಣ್ಣನವರಿಗಿಂತ ಹಿಂದೆಯೂ ಕಾಯಕ ಸಂಸ್ಕೃತಿ ಇತ್ತಾದರೂ, ಅದು ಒಂದು ಮೌಲ್ಯವಾಗಿ ವ್ಯಾಪಕತೆಯನ್ನು ಪಡೆದಿದ್ದು ಬಸವಾದಿ ಶರಣರಿಂದ. ವಿಶ್ವದ ಯಾವುದೇ ಭಾಗದಲ್ಲಿ, ಯಾವುದೇ ಸಮುದಾಯದಲ್ಲಿ ಇಂತಹ ಅಮೂಲ್ಯ ಸಿದ್ಧಾಂತ ಅನುಷ್ಠಾನಕ್ಕೆ ಬಂದಿಲ್ಲ. ಇಂತಹ ವಿಶಿಷ್ಟವಾದ ನಿಲುವನ್ನು ಜಾರಿಗೊಳಿಸಿ ಇಡೀ ವಿಶ್ವವೇ ವಿಸ್ಮಯದಿಂದ ನೋಡುವಂತೆ ಮಾಡಿದ ಕೀರ್ತಿ ಶರಣರಿಗೆ ಸಲ್ಲಬೇಕು.

ಕಾಯಕ ಮತ್ತು ದಾಸೋಹದ ಪರಿಕಲ್ಪನೆ ಈ ಪದಗಳಿಗೆ ಸಂವಾದಿಯಾಗಿ ಬೇರೊಂದು ಪದ ಮತ್ತು ಅರ್ಥ ಸಂಪತ್ತು ನಮಗೆ ಬೇರಾವ ಸಂಸ್ಕೃತಿಯಲ್ಲಿ ಕಂಡುಬರುವುದಿಲ್ಲ. ಈ ಪದಗಳನ್ನು ನೋಡುವುದಕ್ಕೆ ವಾಮನನಂತಿದ್ದರೂ ಒಳಹೊಕ್ಕು ಅರ್ಥೈಸಿದಂತೆಲ್ಲ ನಮಗೆ ಅವುಗಳ ವಿರಾಟ ದರ್ಶನವಾಗುತ್ತದೆ.

ಬಸವಾದಿ ಶರಣರು ರೂಪಿಸಿ ಅನುಷ್ಠಾನಕ್ಕೆ ತಂದ ಕಾಯಕ ಸಿದ್ಧಾಂತದಲ್ಲಿ ಮೇಲು–ಕೀಳು, ಉಚ್ಚ–ನೀಚ ಎಂಬ ತಾರತಮ್ಯವಿರಲಿಲ್ಲ. ತಾವು ಮಾಡಿದ ವೃತ್ತಿಯಲ್ಲಿಯೇ, ಅದು ಸಮಾಜದ ದೃಷ್ಟಿಯಲ್ಲಿ ಮೇಲಾಗಿರಲಿ ಕೀಳಾಗಿರಲಿ, ಕೈಲಾಸವನ್ನು ಕಾಣುವ ವಿಶಿಷ್ಟ ದಾರ್ಶನಿಕತೆ ಅದು. ಕಷ್ಟಪಟ್ಟು ಬೆವರು ಸುರಿಸಿ ದುಡಿದು ಮಾಡುವ ಕಾಯಕಕ್ಕೆ ಅವರು ವಿಶೇಷ ಮಹತ್ವವನ್ನು ನೀಡಿದರು. ಶರಣರು ಕಾಯಕ ತತ್ತ್ವದ ಪ್ರತಿಪಾದನೆಯ ಮೂಲಕ ಜೀವನದ ವಿವಿಧ ಮಜಲುಗಳಲ್ಲಿ ಹೊಸ ಚೈತನ್ಯ ತುಂಬಿದರು. ಕಾಯಕ ತತ್ತ್ವಾಧಾರಿತ ಸಮಾಜವೆಂದರೆ ಪರಸ್ಪರ ಮಾನವೀಯ ಗೌರವ, ಪ್ರೀತಿ, ಸಂಪೂರ್ಣ ಸ್ವಾವಲಂಬಿ ಸಮಾಜ. ಈ ತತ್ತ್ವದ ವಿಶಿಷ್ಟ ಸಾಮಾಜಿಕ ಧೋರಣೆಗಳು, ಆಧ್ಯಾತ್ಮಿಕ ಸರಳತೆ ಸಮಾಜದ ನಿರ್ಲಕ್ಷಿತ ವರ್ಗಗಳಲ್ಲಿ ನೇರವಾಗಿ ಮತ್ತು ಅಷ್ಟೇ ಶಕ್ತಿಯುತವಾಗಿ ಸಂವಹನಗೊಂಡವು. ಅಂದಿನವರೆಗೂ ಮೇಲ್ವರ್ಗದವರ ಶೋಷಣೆ, ತುಳಿತಗಳಿಗೆ ಸಿಕ್ಕು ತಮ್ಮ ಧ್ವನಿಯನ್ನೇ ಕಳೆದುಕೊಂಡು ಮರೆತಿದ್ದ ಮಾದರು, ಡೋಹಾರರು, ಮಡಿವಾಳರು, ಅಂಬಿಗರು, ಡಕ್ಕೆಯವರು ಮೊದಲಾದ ಹತ್ತಾರು

ದಲಿತ ಗುಂಪಿನ ಜನ ಜಾಗೃತರಾದರು. ತಮ್ಮ ಅನುಭವ ವಿಚಾರಗಳಿಗೆ ಮಾತು ಕೊಟ್ಟರು. ಇತರರಂತೆ ಆತ್ಮಗೌರವದಿಂದ ಬದುಕುವ ಹಕ್ಕು ತಮಗೂ ಇದೆ ಎನ್ನುವ ಆತ್ಮಪ್ರಜ್ಞೆ, ದೃಢವಿಶ್ವಾಸ ಮೂಡಿ ಅವರೆಲ್ಲರೂ ಶಿವಶರಣರ ಜೊತೆಗೆ ಕ್ರಿಯಾಶೀಲ ಹೆಜ್ಜೆಗಳನ್ನು ಹಾಕಿದರು. ಹೀಗಾಗಿ ಕಾಯಕ ಎನ್ನುವುದು ಕೇವಲ ತಾತ್ವಿಕ ಪರಿಕಲ್ಪನೆಯಾಗಿ ಉಳಿಯದೆ ಎಲ್ಲಾ ವರ್ಗದ ಜನಸಮುದಾಯಗಳ ಸಾಮೂಹಿಕ ಸ್ಪಂದನೆಗೆ ಪ್ರೇರಕವಾಯಿತು.

'ಕಾಯಕ' ಎಂಬ ಮಾತಿಗೆ ಹೊಟ್ಟೆಪಾಡಿಗಾಗಿ ಕೈಗೊಂಡ ಉದ್ಯೋಗ ಎಂದಷ್ಟೇ ಅರ್ಥವಲ್ಲ. ಪ್ರತಿಯೊಬ್ಬರೂ ತಮ್ಮ ತಮ್ಮ ಜೀವನದ ನಿರ್ವಹಣೆಗಾಗಿ ಉದ್ಯೋಗವನ್ನು ಕೈಗೊಳ್ಳಲೇಬೇಕಾದುದು ಅವಶ್ಯಕ. ಇನ್ನೊಬ್ಬರ ದುಡಿಮೆಯನ್ನು ಕುಳಿತು ತಿನ್ನುವ ಹಕ್ಕು ನಮಗಿಲ್ಲ. ದೇಹಶ್ರಮದಿಂದಲೇ ನಮ್ಮ ಅನ್ನವನ್ನು ತಾವು ಸಂಪಾದಿಸಿಕೊಳ್ಳಬೇಕು. ಅದರಿಂದಲೇ ನಮ್ಮ ಜೀವನ ನಡೆಯಬೇಕು. ತಾವು ಕೈಗೊಂಡ ವೃತ್ತಿ ಸಮಾಜಕ್ಕೂ ಹಾನಿಕಾರಕವಾಗಿರಬಾರದು. ಸಮಾಜದ ಅವಶ್ಯಕತೆಗಳನ್ನು ಪೂರೈಸುವಂತಿರಬೇಕು. ಅದರ ಫಲ ತನಗೆ ಮಾತ್ರವೇ ಅಲ್ಲದೆ, ಸಮಾಜಕ್ಕೆ ದೊರೆಯಬೇಕು ಎಂಬ ಅಂಶಕ್ಕೆ ವಿಶೇಷವಾದ ಮಹತ್ವವನ್ನು ಕೊಟ್ಟರು. ಶರಣ ಸಂಸ್ಕೃತಿಯಲ್ಲಿ ಅರಳಿದ ಕಾಯಕ ತತ್ತ್ವದಲ್ಲಿ ನೀತಿ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕಾಗಿತ್ತು.

ಬಸವಾದಿ ಶರಣರ ಆದರ್ಶಗಳನ್ನು, ಜೀವನಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡು, ಕಾಯಕ–ದಾಸೋಹ ತತ್ತ್ವಕ್ಕೆ ಒಂದು ಹೊಸ ವ್ಯಾಖ್ಯಾನ ಬರೆದವರು ತ್ರಿವಿಧ ದಾಸೋಹಿ ಪರಮಪೂಜ್ಯ ಡಾ. ಶ್ರೀ ಶಿವಕುಮಾರ ಶಿವಯೋಗಿಗಳವರು. ಶರಣ ಸಂಸ್ಕೃತಿಗೆ ಒಂದು ಮೌಲ್ಯವನ್ನು ತಂದುಕೊಟ್ಟವರು. ಪರಮಪೂಜ್ಯರು ತಮ್ಮ ನಡೆ–ನುಡಿಯ ಮೂಲಕ ಶರಣ ಸಂಸ್ಕೃತಿಗೆ ಒಂದು ಹೊಸ ವ್ಯಾಖ್ಯಾನವನ್ನೇ ಬರೆದರು.

**ಅಡಿಟಿಪ್ಪಣಿಗಳು**

1. ಡಾ. ಎಂ. ಚಿದಾನಂದಮೂರ್ತಿ, ಶರಣತತ್ತ್ವ ಚಿಂತನ, ಸಂ. 2, ಪು. 74, ಪ್ರ: ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು
2. ಶರಣತತ್ತ್ವ ಚಿಂತನ, ಭಾಗ–4, ಲೇ: ಜಿ.ಎಸ್. ಸಿದ್ಧಲಿಂಗಯ್ಯ, ಶರಣ ಸಂಸ್ಕೃತಿ, ಪು. 71, ಪ್ರ: ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು
3. ಅದೇ, ಪು. 75
4. ಅದೇ, ಪು. 89
5. ಅದೇ, ಪು. 90
6. ಅದೇ, ಪು. 94
7. ಸಿದ್ಧಗಂಗಾ, ಏಪ್ರಿಲ್–ಮೇ ಸಂಚಿಕೆ, 2014, ಪು. 52

□

# ವಿದ್ಯೆ ಮತ್ತು ವಿಧಾಯಕತೆ

**ಸ.ರಾ. ಸುಳಕೂಡೆ**

ಬದುಕಿಗೆ ವಿಷಮ ಮತ್ತು ವಿಷಯಗಳ ವರ್ತುಲ ಸುತ್ತಿಕೊಳ್ಳದೆ ಉದಾತ್ತ ಧ್ಯೇಯದ ಸಾಕ್ಷಾತ್ಕಾರಕ್ಕಾಗಿ ವಿದ್ಯೆಯನ್ನು ವ್ಯಾಪಕಗೊಳಿಸಲಾಗಿದೆ. 'ವಿದ್ಯೆಯೇ ಬಾಳಿನ ಬೆಳಕು ಮತ್ತು ತೊಡಕು ಬಿಡಿಸುವ ಸಂಜೀವಿನಿ' ಎಂದೂ ನಿರ್ಣಯಿಸಲಾಗಿದೆ. ಆದರೆ ವಿದ್ಯೆ ಕಲಿತವರು, ವಿದ್ಯಾಪಾರಂಗತರು ಎನ್ನುವವರು, ತಾವು ದಾರಿ ತಪ್ಪಿ, ಅನ್ಯರಿಗೂ ಆತಂಕ ತಂದಿರುವುದು ಗಮನಿಸಬೇಕಾದ ಸಂಗತಿಯಾಗಿದೆ. ಇಂದು ವ್ಯವಸ್ಥಿತ ಮೋಸ, ವಂಚನೆ, ಹಿಂಸೆಗಳೆಲ್ಲವೂ ವ್ಯಾಪಿಸಿಕೊಳ್ಳುತ್ತಿರುವುದಕ್ಕೆ ವಿದ್ಯೆಯು ಒಂದು ಪ್ರಮುಖ ಮೂಲವಾಗುತ್ತಿರುವುದು ಕಳವಳಕಾರಿ ಸಂಗತಿ. ಇದು ಶರಣರು ಹೇಳಿದ ಈ ಸನ್ನಿವೇಶದಂತಿದೆ.

ತಿಳಿದೆ ನಾ, ತಿಳಿದೆ ನಾ ಎಂದು ಹಲಬರು ಹೋದರು
ಅಹಂಕಾರದಲ್ಲಿ
ತಿಳಿಯೆ ನಾ ತಿಳಿಯೆ ನಾ ಎಂದು ಹಲಬರು ಹೋದರು
ಮರವೆಯಲ್ಲಿ
ತಿಳಿದೆನೆಂಬುದು ತಿಳಿಯೆನೆಂಬುದು ಜ್ಞಾನದ ಮೈದೊಡಕು
ತಿಳಿಯೆ ಅರಿವು, ಮರೆಯೆ ಮರೆಯೆಂಬುಭಯವ ತಿಳಿದು
ತಿಳಿಯದಂತಿರೆ
ತಿಳಿನೀರ ನಳಿನಾಕ್ಷನುತ ಕಪಿಲಸಿದ್ಧಮಲ್ಲಿಕಾರ್ಜುನ ತಾನೆ.

ವಿದ್ಯೆಯ ಮೂಲ ಉದ್ದೇಶವು ವಿನಯವೇ ಆಗಿದೆ. ವಿದ್ಯೆಯ ಆಶಯದೊಳಗೆ ವಿನಯವೇ ಪ್ರಮುಖವಾದ ಅಂಶವಾಗಿದೆ. ನಮ್ಮೊಳಗಿನ ಎಲ್ಲ ಮದ, ಮತ್ಸರಗಳನ್ನು ಸಹಿಸಿಕೊಂಡು, ನಿರಾಳತೆಯೊಂದಿಗೆ ಸಕಲರನ್ನು ತನ್ನಂತೆಯೇ ಎಂದು ಪರಿಭಾವಿಸುವ ಅಗತ್ಯ ಸವಾಲು ನಮ್ಮ ಮುಂದಿದೆ. ವಿದ್ಯೆಯ ಆಯಾಮ ಸುಂದರವಾಗಿ, ಸಂತಸ, ಸೌಕರ್ಯ, ಸವಿ, ಸಮಾಧಾನ ತರುವುದಕ್ಕಾಗಿಯೇ ಇದೆ. ಆದರೆ ಮನುಷ್ಯನು ವಿದ್ಯೆಯನ್ನು ಗಳಿಸಿಕೊಂಡು ಕುಕೃತ್ಯ, ಅಮಾನುಷತೆಯತ್ತ ಸಾಗುತ್ತಿರುವುದು ಕಠೋರ ಸತ್ಯವಾಗಿದೆ. ಇದು ಶರಣರು ನುಡಿದಂತೆ ವಿಪರ್ಯಾಸಕ್ಕೆ ಗುರಿಯಾಗಿದೆ.

ಗಿಳಿಯೋದಿ ಫಲವೇನು?
ಬೆಕ್ಕು ಬಹುದ ಹೇಳಲರಿಯದು.

ಜಗವೆಲ್ಲವ ಕಾಂಬ ಕಣ್ಣು
ತನ್ನ ಕೊಂಬ ಕೊಲ್ಲೆಯ ಕಾಣಲರಿಯದು
ಇದಿರ ಗುಣವ ಬಲ್ಲೆವೆಂಬರು, ತಮ್ಮ ಗುಣವನರಿಯರು
ಕೂಡಲಸಂಗಮದೇವಾ

ವಿದ್ಯೆ ಒಂದು ಗಿಳಿಪಾಠವಾಗಿ, ಹಣ ಗಳಿಕೆಯ ಸಾಧನವಾಗಿ, ಮನ ಬಂದಂತೆ ನಡೆಯುವ ಶಕ್ತಿಯಾಗಿ ಹೋದಂತೆಲ್ಲ 'ಅರಿವು' ಎಂಬುದು ಮರೆಯಾಗಿ, ನಿಶ್ಚಿತವಾದ ಕೆಲಸ, ಕಾರ್ಯಗಳಲ್ಲಿ ಮಧುರತೆ ಎಂದೂ ಬರಲಾರದು. ಪರರನ್ನು ದೂಷಿಸುತ್ತ, ತನ್ನ ತಿಳುವಳಿಕೆಯನ್ನೇ ದೊಡ್ಡದು ಮಾಡುತ್ತ ಹೋಗುವುದು ವಿದ್ಯೆಯ ವಿಕೃತಿಯೇ ಆಗುತ್ತದೆ. ವಿದ್ಯೆ ನಾನು, ನೀನು ಎಂಬುದನ್ನು ತಡೆದುಹಾಕುವ ಏಕೈಕ ಮಾರ್ಗವಾಗಿದೆ. ಇದನ್ನರಿತು ಬಾಳಲು ಶರಣರು ತಿಳಿಹೇಳಿದ್ದಾರೆ.

ವಿದ್ಯೆಯನರಿಯದವ ಗುದ್ದಾಟಕ್ಕೊಳಗಾದ
ಅವಿದ್ಯೆಯನರಿಯದವ ಪ್ರಪಂಚವ ಒದ್ದುಬಿಟ್ಟ ನೋಡಾ
ಕಪಿಲಸಿದ್ಧಮಲ್ಲಿಕಾರ್ಜುನಾ

ನಮ್ಮ ನಡಾವಳಿಯೊಳಗೆ ಸರ್ವಹಿತದೃಷ್ಟಿ ಮೇಳವಿಸಿಕೊಳ್ಳುವಂತೆ, ಸದಾ ಕ್ರಿಯಾಶೀಲವಾಗಿರುವ ವಿದ್ಯೆಯ ಮಹತ್ವವನ್ನು ಅರಿತು ಬದುಕನ್ನು ಕಟ್ಟಿಕೊಳ್ಳುವ ಅಗತ್ಯವಿದೆ. ಗಳಿಕೆ, ಬಳಕೆಗಳ ನಡುವೆ ಮಾನವಪ್ರಜ್ಞೆಯನ್ನು ತಪ್ಪಿಯೂ ಮರೆಯಬಾರದು. ನಾವು ಅದೆಷ್ಟೇ ಎತ್ತರಕ್ಕೇರಿದರೂ, ವಿದ್ಯೆ ಪಡೆದರೂ, ಎಲ್ಲ ತಿಳಿದುಕೊಂಡವರಿದ್ದರೂ, ಅಲ್ಲಸಲ್ಲದ ಭ್ರಾಂತಿ–ಭಯಗಳನ್ನೆಂದೂ ಸೃಷ್ಟಿಸಬಾರದು. ವಿದ್ಯೆಯಿಂದ ಗಳಿಸಿದ ವಿದ್ವತ್ತು, ಪ್ರತಿಭೆ ಹಗಲು–ಇರುಳಿನ ಸಹಜ ವಿದ್ಯಮಾನಗಳನ್ನು ಕೆಡಿಸುವಂತಾಗಬಾರದು.

ಹಗಲ ಇರುಳ ಮಾಡಿ, ಇರುಳ ಹಗಲ ಮಾಡಿ
ಆಚಾರವ ಅನಾಚಾರವ ಮಾಡಿ, ಅನಾಚಾರವ ಆಚಾರ ಮಾಡಿ
ಭಕ್ತನ ಭವಿಯ ಮಾಡಿ, ಭವಿಯ ಭಕ್ತನ ಮಾಡಿ
ನುಡಿವವರ ಮಾತ ಕೇಳಲಾಗದು, ಗುಹೇಶ್ವರಾ

ಇವತ್ತಿನ ವಿದ್ಯಾವಂತರು ಎಸಗುತ್ತಿರುವ ಅಪರಾಧಗಳು, ಹಿಂಸಾವೃತ್ತಿಗಳು, ಅತ್ಯಂತ ಭೀಕರವಾಗುತ್ತಲಿವೆ. ವಿದ್ಯಾವಂತರು, ಉನ್ನತ ಪರಿಣತಿ, ಪದವಿ ಪಡೆದುಕೊಂಡು ದುಷ್ಟ ಕೃತ್ಯಗಳಲ್ಲಿ ಆಸಕ್ತರಾಗಿ; ಮಾನವೀಯ ಸೌಜನ್ಯ, ಸದಾಚಾರದಿಂದ ದೂರಾಗಿ ಶೋಷಿತರೂ ಆಗುತ್ತಿದ್ದಾರೆ. ವಿದ್ಯೆಯ ಬಲದಿಂದ ಶಾಸ್ತ್ರ, ಪುರಾಣ, ರಾಮಾಯಣ, ಮಹಾಭಾರತಗಳನ್ನು ಗಿಳಿಪಾಠ ಮಾಡಿ, ಮಹಾನ್ ಜ್ಞಾನಿಗಳೆಂದು ಪ್ರಚಾರ ಮಾಡಿಸಿಕೊಂಡು, ಸತ್ಸಂಗ ಶಿಬಿರಗಳನ್ನು ಏರ್ಪಡಿಸಿ, ಮನುಕುಲವೇ ನಾಚಿಕೆ ಪಡುವಂಥ ಹೇಯ ಕೃತ್ಯಗಳನ್ನು ಎಸಗುತ್ತಿದ್ದು ವಿದ್ಯೆಯ ಮೂಲ ಉದ್ದೇಶವನ್ನೇ ಕೆಡಿಸುತ್ತಿದ್ದಾರೆ. ವಿದ್ಯೆಯ ಮೂಲಕ ಶರಣರು ಹೇಳಿದಂತೆ ಆಚಾರವನ್ನು, ಅನಾಚಾರಕ್ಕೆ ತಂದು

ನಿಲ್ಲಿಸಿದ್ದಾರೆ. ವಿದ್ಯಾವಂತರೇ ಇಂದು ಜೈಲುವಾಸಿಗಳಾಗಿಯೂ ಪ್ರಸಿದ್ಧಿ ಪಡೆದಿರುವುದು ವಿದ್ಯೆಯನ್ನೇ ಶಂಕಿಸುವಂತೆ ಮಾಡಿದೆ. ತಮ್ಮ ಹಿತಕ್ಕಾಗಿ ಯಾರನ್ನಾದರೂ ದೇವಮಾನವರೆಂದು ಪ್ರಸಿದ್ಧಿಗೊಳ್ಳುವಂತೆ ನೋಡಿಕೊಳ್ಳುವ ಮನಸ್ಸುಗಳು ವಿದ್ಯೆಯ ಅತಿರೇಕವನ್ನೇ ಸೂಚಿಸುತ್ತವೆ.

ವಚಿಸಿ ಅನುಭವಿಯಾಗದವ ಪಿಶಾಚಿಯಯ್ಯಾ,
ವಚಿಸಿ ಅನುಭವಿಯಾದವ ಪಂಡಿತನಯ್ಯಾ,
ವಿದ್ಯೆಯೆಂಬುದು ಅಭ್ಯಾಸಿಕನ ಕೈವಶ;
ಅವಿದ್ಯೆಯೆಂಬುದು ಸರ್ವರಲ್ಲಿ ವಶ.
ವಿದ್ಯಾವಿದ್ಯೆಯನರಿತು ಜಗದ್ವೇದ್ಯನಾಗಬಲ್ಲಡೆ,
ಮಹಾಪಂಡಿತ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ

ವಿದ್ಯೆಯ ಬಲದಿಂದ ವಿಧಾಯಕ ಕೆಲಸ–ಕಾರ್ಯಗಳು ಸಾಕಷ್ಟು ಅಕಾಲ ನಡೆದಿದ್ದರೂ, ವಿದ್ಯೆಯನ್ನು ದುರುಪಯೋಗ ಮಾಡಿಕೊಂಡು, ಅಂಧಾನುಕರಣೆ, ಮೂಢನಂಬಿಕೆ, ವ್ಯಕ್ತಿ ವೈಭವ, ಆರಾಧನೆ, ಅಹಂಕಾರ, ಮದ, ಮತ್ಸರಕ್ಕೆ ಬುನಾದಿ ಹಾಕುವುದು ಅವಿವೇಕವಲ್ಲದೆ ಬೇರೆಯಲ್ಲ. ವಿದ್ಯೆ ಎಂಬುದು ವಿಧಾಯಕತೆ, ರಚನಾತ್ಮಕತೆ, ಸುಸೂತ್ರತೆ, ಸದುವಿನಯ ಎಲ್ಲವೂ ಆಗಿ ಸರ್ವತ್ರ ಸಮಾನತೆ, ಸ್ವಾವಲಂಬನೆ, ಅಕ್ಷರ, ಅರಿವು, ಕ್ರಿಯಾಶೀಲತೆಗಳನ್ನು ತರುವ ಸಾಧನವಾಗಿದೆ.

ವಿದ್ಯೆಯನ್ನು ಪಡೆಯುವುದೆಂದರೆ ಸ್ವಾರ್ಥಪರ ಚಿಂತನೆಗಳನ್ನು ನಿರಸನಗೊಳಿಸುವುದಾಗಿದೆ. ಇಂದು ಎಲ್ಲೆಡೆ ಸುಧಾರಣೆ, ಸೌಕರ್ಯಗಳನ್ನು ಸುನಿಶ್ಚಿತಗೊಳಿಸುವ ದೊಡ್ಡ, ದೊಡ್ಡ ಹೆಜ್ಜೆಗಳು ಕಾಣಸಿಗುತ್ತಿವೆ. ಆದರೆ ಈ ಹೆಜ್ಜೆಗಳು ತಪ್ಪುದಾರಿಗೆ ತಂದು ನಿಲ್ಲಿಸುತ್ತಿರುವ ಅರಿವನ್ನು ವಿದ್ಯೆಯು ಕೊಡದಿರುವುದು ದುಃಖದ ಸಂಗತಿಯಾಗಿದೆ. ನಮ್ಮ ವಿದ್ಯೆ, ವಿದ್ವತ್ತು, ಪರಿಣತಿಗಳು ಜನರಿಗೆ ಪಂಗನಾಮ ಹಾಕಲು ಬಳಕೆಯಾಗುತ್ತಿರುವುದು ವಿಚಿತ್ರವಾಗಿದೆ. ವಿದ್ಯೆಯಿಂದ ವಿಶೇಷ ಶಕ್ತಿಯನ್ನು ಪಡೆದುಕೊಂಡು ಅನ್ಯರನ್ನು ಮರುಳು ಮಾಡುವುದಾಗಬಾರದು. ವಿದ್ಯೆಯು ದರ್ಪಕ್ಕೂ ಕಾರಣವಾಗಬಾರದು. “ಎಲ್ಲ ವಿಶೇಷಣಗಳನ್ನೂ ಅಳಿಸಿಹಾಕಿ, ನಿಮಗೆ ಸತ್ಯಗಳು ತಾನೇ ತಾನಾಗಿ ಗೋಚರವಾಗುತ್ತವೆ. ಆಗ ಮಾತ್ರ ನಿಮ್ಮ ಸಾಮರ್ಥ್ಯದ ಬಗ್ಗೆ ನಿಮಗೆ ಪಕ್ಕಾ ಅಂದಾಜು ಸಿಗುತ್ತದೆ” ಎಂದು ಅಮೆರಿಕದ ಕಾದಂಬರಿಗಾರ್ತಿ ಹಾರ್ಪರ್ ಲೀ ಹೇಳಿದ್ದಾರೆ. ಅಂದರೆ ವಿದ್ಯೆಯಿಂದ ಬಂದ ಅಧಿಕಾರ, ಕೀರ್ತಿ, ಸಂಪತ್ತು, ಬಿರುದಾವಳಿಗಳು, ಪ್ರಭಾವ ಎಲ್ಲವೂ ನಮ್ಮ ಸಾಮರ್ಥ್ಯದ ಫಲಗಳೇ ಆಗಿದ್ದರೂ, ಆ ಫಲಗಳು ಅಸತ್ಯ, ಅನಾಚಾರಕ್ಕೆ ಗುರಿಯಾದರೆ ಅನಾಹುತ ಕಟ್ಟಿಟ್ಟ ಬುತ್ತಿ. ಹೀಗಾಗಿ ವಿದ್ಯೆ ಪಡೆದೂ ಎಚ್ಚರಿಕೆ ತಪ್ಪಿ ನಡೆಯುವುದು ಅಪಕ್ವತೆಯ ಸೂಚಕವೇ ಸರಿ. ವಿದ್ಯೆ ನಮ್ಮೊಳಗಿನ ಸದಾಚಾರಕ್ಕೆ ಚುಕ್ಕಾಣಿಯಾಗಬೇಕಾದರೆ, ನಾವೆಲ್ಲರೂ ನಿಸ್ಸಂಗಿಗಳಾಗಬೇಕು.

ದರ್ಪ, ಧಿಮಾಕಿನ ದುರಭಿಮಾನಿಗಳಿಂದಲೂ ದೂರವಿರಬೇಕು.

ಅರಿಯದವರೊಡನೆ ಸಂಗವ ಮಾಡಿದಡೆ
ಕಲ್ಲ ಹೊಯ್ದು ಕಿಡಿಯ ಕೊಂಬಂತೆ
ಬಲ್ಲವರೊಡನೆ ಸಂಗವ ಮಾಡಿದಡೆ
ಮೊಸರ ಹೊಸೆದು ಬೆಣ್ಣೆಯ ಕೊಂಬಂತೆ
ಚೆನ್ನಮಲ್ಲಿಕಾರ್ಜುನಯ್ಯಾ ನಿಮ್ಮ ಶರಣರ ಸಂಗವ ಮಾಡಿದಡೆ
ಕರ್ಪುರದ ಗಿರಿಯನುರಿ ಕೊಂಬಂತೆ

ವಿದ್ಯೆಯು ನಮಗೆ ಸಾರಾಸಾರ ವಿಚಾರ ಮಾಡುವ ಶಕ್ತಿಯನ್ನು ಕೊಡುತ್ತದೆಯಲ್ಲದೆ ಸಹನೆ, ಸಂಯಮ, ಸುಶೀಲತೆಯೊಂದಿಗೆ ಸತ್ಸಂಗವನ್ನು ಆಯ್ಕೆ ಮಾಡಿಕೊಳ್ಳುವ ಹೃದಯವಂತಿಕೆಯನ್ನೂ ಕೊಡುತ್ತದೆ. ವಿದ್ಯೆಯು ಮನುಷ್ಯನನ್ನು ಅನೇಕ ಪರೋಪಕಾರ, ವಿಧಾಯಕ ಕೆಲಸ-ಕಾರ್ಯಗಳಿಗೂ ಪ್ರೇರಕಶಕ್ತಿಯಾಗುತ್ತದೆಂಬ ಹಿನ್ನೆಲೆಯಲ್ಲಿ ಈ ಜಗತ್ತು ವಿದ್ಯೆಯನ್ನು ಸಾರ್ವತ್ರಿಕಗೊಳಿಸಿದೆ. ಪ್ರತಿಯೊಬ್ಬ ವ್ಯಕ್ತಿಯೂ ಸುಶಿಕ್ಷಿತನಾಗಬೇಕೆಂಬ ಗುರಿಯನ್ನಿಟ್ಟುಕೊಂಡು ಮೂಲಶಿಕ್ಷಣ ಕೊಡುವ ವ್ಯವಸ್ಥೆಯನ್ನು ಕಡ್ಡಾಯಗೊಳಿಸಲಾಗಿದೆ. ಆದರೆ ಆಧುನಿಕತೆಯ ಇನ್ನಿತರ ಬೇಡದ ಅಂಶಗಳೂ ಸೇರಿಕೊಂಡು ಸುಶಿಕ್ಷಿತರಲ್ಲಿಯೇ ಹೆಚ್ಚಿನ ವೈಪರೀತ್ಯಗಳು ತುಂಬಿಕೊಳ್ಳುವಂತೆ, ವ್ಯಸನಾದಿಗಳಿಗೆ ಬಲಿಯಾಗುವಂತೆ ಮಾಡಿವೆ. ವಿದ್ಯೆಯ ನಕಾರಾತ್ಮಕತೆ ಬದುಕನ್ನೇ ಅಲ್ಲೋಲ-ಕಲ್ಲೋಲಗೊಳಿಸುತ್ತಿದೆ. ವಿದ್ಯೆ, ವಿಜ್ಞಾನಗಳು ಮೂಲ ಉದ್ದೇಶವನ್ನೇ ಬಲಿ ತೆಗೆದುಕೊಂಡು ಮನುಷ್ಯಕುಲಕ್ಕೆ ಘಾತುಕವಾಗುವುದನ್ನು ತಡೆಯುವ ಅಗತ್ಯವಿದೆ.

ಆವ ವಿದ್ಯೆಯ ಕಲಿತಡೇನು?
ಸಾವ ವಿದ್ಯೆ ಬೆನ್ನ ಬಿಡದು.
ಅಶನವ ತೊರೆದಡೇನು, ವ್ಯಸನವ ಮರೆದಡೇನು?
ಉಸುರ ಹಿಡಿದಡೇನು, ಬಸುರ ಕಟ್ಟಿದಡೇನು?
ಚೆನ್ನಮಲ್ಲಿಕಾರ್ಜುನದೇವಯ್ಯ
ನೆಲ ತಳವಾರನಾದಡೆ ಕಳ್ಳನೆಲ್ಲಿಗೆ ಹೋಹನು?

ವಿದ್ಯೆಯನ್ನು ಪಡೆದುಕೊಂಡು ರಾಕ್ಷಸರಂತೆ ವರ್ತಿಸುವವರನ್ನು ತಹಬಂದಿಗೆ ತರುವಲ್ಲಿ ಸತ್ಸಂಗಗಳೇ ಹೆಚ್ಚೆಚ್ಚು ಪ್ರಚಲಿತಕ್ಕೆ ಬರುವ ಜೊತೆಗೆ, ನೆಲವೇ ತಳವಾರನಾದಡೆ ಕಳ್ಳನೆಲ್ಲಿಗೆ ಹೋದಾನು ಎಂಬ ಧೈರ್ಯವೂ ಮುಂಚೂಣಿಗೆ ಬರುತ್ತದೆ. ವಿದ್ಯೆಯಲ್ಲಿ ನಾವಿಂದು ಮಾನವೀಯತೆಯ ಅನುಕಂಪವನ್ನು ತುಂಬುವ ಅಗತ್ಯವಿದೆ. ಸಾವಿರಾರು ವರ್ಷಗಳ ಪರಿಶ್ರಮದ ಫಲದಿಂದ ಮಾನವನ ಬದುಕನ್ನು ಸುಸಜ್ಜಿತಗೊಳಿಸಿದ ತ್ಯಾಗ ಮತ್ತು ಬಲಿದಾನವನ್ನು ವ್ಯರ್ಥವಾಗದಂತೆ ನೋಡಿಕೊಳ್ಳುವಂತೆ ವಿದ್ಯೆ-ಬದುಕಿನ ಕ್ರಮವನ್ನು ಮರುಸಂಯೋಜಿಸಬೇಕಾಗಿದೆ. ಅಧಿಕಾರ, ಕೀರ್ತಿ, ಸಂಪತ್ತು, ಭೋಗ,

ವಿಲಾಸ. ವ್ಯಸನಗಳಾಚೆಗೆ ಹೋಗಿ ವಿದ್ಯೆಯ ಸೊಬಗನ್ನು ಸವಿಯುವ ವಿವೇಕವನ್ನು ಸರ್ವತ್ರ ಪಸರಿಸುವ ಅಗತ್ಯವಿದೆ.

ಶರಣರು ಬದುಕಿಗೆ ಪ್ರಾಶಸ್ತ್ಯ ನೀಡಿದರು. ಅವರು ವಿವೇಕದಿಂದ ಕೆಲಸ ಮಾಡುವ, ಹೃದಯವಂತಿಕೆಯ ವಿದ್ಯೆಯನ್ನು ಬಳಸುವ, ಸತ್ಕ್ರಿಯಾಚರಣೆಯ ಮಹತ್ತರ ಸಾಧನೆಯನ್ನು ಅತ್ಯಂತ ಸರಳೀಕರಿಸಿ ತಮ್ಮದನ್ನಾಗಿಸಿ, ಅನುಭಾವದ ವಚನಗಳ ಮೂಲಕ ಇಂದಿನ ಜನಾಂಗಕ್ಕೂ ಕೊಡುವಲ್ಲಿ ಹಿಂದೆ ಬಿದ್ದಿಲ್ಲ. ಅವರು ಬದುಕಿನ ವಿದ್ಯೆಯನ್ನೇ ರೂಢಿಸಿಕೊಂಡು, ಸಕಲ ಜೀವಾತ್ಮರಿಗೂ ಲೇಸನ್ನೇ ತರುವಲ್ಲಿ ಯಶಸ್ವಿ ಯಾದರು. ಅವರು ಕಲಿತ ವಿದ್ಯೆ ವಿಧಾಯಕತೆಯ ಮೇರುಪರ್ವತವೇ ಆಗಿದೆ.

ಕ್ರಿಯಾಮಥನವಿಲ್ಲದೆ ಕಾಣಬಂದುದೆ ಇಕ್ಷುವಿನೊಳಗಣ ಮಧುರ?
ಕ್ರಿಯಾಮಥನವಿಲ್ಲದೆ ಕಾಣಬಂದುದೆ ತಿಲದೊಳಗಣ ತೈಲ?
ಕ್ರಿಯಾಮಥನವಿಲ್ಲದೆ ಕಾಣಬಂದುದೆ ಕ್ಷೀರದೊಳಗಣ ತುಪ್ಪ?
ಕ್ರಿಯಾಮಥನವಿಲ್ಲದೆ ಕಾಣಬಂದುದೆ ಕಾಷ್ಠದೊಳಗಣ ಅಗ್ನಿ?
ಇದು ಕಾರಣ, ನಮ್ಮ ಗುಹೇಶ್ವರಲಿಂಗವ ತನ್ನೊಳರಿದೆನೆಂಬ
ಮಹಾಂತಂಗೆ ಸತ್ಕ್ರಿಯಾಚರಣೆಯೇ ಸಾಧನ ಕಾಣಿ ಭೋ.

ವಿದ್ಯೆಯು ಸರಳತೆ, ಸಹಜತೆಯ ಸಂಗಮವಾಗಿದೆ. ಯಾವುದು ಸರಳೀಕೃತ ಗೊಳಿಸುವ ದಿಟ್ಟತನವಾಗಿ ಸದಾ ಕ್ರಿಯಾಶೀಲವಾಗಿರುತ್ತದೆಯೋ ಅದೇ ವಿದ್ಯೆಯ ಸೊಬಗು, ಸೌಂದರ್ಯ, ಅಕ್ಷರಜ್ಞಾನ, ಮಂತ್ರ–ತಂತ್ರಗಾರಿಕೆಯ ನೈಪುಣ್ಯತೆ, ಕೈತುಂಬ ಲಾಭ ಭೋಗಗಳೆಲ್ಲವೂ ವಿದ್ಯೆಯಿಂದಲೇ ಬಂದಿದ್ದರೂ, ನಮ್ಮಲ್ಲಿ ಅವಿವೇಕತನವೇ ಅಟ್ಟಹಾಸಗೈಯುವಂತಾದರೆ, ಬೀದಿಯಲ್ಲಿ ಹೋಗುವ ಮಾರಿಯನ್ನು ಮನೆಗೆ ಕರೆದು ತಂದಂತಾಗುತ್ತದೆ. ವಿದ್ಯೆಯಿಂದ ಮಾನವಕುಲವು ರಕ್ಷಿತವಾಗಬೇಕಿದೆ. ಅಂಥ ವಿಶಿಷ್ಟ ಪರಿಸರ ನಿರ್ಮಾಣವೇ ವಿಧಾಯಕವಾದ ವಿನಯಶೀಲತೆಯ ಭಾಗವಾಗಿದೆ. ಇಂಥ ವಿದ್ಯೆ, ವಿಜ್ಞಾನಗಳನ್ನು ನಮ್ಮದಾಗಿರಿಸಿಕೊಳ್ಳುವ ಹೃದಯವಂತಿಕೆ ಬೆಳೆದು ಬರಬೇಕಿದೆ.

ಇಂದು ವಿದ್ಯೆಯಿಂದ ಹೃದಯವೈಶಾಲ್ಯತೆ ಲಭಿಸಬೇಕೆಂಬ ಉದ್ದೇಶವೇ ಪಲ್ಲಟಗೊಂಡಿದೆ. ವಿದ್ಯೆ ಎಂದರೆ ಸಾಕಷ್ಟು, ಸಿಕ್ಕಂತೆ ಗಳಿಸುವುದು, ಬಳಸುವುದು, ಮತ್ತು ಅಂತಸ್ತಿನಲ್ಲಿ ಮೆರೆಯುವುದು ಎಂದು ಭಾವಿಸಲಾಗಿದೆ. ವಿದ್ಯಾವಂತರೆಲ್ಲರೂ ಇಂದು ವಿಧಾಯಕ ಕಾರ್ಯದಲ್ಲಿ ಮಗ್ನರಾಗಿದ್ದಾರೆಂದು ಹೇಳಲಿಕ್ಕಾಗದು. ವಿದ್ಯೆಯ ಮುಸುಕಿನಲ್ಲಿ ಅದೆಷ್ಟೋ ಹೇಯಕೃತ್ಯಗಳು ಇಂದು ಜರುಗುತ್ತಲಿವೆ. ಜ್ಞಾನದ ಬಲದಿಂದ ಅಲ್ಲಸಲ್ಲದ ಸಮಾಜ ಘಾತುಕ ಕೆಲಸಗಳು, ಅದಕ್ಕಿಂತಲೂ ಮಿಗಿಲಾಗಿ ವಿಧ್ವಂಸಕ ಕೆಲಸಕಾರ್ಯಗಳು ನಡೆಯುತ್ತಿವೆ. ವಿದ್ಯೆಯು ಸತ್‌ಕಾರ್ಯಗಳಿಗೆ ಮಾತ್ರ ಬಳಕೆಯಾಗುವಂತೆ ಮಾಡುವುದು ನಮ್ಮ ಮುಂದಿರುವ ದೊಡ್ಡ ಸವಾಲಾಗಿದೆ.

ಇಂದು ವಿದ್ಯೆಯನ್ನು ಸರ್ವರಿಗೂ ಸಿಗುವಂತೆ ಕಾಳಜಿ ಅತ್ಯಂತ ಚುರುಕಾಗಿದೆ.

ವಿದ್ಯೆಯನ್ನು ಕೊಡುವ ವೈವಿಧ್ಯಮಯ ಅಭ್ಯಾಸಕ್ರಮಗಳು ಜಾರಿಯಲ್ಲಿವೆ. ಜಗತ್ತಿನ ಯಾವ ಮೂಲೆಗಾದರೂ ಹೋಗಿ ವಿದ್ಯೆ ಪಡೆಯುವ ಅವಕಾಶವಿದೆ. ತಂತ್ರಜ್ಞಾನದ ವಿದ್ಯೆಗೆ ಹೆಚ್ಚು ಮಹತ್ವ ನೀಡಲಾಗಿದೆ. ಆದರೆ ತಂತ್ರಜ್ಞಾನವನ್ನು ವಿಧಾಯಕ ಕೆಲಸ ಕಾರ್ಯಗಳಿಗೆ ಬಳಸಿಕೊಳ್ಳುವ ತಿಳಿವಳಿಕೆ ಇನ್ನೂ ವ್ಯಾಪಕವಾಗಿಲ್ಲ. ಆದರೆ ಶರಣರು ಬಳಸಿದ ವಿದ್ಯೆಯ ಪಥ ವಿಧಾಯಕತೆಯಿಂದ ಕೂಡಿತ್ತೆಂಬುದು ಉಲ್ಲೇಖನೀಯ.

□

ಸರ್ವವೂ ಶಿವನಿಂದ ಉದ್ಭವಿಸುವವೆಂದರೆ
ಉದ್ಭವಿಸುವವೆಲ್ಲವೂ ಶಿವನೆ?
ಸಕಲ ಬೀಜವ ಬಿತ್ತುವನೊಕ್ಕಲಿಗನೆಂದರೆ
ಆ ಬೆಳೆ ತಾನೊಕ್ಕಲಿಗನೆ?
ಮಡಕೆಯ ಕುಂಬಾರ ಮಾಡುವನೆಂದರೆ
ಆ ಮಡಕೆ ತಾ ಕುಂಬಾರನೆ?
ಕಬ್ಬುನವ ಕಮ್ಮಾರ ಮಾಡುವನೆಂದರೆ
ಆ ಕಬ್ಬುನ ತಾ ಕಮ್ಮಾರನೆ?
ಆ ಪರಿಯಲಿ ಸಕಲ ಜಗತ್ತಿನ ಸಚರಾಚರವನು ಮಾಡುವನೆಂದರೆ,
ಆ ಸಚರಾಚರವು ಶಿವನೆ?
ಅಹಂಗಾದರೆ ಅಷ್ಟಾದಶವರ್ಣವೇಕಾದವು?
ಚೌರಾಸಿ ಲಕ್ಷ ಜೀವರಾಶಿಗಳೇಕಾದವು?
ಸುಖ-ದುಃಖ ಸ್ವರ್ಗ-ನರಕಂಗಳೇಕಾದವು?
ಉತ್ತಮ-ಮಧ್ಯಮ-ಕನಿಷ್ಠಂಗಳೇಕಾದವು?
ಪುಣ್ಯ-ಪಾಪ, ಭವಿ-ಭಕ್ತರೆಂದೇಕಾದವು?
ಇದುಕಾರಣ ಸದಾಚಾರ ಸದ್ಭಕ್ತಿಯಲ್ಲಿಪ್ಪಾತನೆ ಶಿವ.
ಅಂತಲ್ಲದೆ ಸರ್ವವೂ ಶಿವನೆಂದರೆ
ಅಘೋರ ನರಕ ಕೂಡಲಚೆನ್ನಸಂಗಯ್ಯಾ.

**– ಚನ್ನಬಸವಣ್ಣ**

# ತುರುವನೂರು ಧಾರ್ಮಿಕ ಕ್ಷೇತ್ರ ದರ್ಶನ

**ಡಾ. ಎಸ್.ಜಿ. ರಾಮದಾಸ ರೆಡ್ಡಿ**

ಚಿತ್ರದುರ್ಗ ಜಿಲ್ಲೆ, ಕಸಬಾ ತಾಲ್ಲೂಕಿನ ತುರುವನೂರು ಗ್ರಾಮವು ಪ್ರಾಗೈತಿಹಾಸಿಕ ಕಾಲದಿಂದಲೂ ಮಾನವನ ನೆಲೆಯಾಗಿತ್ತು. ಭಾರತದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಚಿತ್ರದುರ್ಗ ಜಿಲ್ಲೆ ಮತ್ತು ಅದರ ಹೋಬಳಿ ಕೇಂದ್ರಗಳಲ್ಲೊಂದಾದ ತುರುವನೂರು ಅತ್ಯಂತ ಪ್ರಸಿದ್ಧವಾಗಿವೆ. ಇದು ಜಿಲ್ಲಾ ಕೇಂದ್ರವಾದ ಚಿತ್ರದುರ್ಗದಿಂದ 22 ಕಿ.ಮೀ. ದೂರದಲ್ಲಿದೆ.

ಇದು ಚಿತ್ರದುರ್ಗ ಜಿಲ್ಲೆಯ ಅತಿ ದೊಡ್ಡ ಗ್ರಾಮಪಂಚಾಯಿತಿಯಾಗಿದ್ದು ಸುತ್ತಲಿನ ಏಳೆಂಟು ಹಳ್ಳಿಗಳ ನಿತ್ಯವ್ಯವಹಾರದ ಕೇಂದ್ರವಾಗಿದೆ. ಕೃಷಿಪ್ರಧಾನವಾದ ಊರಾದರೂ ಸಾಹಿತ್ಯಿಕ, ಸಾಂಸ್ಕೃತಿಕ, ಧಾರ್ಮಿಕ, ಔದ್ಯೋಗಿಕ ಗಣನೀಯವಾಗಿ ಕ್ಷೇತ್ರಗಳಲ್ಲಿ ಇದು ಮುಂದುವರಿದಿದೆ.

ತುರುವನೂರು ಪ್ರಾಚೀನ ಇತಿಹಾಸ, ಸಂಸ್ಕೃತಿಯ ಹಿನ್ನೆಲೆಯಾಗಿ, ಸ್ವಾತಂತ್ರ್ಯ ಸಂಗ್ರಾಮದ ವೇದಿಕೆಯಾಗಿ, ಕರ್ನಾಟಕದಲ್ಲಿ ಸ್ವಾತಂತ್ರ್ಯದ ಕಿಚ್ಚು ಹತ್ತಿಸಿದ ಪ್ರಮುಖ ಸ್ಥಳವಾಗಿ ರೂಪುಗೊಂಡಿತ್ತು, ಇದರ ಸವಿನೆನಪಿಗಾಗಿ ಗ್ರಾಮದಲ್ಲಿ ಗಾಂಧೀಜಿಯ ಆಳೆತ್ತರದ ಕಂಚಿನ ಪ್ರತಿಮೆಯಿರುವ ಜಿಲ್ಲೆಯ ಏಕೈಕ ಗ್ರಾಮವಾಗಿದೆ. ಈ ಪ್ರತಿಮೆಗೆ ದೇಗುಲವನ್ನು ನಿರ್ಮಿಸಿ 1.10.1968 ರಂದು ಎಸ್. ನಿಜಲಿಂಗಪ್ಪನವರು ಉದ್ಘಾಟಿಸಿದರು. ಇಲ್ಲಿ ಪ್ರತಿನಿತ್ಯವೂ  ಗಾಂಧೀಜಿಯವರಿಗೆ ಪೂಜೆ ನಡೆಯುತ್ತಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದ ಪುಟಗಳಲ್ಲಿ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಈಸೂರು ಗ್ರಾಮದಲ್ಲಿ ನಡೆದ ಹೋರಾಟವನ್ನು ಬಿಟ್ಟರೆ ತುರುವನೂರಿನ ಅರಣ್ಯ ಸತ್ಯಾಗ್ರಹವು ಅತ್ಯಂತ ಪ್ರಮುಖವಾಗಿದೆ.

ತುರುವನೂರು ಎಂಬ ಹೆಸರು ಬಂದ ಬಗೆಯನ್ನು ನೋಡುವುದಾದರೆ ತುರು ಎಂಬುದಕ್ಕೆ ದನ ಅಥವಾ ಪಶು ಎಂಬ ಅರ್ಥವಿದೆ. ದನ ಅಥವಾ ತುರುಗಳನ್ನು ಹೊಂದಿದವನ ಅಥವಾ ದನಗಳನ್ನು ಸಾಕಿದ್ದವನ ಊರು. ಈ ತುರುಗಳ ರಕ್ಷಕನೇ ಇಲ್ಲಿನ ತುರುವಪ್ಪ. ಅವನಿಗಾಗಿ ಕಟ್ಟಲಾದ ತುರುವಪ್ಪನ ಗುಡಿ ಇಲ್ಲಿದೆ. ತುರುವಪ್ಪ ಇರುವ ಊರು, ತುರುವನ ಊರು, ಮುಂದೆ ತುರುವನೂರು ಆಗಿದೆ.

ಹಾಗೆಯೇ ಇದೇ ಪರಿಸರದ ಪ್ರಸಿದ್ಧ ಬೆಟ್ಟವಾದ ಗೋಸರಪ್ಪನ ಗುಡ್ಡದ ಹೆಸರಿನಲ್ಲಿರುವ ಗೋಸರಪ್ಪ ಅರ್ಥವೂ ಗೋವುಗಳನ್ನು ರಕ್ಷಿಸುವವ, ಪಾಲಿಸುವವ ಎಂಬ ಅರ್ಥವನ್ನು ಹೊಂದಿದೆ. ಗೋಸ ಎಂದರೆ ದನ ಅಥವಾ ತುರು ಎಂದರ್ಥ. ಪಶುಪಾಲನೆಗೆ ಪ್ರಸಿದ್ಧಿಯಾದ ಈ ಗುಡ್ಡದ ಮೇಲೆ ಪ್ರಾಚೀನಕಾಲದಲ್ಲಿ ಶಿವಲಿಂಗವನ್ನು ಸ್ಥಾಪಿಸಿದ್ದು ಅದೇ ಗೋಸರಪ್ಪ ಈ ಭಾಗದ ಪ್ರಸಿದ್ಧ ದೈವವೂ ಆಗಿದೆ. ಅಂದರೆ ಗೋಸರಪ್ಪ ಎಂಬುದು ಪಶುಪಾಲನೆಯ ಹಿನ್ನೆಲೆಯಲ್ಲಿ ಬಂದ ಹೆಸರೆಂಬುದು ದೃಢವಾಗುತ್ತದೆ.

ಹಾಗೆಯೇ ಗ್ರಾಮದ ಈಶಾನ್ಯ ಹಾಗೂ ದಕ್ಷಿಣಕ್ಕೆ ಸುಮಾರು 3,000 ವರ್ಷಗಳ ಕಾಲಮಾನದ ಬೃಹತ್ ಶಿಲಾಯುಗ ಸಂಸ್ಕೃತಿಯ ಅನೇಕ ಕಲ್ಲುವೃತ್ತ ಮಾದರಿಯ ಶಿಲಾಸಮಾಧಿಗಳಿದ್ದು ಅವುಗಳಲ್ಲಿ ಕೆಲವು ಮಾತ್ರ ಉಳಿದುಬಂದಿವೆ. ಇವುಗಳನ್ನು ಮೋರೇರಕಲ್ಲು ಎಂದು ಕರೆಯುತ್ತಾರೆ. ಹಾಗೂ ಈ ಪರಿಸರದಲ್ಲಿ ಬೂದಿದಿಬ್ಬಗಳು ಗೋಚರಿಸುತ್ತಿದ್ದು, ಈ ಪರಿಸರವು ನವಶಿಲಾಯುಗ ಸಂಸ್ಕೃತಿಯ ಪಶುಪಾಲಕ ಸಮುದಾಯದ ಪ್ರಮುಖ ನೆಲೆಯಾಗಿರುವುದರಿಂದ 'ತುರುವನೂರು' ಎಂಬ ಹೆಸರು ಬರಲು ಕಾರಣವಾಗಿರಬಹುದು.

ಈ ಗ್ರಾಮವು ಚಾರಿತ್ರಿಕವಾಗಿಯೂ ಮಾನವನ ಪ್ರಮುಖ ಚಟುವಟಿಕೆಯ ಕೇಂದ್ರವಾಗಿದ್ದಿತು. ಇಲ್ಲಿ ಶಾತವಾಹನ ಮಹಾರಥಿಗಳ ಕಾಲದ ನಾಣ್ಯ, ನಂತರದ ಕಾಲದ ದೇವಾಲಯ, ಮೂರ್ತಿಶಿಲ್ಪ, ಕೋಟೆಕೊತ್ತಲ ಮೊದಲಾದ ಅವಶೇಷಗಳಿವೆ. ಹಾಗೂ ಗ್ರಾಮದಲ್ಲಿ ಎರಡು ಮಾಸ್ತಿಕಲ್ಲುಗಳಿವೆ.

ಉಪ್ಪಿನ ಸತ್ಯಾಗ್ರಹದ ಮಾದರಿಯಲ್ಲಿಯೇ ಸರ್ಕಾರದ ಕಾಯಿದೆಯನ್ನು ವಿರೋಧಿಸಿ ಅಪಾರ ಪ್ರಮಾಣದಲ್ಲಿದ್ದ ಈಚಲುಮರಗಳನ್ನು ಕಡಿದು ಪಾನನಿರೋಧ ಸತ್ಯಾಗ್ರಹ ಆರಂಭಿಸಿದ ಹೆಗ್ಗಳಿಕೆಯೂ ಈ ಗ್ರಾಮಕ್ಕಿದೆ.

18.9.1939 ಈ ಗ್ರಾಮದ ಅತ್ಯಂತ ಮಹತ್ತ್ವದ ದಿನ. ಇತಿಹಾಸದ ಪುಟದಲ್ಲಿ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಈಸೂರು ಗ್ರಾಮವನ್ನು ಬಿಟ್ಟರೆ ನಂತರದಲ್ಲಿ ನಡೆದ ತುರುವನೂರಿನ 'ಅರಣ್ಯ ಸತ್ಯಾಗ್ರಹ' ಪ್ರಮುಖವಾದುದು ಎಂದು ಹೇಳುವುದು ಈ ಕಾರಣಕ್ಕಾಗಿಯೇ.

ತುರುವನೂರಿನಲ್ಲಿ ಚರಕ ಇಲ್ಲದ ಮನೆಗಳೇ ಇರಲಿಲ್ಲ. ಪ್ರತಿನಿತ್ಯವೂ ಎಲ್ಲರ ಮನೆಗಳಲ್ಲಿ ಚರಕದಿಂದ ನೂಲು ತೆಗೆಯುತ್ತಿದ್ದರು. ಇಲ್ಲಿ ಬದನವಾಳಿನ ಖಾದಿ ಕೇಂದ್ರವಿತ್ತು. ಇಲ್ಲಿ ಅರಳೆಯಿಂದ ನೂಲು ತೆಗೆದು ಹಂಜಿಗಳನ್ನು ಮಾಡುತ್ತಿದ್ದರು. ಹೀಗೆ ನೂತ ನೂಲಿನ ಲಡಿಗಳಿಂದ ಖಾದಿಬಟ್ಟೆಯನ್ನು ನೇಯುವ ಮಗ್ಗಗಳಿದ್ದವು. ಊರಿನ ಸುತ್ತಮುತ್ತಲ ಗ್ರಾಮದವರು ಈ ಬಟ್ಟೆಯನ್ನು ಮಾರಿ ಬಂದ ಹಣದಿಂದ

ಮನೆಯ ವೆಚ್ಚಗಳನ್ನು ತೂಗಿಸಿಕೊಂಡು ಹೋಗುತ್ತಿದ್ದರು. ಇಲ್ಲಿಯ ಕಂಬಳಿಗಳೂ ಸಹ ದೇಶಾದ್ಯಂತ ಪ್ರಸಿದ್ಧಿ ಪಡೆದಿದ್ದವು.

**ಗವಿಗಂಗಾಧರೇಶ್ವರ ದೇವಾಲಯ**

ಗ್ರಾಮದಲ್ಲಿ ಇದೊಂದು ಪ್ರಾಚೀನ ದೇವಾಲಯ. ಗವಿಗಂಗಾಧರೇಶ್ವರ ದೇವಾಲಯವು ಗರ್ಭಗೃಹ, ಅರ್ಧಮಂಟಪ ಮತ್ತು ಸಭಾಮಂಟಪಗಳಿಂದ ಕೂಡಿದ ಸರಳವಾದ ಮತ್ತು ಸ್ವಾಭಾವಿಕ ಚಪ್ಪಡಿಗಳನ್ನು ಬಳಸಿ ಕಟ್ಟಿರುವ ದೇವಾಲಯ. ಗರ್ಭಗೃಹದಲ್ಲಿ ಎರಡು ಅಡಿ ಎತ್ತರ, ನಾಲ್ಕು ಅಡಿ ಉದ್ದ ಮತ್ತು ಎರಡು ಅಡಿ ಅಗಲದ ಕಪ್ಪುಶಿಲೆಯಲ್ಲಿ ಕಡೆದಿರುವ ಶಿವಲಿಂಗವನ್ನು ಪ್ರತಿಷ್ಠಾಪಿಸಿದೆ. ಇದರ ಮುಂದೆ ನಂದಿಯ ಶಿಲ್ಪವಿದೆ. ಇದು ಮೂರು ಅಡಿ ಉದ್ದ ಹಾಗೂ ಒಂದೂವರೆ ಅಡಿ ಎತ್ತರವಾಗಿದೆ. ನಂದಿಯನ್ನು ಗಂಟೆಸರ, ದಂಡೆಗಳಿಂದ ಅಲಂಕರಿಸಿರುವರು. ಅರ್ಧಮಂಟಪದಲ್ಲಿ ಗಣೇಶ ಮತ್ತು ನಾಗಶಿಲ್ಪಗಳಿವೆ. ದೇಗುಲದ ಕಂಬಗಳು ಚಪ್ಪಟೆಯ ಬಂಡೆಗಲ್ಲುಗಳಾಗಿವೆ.

ಈ ದೇವಾಲಯವು ಹಾಯ್ಕಲ್ ರಸ್ತೆಯಲ್ಲಿರುವ ಅಯ್ಯಣ್ಣನವರ ತೋಟದಲ್ಲಿದೆ. ದೇವಾಲಯದ ಶಿಲ್ಪಗಳು ಕ್ರಿ.ಶ. ಸು.17–18ನೇ ಶತಮಾನದ್ದಾಗಿವೆ. ಗ್ರಾಮದಲ್ಲಿ ನಡೆಯುವ ಯಾವುದೇ ಹಬ್ಬ, ಜಾತ್ರೆ, ಉತ್ಸವಗಳಲ್ಲಿ ಇಲ್ಲಿಗೆ ಬಂದು ಗಂಗಾಪೂಜೆ ಮಾಡಿ ಕಾರ್ಯ ಪ್ರಾರಂಭಿಸುವ ಪದ್ಧತಿ ಗ್ರಾಮದಲ್ಲಿ ಇಂದಿಗೂ ಇದೆ.

**ಕಲ್ಲೇಶ್ವರಸ್ವಾಮಿಯ ದೇವಾಲಯ**

ಊರ ಮಧ್ಯಭಾಗದಲ್ಲಿರುವ ಕಲ್ಲೇಶ್ವರ ದೇವಾಲಯವು ವಾಸ್ತುಶಿಲ್ಪ ದೃಷ್ಟಿಯಿಂದ ಸು. 10–11ನೆಯ ಶತಮಾನದ ಅವಧಿಯದ್ದಾಗಿರಬಹುದು. ಇತ್ತೀಚೆಗೆ ಇದು ಜೀರ್ಣೋದ್ಧಾರಗೊಂಡಿದೆ. ಗರ್ಭಗುಡಿ, ವಿಶಾಲವಾದ ಸಭಾಮಂಟಪ ಹಾಗೂ 15 ಅಡಿ ಎತ್ತರದ ದೀಪಸ್ತಂಭವನ್ನು ಹೊಂದಿದೆ. ಗರ್ಭಗುಡಿಯಲ್ಲಿ ಒಂದೂವರೆ ಅಡಿ ಎತ್ತರದ ನಯಗಾರಿಕೆಯ ಕಪ್ಪುಶಿಲೆಯ ಶಿವಲಿಂಗವನ್ನು ಪ್ರತಿಷ್ಠಾಪಿಸಿದೆ. ಶಿವಲಿಂಗಕ್ಕೆ ಎದುರಾಗಿ ನಂದಿ ಇದೆ. ಗರ್ಭಗುಡಿಯ ಬಾಗಿಲುವಾಡಕ್ಕೆ ಹಿತ್ತಾಳೆಯ ತಗಡು ಹೊದಿಸಲಾಗಿದೆ. ಅದರಲ್ಲಿ ದ್ವಾರಪಾಲಕರು, ಶಿವ, ಪಾರ್ವತಿ, ಗಣೇಶರ ಉಬ್ಬು ಶಿಲ್ಪಗಳಿವೆ. ಸಭಾಮಂಟಪದಲ್ಲಿ ಹಲವು ಸುಂದರ ಕಂಬಗಳಿವೆ. ಗರ್ಭಗೃಹದ ಮೇಲೆ ದ್ರಾವಿಡಶೈಲಿಯ ಶಿಖರವಿದೆ.

**ರಥೋತ್ಸವ**

ಚಿತ್ರದುರ್ಗ ತಾಲ್ಲೂಕಿನ ಪ್ರಮುಖ ಉತ್ಸವಗಳಲ್ಲಿ ಈ ಗ್ರಾಮದ ಕಲ್ಲೇಶ್ವರ ದೇವಾಲಯದ ರಥೋತ್ಸವವೂ ಒಂದಾಗಿದೆ. ಇದನ್ನು ಸಾಮಾನ್ಯವಾಗಿ ಹಂಪೆಯ ಹುಣ್ಣಿಮೆಯ ದಿನದಂದು ವಿಜೃಂಭಣೆಯಿಂದ ಆಚರಿಸುತ್ತಾರೆ. ಹಾಗೆಯೇ

ಶ್ರಾವಣಮಾಸದ ಕಡೆಯ ಸೋಮವಾರದಂದು ಈ ದೇಗುಲದಿಂದ ಎಡೆಯನ್ನು ಸುಮಾರು ಹತ್ತು ಕಿ.ಮೀ. ದೂರದಲ್ಲಿರುವ ಗುಹೇಶ್ವರ (ಗೋಸರೆಪ್ಪ) ಬೆಟ್ಟಕ್ಕೆ ಕೊಂಡೊಯ್ದು ಅಲ್ಲಿನ ಶಿವಲಿಂಗಕ್ಕೆ ನೈವೇದ್ಯ ಮಾಡಿ ಬರುವ ಪರಿಪಾಟ ಇಂದಿಗೂ ಮುಂದುವರಿದಿದೆ. ದೇವಾಲಯದ ಪೂಜಾಕಾರ್ಯಗಳನ್ನು ಜಂಗಮರು ನಡೆಸಿಕೊಂಡು ಹೋಗುತ್ತಿದ್ದಾರೆ. ಸುತ್ತಮುತ್ತಲ ಗ್ರಾಮಗಳು, ನೆರೆಯ ತಾಲ್ಲೂಕು ಮತ್ತು ಆಂಧ್ರಪ್ರದೇಶದ ಭಕ್ತರು ಬಂದು, ರಥೋತ್ಸವದಲ್ಲಿ ಪಾಲ್ಗೊಂಡು ದೇವರ ಕೃಪೆಗೆ ಪಾತ್ರರಾಗುತ್ತಾರೆ.

## ರಾಮಲಿಂಗೇಶ್ವರ ದೇವಾಲಯ

ರಾಮಲಿಂಗೇಶ್ವರ ದೇವಾಲಯವು ಊರ ಪಶ್ಚಿಮಕ್ಕೆ ಹೊರವಲಯದಲ್ಲಿದೆ. ಕ್ರಿ.ಶ. 8–9ನೆಯ ಶತಮಾನದಲ್ಲಿ ಅದರ ನಿರ್ಮಾಣ ಆಗಿರಬಹುದು. ಶಿಥಿಲವಾಗಿದ್ದ ದೇವಾಲಯು ಇದೀಗ ಜೀರ್ಣೋದ್ಧಾರಗೊಂಡಿದೆ. ಗರ್ಭಗೃಹ ಮತ್ತು ಸಭಾಮಂಟಪಗಳಿರುವ ಇದರಲ್ಲಿ ನಾಲ್ಕು ಅಡಿ ಉದ್ದ, ಮೂರು ಅಡಿ ಅಗಲ ಇರುವ ಶಿವಲಿಂಗವು ಪ್ರಾಚೀನ ಕಾಲದ್ದು, ಅಂದರೆ 6–7ನೆಯ ಶತಮಾನದ್ದು. ಅದರ ಮುಂದಿರುವ ನಂದಿಯ ಶಿಲ್ಪ ಸುಂದರವಾಗಿದೆ. ದೇವಾಲಯದ ದ್ವಾರಭಾಗದಲ್ಲಿ ಅನೇಕ ಸುಂದರವಾದ ಕಂಬಗಳಿವೆ.

ರಾಮಲಿಂಗದೇವರ ಗರ್ಭಗುಡಿಯ ಬಾಗಿಲವಾಡವು ಸುಂದರವಾಗಿದೆ. ನೊಳಂಬರ ಕಾಲದ ಶಿಲಾಶಾಸನವೊಂದು ಇಲ್ಲಿದೆ. ಈ ಶಾಸನವು ಶಿಥಿಲವಾಗಿದ್ದು, ಯಾವುದೇ ವಿವರಗಳು ಲಭ್ಯವಿಲ್ಲ. ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿ ಈ ದೇವಾಲಯದಲ್ಲಿ ಹೋರಾಟಗಾರರು ಸಭೆ ನಡೆಸುತ್ತಿದ್ದರು ಎಂದು ಸ್ಥಳೀಯರು ಹೇಳುತ್ತಾರೆ.

ಇತ್ತೀಚೆಗೆ ದೇವಾಲಯದ ಬಲಭಾಗದಲ್ಲಿ ಶಿರಗುಪ್ಪ ತಾಲ್ಲೂಕಿನ ಅವಧೂತ ಅರಳಿಗನೂರು ಬಸಪ್ಪ ತಾತನವರ ಪ್ರತಿಮೆಯಿರುವ ಗುಡಿ ನಿರ್ಮಾಣವಾಗಿದೆ.

## ಮೈಲಾರಲಿಂಗೇಶ್ವರ ದೇವಾಲಯ

ಈ ದೇವಾಲಯವು ಗ್ರಾಮದ ಮಧ್ಯಭಾಗದಲ್ಲಿದ್ದು 17–18ನೆಯ ಶತಮಾನದಲ್ಲಿ ನಿರ್ಮಾಣವಾಗಿದೆ. ಗರ್ಭಗೃಹ ಮತ್ತು ತೆರೆದ ಸಭಾಮಂಟಪಗಳಲ್ಲಿ ಭೈರವ ಮತ್ತು ಭೈರವಿಯರ ಶಿಲ್ಪಗಳಿವೆ. ಭೈರವ ತನ್ನ ನಾಲ್ಕು ಕೈಗಳಲ್ಲಿ ತ್ರಿಶೂಲ, ಡಮರುಗ, ಖಡ್ಗ, ಪಾನಬಟ್ಟಲುಗಳಿರುವ ರೀತಿಯಲ್ಲಿ ಶಿಲ್ಪವಿದೆ. ಭೈರವಿಯ ಶಿಲ್ಪವೂ ಇದೇ ರೀತಿ ಇದೆ. ಇದನ್ನು ಮೈಲಾರಲಿಂಗೇಶ್ವರನೆಂದೂ ಕರೆಯುತ್ತಾರೆ. ಸಭಾಮಂಟಪದಲ್ಲಿ ಗಣೇಶ, ವಿಷ್ಣುವಿನ ಮೂರ್ತಿಗಳು ಅನಂತರದಲ್ಲಿ ಪ್ರತಿಷ್ಠಾಪಿಸಲ್ಪಟ್ಟಿವೆ. ಇದನ್ನು ನೋಡಿದರೆ ಇದು ವಿಜಯನಗರೋತ್ತರ ನಾಯಕರ ಕಾಲದ್ದೆಂದು ಹೇಳಬಹುದು.

**ಆಂಜನೇಯಸ್ವಾಮಿ ದೇವಾಲಯ**

ಗ್ರಾಮದ ದೊಡ್ಡಘಟ್ಟ ರಸ್ತೆಯಲ್ಲಿ ಗ್ರಾಮದ ಮಧ್ಯದಲ್ಲಿರುವ ಈ ದೇವಸ್ಥಾನವು 17–18ನೆಯ ಶತಮಾನಕ್ಕೆ ಸೇರಿದ್ದಾಗಿದೆ; ಪಾಳೆಯಗಾರರ ಕಾಲದ್ದು. ಗರ್ಭಗುಡಿ, ಅಂತರಾಳ, ಸಭಾಮಂಟಪಗಳಿವೆ. 5 ಅಡಿ ಎತ್ತರದ ಆಂಜನೇಯಸ್ವಾಮಿಯ ಶಿಲ್ಪವಿದೆ. ಸಭಾಮಂಟಪಗಳಲ್ಲಿ ಆರು ಕಂಬಗಳಿವೆ. ಅವುಗಳ ಮೇಲೆ ಪುಷ್ಪದ ಬೋದಿಗೆಗಳು, ಅನೇಕ ಉಬ್ಬುಶಿಲ್ಪಗಳಿವೆ. ಬಾಗಿಲುವಾಡಗಳಿಗೆ ಹಿತ್ತಾಳೆಯ ತಗಡನ್ನು ಹೊದಿಸಲಾಗಿದೆ. ಅದರ ಮೇಲೆ ಸುಂದರವಾದ ವಿವಿಧ ಬಗೆಯ ಉಬ್ಬುಶಿಲ್ಪಗಳು, ಹೂಬಳ್ಳಿ, ದ್ವಾರಪಾಲಕರು, ಲಕ್ಷ್ಮಿ, ಗಣೇಶ ಮುಂತಾದ ರಚನೆಗಳಿವೆ. ಮುಂಭಾಗದಲ್ಲಿ 8 ಅಡಿ ಎತ್ತರದ ದೀಪಸ್ತಂಭ ಇದೆ. ಪ್ರತಿ ವರ್ಷ ಇಲ್ಲಿ ಆಂಜನೇಯನ ಜಾತ್ರೆ ನಡೆಯುತ್ತದೆ. ಜಾತ್ರೆಯಲ್ಲಿ ರಥೋತ್ಸವ, ದಾಸಯ್ಯನ ಪವಾಡಗಳು ನಡೆಯುತ್ತವೆ. ಸುತ್ತಮುತ್ತಲ ಗ್ರಾಮಗಳಿಂದ ಸಾವಿರಾರು ಜನರು ಬಂದು ದೇವರ ಕೃಪೆಗೆ ಪಾತ್ರರಾಗುತ್ತಾರೆ.

**ತುರುವಪ್ಪನ ಗುಡಿ**

ಗ್ರಾಮದ ಮಧ್ಯದಲ್ಲಿರುವ 17–18ನೆಯ ಶತಮಾನದ ದೇವಾಲಯ. ಚಿಕ್ಕ ಗರ್ಭಗೃಹ ಮತ್ತು ಸಭಾಮಂಟಪಗಳಿವೆ. ಇದರಲ್ಲಿ ಚಿಕ್ಕ ಕಲ್ಲುಗಳನ್ನು (ಬಹುಶಃ ಶಿಲಾಯುಗದವು) ಇಟ್ಟು ಪೂಜಿಸಲಾಗುತ್ತಿದೆ. ಇವುಗಳನ್ನು ತುರುವಪ್ಪನೆಂದು ಕರೆಯುವರು. ಬುಡಕಟ್ಟು ಮಾದರಿಯ ಈ ಗುಡಿಯನ್ನು ಕಲ್ಲು ಮಣ್ಣು ಗಾರೆಗಳಿಂದ ಕಟ್ಟಲಾಗಿದ್ದು ಗೊಲ್ಲ ಸಮುದಾಯದವರು ಇಲ್ಲಿ ಪೂಜೆ ಮಾಡುತ್ತಾರೆ.

**ಮಾರಮ್ಮನ ದೇವಾಲಯ**

ಗ್ರಾಮದ ಮಧ್ಯಭಾಗದಲ್ಲಿರುವ ಗಾಂಧಿ ಪ್ರತಿಮೆಯ ಬಲಪಕ್ಕದಲ್ಲಿರುವ ಈ ನಿರ್ಮಿತಿ 19–20ನೆಯ ಶತಮಾನದ್ದು. ಸ್ಥಳೀಯ ಶೈಲಿಯಲ್ಲಿ ನಿರ್ಮಾಣವಾಗಿದೆ. ಒಳಗಡೆ ಗರ್ಭಗೃಹ, ಸಭಾಮಂಟಪವಿದೆ. ಗರ್ಭಗೃಹದಲ್ಲಿ ಸುಮಾರು ಆರು ಅಡಿ ಎತ್ತರದ ಸಿಂಹವಾಹನೆಯಾಗಿರುವ ಮರದ ಮಾರಮ್ಮನ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ದೇವಿಯು ನಾಲ್ಕು ಕೈಗಳಲ್ಲಿ ಡಮರು, ಚಾಮರ, ಖಡ್ಗ ಮತ್ತು ಪಾನಬಟ್ಟಲುಗಳನ್ನು ಹಿಡಿದಿದ್ದಾಳೆ. ಐದು ವರ್ಷಕ್ಕೊಮ್ಮೆ ವಿಜೃಂಭಣೆಯಿಂದ ಜಾತ್ರೆ ನಡೆಯುತ್ತದೆ. ಜಾತ್ರೆಯಲ್ಲಿ ಉಡಿ ತುಂಬುವುದು, ಚರಗ ಚೆಲ್ಲುವುದು, ಗಾವು ಸಿಗಿಯುವುದು ಮುಂತಾದ ಆಚರಣೆಗಳಿವೆ. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಇಲ್ಲಿ ಚರ್ಚೆ ನಡೆಯುತ್ತಿತ್ತು. ಅರಣ್ಯ ಸತ್ಯಾಗ್ರಹಕ್ಕೆ ಜನ ಇಲ್ಲಿಂದಲೇ ಹೊರಟಿದ್ದರು ಎಂದು ಗ್ರಾಮದ ಹಿರಿಯರು ಹೇಳುತ್ತಾರೆ.

ಒಟ್ಟಾರೆ ಈ ಗ್ರಾಮವು ಶಿಲಾಯುಗದಿಂದ ಇಂದಿನವರೆಗೆ ಜನವಸತಿಯ ಭೂಪ್ರದೇಶವಾಗಿ ಕರ್ನಾಟಕದ ಇತಿಹಾಸದ ಮೇಲೆ ಬೆಳಕು ಚೆಲ್ಲುತ್ತದೆ.

□

# ವಾರ್ತಾವಿಹಾರ

**ಕುಮಾರಸ್ವಾಮಿ ವಿರಕ್ತಮಠ**

## ಪ್ರಯತ್ನ ಮತ್ತು ಪರಿಶ್ರಮ ಯಶಸ್ಸಿನ ಮೈಲಿಗಲ್ಲು

ಸತತ ಪ್ರಯತ್ನ ಮತ್ತು ಕಠಿಣ ಪರಿಶ್ರಮದಿಂದ ಯಶಸ್ಸು ಗಳಿಸಬಹುದು ಎಂದು ಹೈದರಾಬಾದ್ ಯುಎಸ್‌ಪಿ ಇಂಡಿಯಾದ ಸೈಟ್ ಆಪರೇಶನ್ಸ್‌ನ ಹಿರಿಯ ಉಪಾಧ್ಯಕ್ಷರಾದ ಡಾ. ಗಿರೀಶ್ ಕಪೂರ್‌ರವರು ಜುಲೈ 1ರಂದು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಮೈಸೂರು ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಪದವೀಧರರ 'ಸಮವರ್ತನ' ಪದವಿ ಪ್ರದಾನ ಕಾರ್ಯಕ್ರಮದಲ್ಲಿ ತಿಳಿಸಿದರು. ಯಶಸ್ಸಿಗೆ ಯಾವುದೇ ಅಡ್ಡದಾರಿ ಇರುವುದಿಲ್ಲ. ದಿಢೀರನೆ ಗಳಿಸಿದ ಯಶಸ್ಸು ಬಹಳ ದಿನ ಉಳಿಯುವುದಿಲ್ಲ. ಈ ಕಾರಣದಿಂದಾಗಿ ಕಠಿಣ ಅಧ್ಯಯನ ಅಗತ್ಯ. ಇದರೊಂದಿಗೆ ಗುರಿ ನಿಖರವಾಗಿರಬೇಕು. ವಿದ್ಯಾರ್ಥಿಗಳು ಜೀವನದಲ್ಲಿ ಆತ್ಮಸ್ಥೈರ್ಯ ರೂಢಿಸಿಕೊಳ್ಳ ಬೇಕು. ಸಿಗುವ ಅವಕಾಶಗಳನ್ನು ಸಮರ್ಥವಾಗಿ ಬಳಸಿಕೊಳ್ಳಬೇಕು. ಜ್ಞಾನ ಹೆಚ್ಚಿಸಿ ಕೊಳ್ಳಬೇಕು. ಔಷಧ ವಿಜ್ಞಾನ ಕ್ಷೇತ್ರ ಒಂದು ಜವಾಬ್ದಾರಿಯುತ ಪ್ರಪಂಚ. ಇದರ ಮಹತ್ವ ಅರಿತು ಮುನ್ನಡೆಯಬೇಕು. ಸಂಶೋಧನೆ ನಡೆಸಿ, ಆವಿಷ್ಕಾರ ಮಾಡಿ ಹೊಸ ಔಷಧಿಗಳ ಸಂಯುಕ್ತ ಮಿಶ್ರಣ ಕಂಡು ಹಿಡಿಯಬಹುದು. ಆದರೆ ಇವುಗಳು ಅಂತಿಮ ವಾಗಿ ಮನುಷ್ಯರ ಒಳಿತಾಗಿ ಉಪಯೋಗವಾಗುತ್ತವೆ ಎನ್ನುವ ಅರಿವು ಹೊಂದಬೇಕು. ಆದ್ದರಿಂದ ಬಹಳ ಜಾಗರೂಕತೆಯಿಂದ ಅಭ್ಯಾಸ ಮಾಡಬೇಕು. ಆಧುನಿಕ ತಂತ್ರಜ್ಞಾನದ ಕೌಶಲ ರೂಢಿಸಿಕೊಳ್ಳಬೇಕು. ಔಷಧ ವಿಜ್ಞಾನ ಕ್ಷೇತ್ರ ಫಲಿತಾಂಶ ಆಧಾರಿತವಾದ ವಲಯ ಆಗಿರುವುದರಿಂದ ತರಬೇತಿ ಬಹಳ ಮುಖ್ಯ ಎಂದು ಹೇಳಿದರು.

ಒಟ್ಟು 267 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಇದೇ ಸಂದರ್ಭದಲ್ಲಿ ಔಷಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಕಾಲೇಜಿನ ಹಿರಿಯ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಸಿ.ಜಿ. ಬೆಟಸೂರಮಠ, ಕುಲಪತಿಗಳಾದ ಡಾ. ಎಚ್. ಬಸವನಗೌಡಪ್ಪ, ಕುಲಸಚಿವರಾದ ಡಾ. ಬಿ. ಮಂಜುನಾಥ ಉಪಸ್ಥಿತರಿದ್ದರು. ಡಾ. ಟಿ.ಎಂ. ಪ್ರಮೋದ್‌ಕುಮಾರ್ ಸ್ವಾಗತಿಸಿದರು. ಡಾ, ಆರ್. ಸುಧೀಂದ್ರ ಭಟ್ ಪ್ರತಿಜ್ಞಾವಿಧಿ ಬೋಧಿಸಿದರು. ಕು. ಜ್ಯೋಥಿಸ್ ಮತ್ತು ಕು. ಜ್ಯುವೆಲ್ ಪ್ರಾರ್ಥಿಸಿದರು. ಡಾ. ಜಿ.ವಿ. ಪೂಜಾರ್ ವಂದಿಸಿದರು.

**ಶ್ರೀ ವ್ಯಾಸರಾಜತೀರ್ಥರು ವಿದ್ವತ್ತಿನ ಗಣಿ**

ಸಕಲ ಶಾಸ್ತ್ರಗಳಲ್ಲಿ ಪರಿಣತಿ ಹೊಂದಿದ್ದ ಶ್ರೀ ವ್ಯಾಸರಾಜತೀರ್ಥರು ವಿದ್ವತ್ತಿನ ಗಣಿಯಾಗಿದ್ದರು ಎಂದು ಪರಮಪೂಜ್ಯ ಜಗದ್ಗುರುಗಳವರು ಜುಲೈ 4ರಂದು ಮೈಸೂರಿನ ಸೋಸಲೆ ಶ್ರೀ ವ್ಯಾಸರಾಜ ಮಠದ ಶ್ರೀ ವಿದ್ಯಾಶ್ರೀಶತೀರ್ಥ ಶ್ರೀಪಾದಂಗಳವರ 9ನೇ ಪೀಠಾರೋಹಣ ವಾರ್ಷಿಕೋತ್ಸವ ಮತ್ತು ಶ್ರೀ ವ್ಯಾಸತೀರ್ಥ ವಿದ್ಯಾಪೀಠದ 10ನೇ ವಾರ್ಷಿಕೋತ್ಸವ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ವ್ಯಾಸರಾಜರ ಸಾಲಿನಲ್ಲಿ ಈಗಿನ ಪೀಠಾಧಿಪತಿಗಳಾದ ಶ್ರೀ ವಿದ್ಯಾಶ್ರೀಶತೀರ್ಥರನ್ನು ಪರಿಗಣಿಸಬಹುದು. ಶ್ರೀ ವ್ಯಾಸರಾಜತೀರ್ಥರು ಉತ್ಕೃಷ್ಟ ದೇವರನಾಮಗಳನ್ನು ಕನ್ನಡದಲ್ಲಿ ರಚನೆ ಮಾಡಿದ್ದಾರೆ. ಅಲ್ಲದೆ ಶಾಸ್ತ್ರೀಯ ಸಂಗೀತದಲ್ಲಿ ಪರಿಣತಿ ಹೊಂದಿದ್ದರು. ಅವರ ಕಾಲದ ಕರ್ನಾಟಕ ಸಂಗೀತ ವಿದ್ವಾಂಸರು ಶ್ರೀ ವ್ಯಾಸರಾಜ ತೀರ್ಥರ ಬಗ್ಗೆ ಉನ್ನತ ಅಭಿಪ್ರಾಯ ಹೊಂದಿದ್ದರು. ಶ್ರೀ ವಿದ್ಯಾಶ್ರೀಶತೀರ್ಥರು ತಮ್ಮ ಪೂರ್ವಾಶ್ರಮದಲ್ಲಿ ಬೆಂಗಳೂರು ಮತ್ತು ತಿರುಪತಿ ವಿವಿಗಳಲ್ಲಿ ಕುಲಪತಿಗಳಾಗಿ ಉತ್ತಮ ಕೆಲಸ ಮಾಡಿದ್ದಾರೆ. ಇವರು ಶ್ರೀಮಠದ ಪೀಠಾಧಿಪತಿಗಳಾದ ಮೇಲೆ ಹಿಂದಿನ ವೈಭವ ಮರುಕಳಿಸುವಲ್ಲಿ ಸಾಕಷ್ಟು ಶ್ರಮಿಸಿದ್ದಾರೆ ಎಂದು ಹೇಳಿದರು.

ನಿವೃತ್ತ ಐಎಎಸ್ ಅಧಿಕಾರಿಗಳಾದ ಶ್ರೀ ಕೆ. ಜಯರಾಜ್‌ರವರು ಶ್ರೀ ವ್ಯಾಸರಾಜ ಮಠ ಎಲ್ಲಾ ಸಂಕಷ್ಟಗಳಿಂದ ಹೊರಬಂದು ತನ್ನ ಹಿಂದಿನ ವೈಭವಕ್ಕೆ ಮರಳುತ್ತಿದೆ. ಶ್ರೀಮಠದಲ್ಲಿ ಶ್ರೀ ವ್ಯಾಸರಾಜತೀರ್ಥರ ಕಾಲದ ವೈಭವ ಮರುಕಳಿಸಲು ಶ್ರೀ ವಿದ್ಯಾಶ್ರೀಶತೀರ್ಥರ ಕಾರ್ಯ ಶ್ಲಾಘನೀಯ ಎಂದರು.

ಡಿಆರ್‌ಡಿಓ ನಿವೃತ್ತ ವಿಜ್ಞಾನಿಗಳಾದ ಶ್ರೀ ಪ್ರಹ್ಲಾದ್ ರಾಮರಾವ್‌ರವರು ಯುವ ಸಮೂಹದ ಪ್ರಯತ್ನದಿಂದ ವಿಕಸಿತ ಭಾರತ ರೂಪುಗೊಳ್ಳಲು ಸಾಧ್ಯ. ಗುರುಕುಲದ ಶಿಕ್ಷಣದಲ್ಲಿಯೂ ವಿಜ್ಞಾನ, ತಂತ್ರಜ್ಞಾನದ ಕಲಿಕೆಯಿತ್ತು. ಆಧುನಿಕ ಶಿಕ್ಷಣವೂ ಅದನ್ನೇ ಮುಂದುವರೆಸಿದೆ. ಪೂರ್ವಕಾಲದಲ್ಲಿನ ಆಚರಣೆಗಳಿಗೂ ವೈಜ್ಞಾನಿಕತೆಯ ಸ್ಪರ್ಶ ಇತ್ತು. ಇಂದಿನ ವಿದ್ಯಾರ್ಥಿಗಳು ಎಲ್ಲಾ ವಿಚಾರಗಳ ಅಧ್ಯಯನ ಮಾಡುವುದೊಂದಿಗೆ ಆಧ್ಯಾತ್ಮಿಕವಾಗಿಯೂ ತೊಡಗಿಸಿಕೊಳ್ಳಬೇಕು ಎಂದು ಹೇಳಿದರು.

ಡಾ. ಆನಂದತೀರ್ಥಾಚಾರ್ಯ ನಾಗಸಂಪಿಗೆ, ವಿದ್ವಾನ್ ಬ್ರಹ್ಮಣ್ಯಾಚಾರ್ಯ ಅಭಿನಂದನಾ ಭಾಷಣ ಮಾಡಿದರು. ಡಿಸಿಎಕ್ಸ್ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕರಾದ ಡಾ. ಎಚ್.ಎಸ್. ರಾಘವೇಂದ್ರರಾವ್, ಅಲ್ಫಾ ವಿನ್ಯಾಸ ತಂತ್ರಜ್ಞಾನ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಚ್.ಎಸ್. ಹರಿಪ್ರಸಾದ್‌ರವರು ಉಪಸ್ಥಿತರಿದ್ದರು.

**ಎಡೆಯೂರು ಶ್ರೀ ಸಿದ್ಧಲಿಂಗೇಶ್ವರರು ತಾತ್ವಿಕ ತಳಹದಿಯ ಮೇಲೆ ಧರ್ಮವನ್ನು ಕಟ್ಟಿದವರು**

ಎಡೆಯೂರು ಶ್ರೀ ಸಿದ್ಧಲಿಂಗೇಶ್ವರರು ತಾತ್ವಿಕ ತಳಹದಿಯ ಮೇಲೆ ಧರ್ಮವನ್ನು ಕಟ್ಟಿದವರು ಎಂದು ಪರಮಪೂಜ್ಯ ಜಗದ್ಗುರುಗಳವರು ಜುಲೈ 6ರಂದು ಮೈಸೂರು

ಜೆ.ಪಿ. ನಗರದಲ್ಲಿ ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿಯ ದೇವಸ್ಥಾನ ನಿರ್ಮಾಣ ಶಿಲಾನ್ಯಾಸ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಆಷಾಢ ಮಾಸದಲ್ಲಿ ಇಂತಹ ಪುಣ್ಯ ಕೆಲಸ ನಡೆಯುತ್ತಿರುವುದು ಶ್ಲಾಘನೀಯ. ಪುಣ್ಯದ ಕೆಲಸಗಳಿಗೆ ಎಲ್ಲವೂ ಶುಭದಿನಗಳು. ಶ್ರೀ ಸಿದ್ಧಲಿಂಗೇಶ್ವರರು ದೇಶದ ಹಲವು ಭಾಗಗಳಲ್ಲಿ ಸಂಚರಿಸಿ ಆಧ್ಯಾತ್ಮಿಕ ಚಿಂತನೆಗಳನ್ನು ಬಿತ್ತಿದವರು. ಕಗ್ಗೆರೆಯಲ್ಲಿ ಪವಾಡ ತೋರಿ, ಯಡಿಯೂರಿನಲ್ಲಿ ನೆಲೆ ನಿಂತು ಪ್ರಸಿದ್ಧಿ ಪಡೆದರು ಎಂದು ಹೇಳಿದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರು ಹಾಗೂ ಶಾಸಕರಾದ ಶ್ರೀ ಬಿ.ವೈ. ವಿಜಯೇಂದ್ರರವರು ಶ್ರೀ ಬಿ.ಎಸ್. ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದ ಅವಧಿಯಲ್ಲಿ ದೇವಾಲಯ ನಿರ್ಮಾಣಕ್ಕೆ ನಿವೇಶನವನ್ನು ನೀಡಲಾಯಿತು. ಯಡಿಯೂರು ಮಾದರಿಯಲ್ಲಿ ಇಲ್ಲಿ ದೇವಾಲಯ ನಿರ್ಮಿಸಲಾಗುತ್ತಿದೆ. ನಾನು ಶಿಲಾನ್ಯಾಸ ಮಾಡುತ್ತಿರುವುದು ಸಂತಸ ತಂದಿದೆ. ವೀರಶೈವ–ಲಿಂಗಾಯತ ದೊಡ್ಡ ಪರಂಪರೆ ಇರುವ ಸಮುದಾಯ. ಆಲದ ಮರದಂತೆ ಇತರೆ ಸಮುದಾಯಗಳಿಗೆ ನೆರಳು ಹಾಗೂ ಆಶ್ರಯ ಕೊಡುವ ಕಾರ್ಯ ಮಾಡುತ್ತಿದೆ ಎಂದರು.

ಶಾಸಕರುಗಳಾದ ಶ್ರೀ ಜಿ.ಟಿ. ದೇವೇಗೌಡ, ಶ್ರೀ ಹೆಚ್.ಎಂ. ಗಣೇಶ್‌ಪ್ರಸಾದ್, ಶ್ರೀ ಕೆ. ಹರೀಶ್‌ಗೌಡ, ಶ್ರೀ ಟಿ.ಎಸ್. ಶ್ರೀವತ್ಸ, ಶ್ರೀ ಸಿ.ಎನ್. ಮಂಜೇಗೌಡ, ಮಾಜಿ ಶಾಸಕರಾದ ಶ್ರೀ ತೋಂಟದಾರ್ಯ, ಶ್ರೀ ಎಸ್. ಬಾಲರಾಜು, ಶ್ರೀ ಎಂ.ಕೆ. ಸೋಮಶೇಖರ್, ಶ್ರೀ ಸಿ.ಎಸ್. ನಿರಂಜನ್‌ಕುಮಾರ್, ಶ್ರೀ ಎಲ್. ನಾಗೇಂದ್ರ, ಟ್ರಸ್ಟ್‌ನ ಅಧ್ಯಕ್ಷರಾದ ಶ್ರೀ ಚಂದ್ರಶೇಖರ ಶೆಟ್ಟಿ ಉಪಸ್ಥಿತರಿದ್ದರು. ಶ್ರೀ ಸಿದ್ಧಲಿಗೇಶ್ವರಸ್ವಾಮಿ ಮಹಿಳಾ ಸಂಘದವರು ಪ್ರಾರ್ಥಿಸಿದರು. ಶ್ರೀ ಎಸ್.ಸಿ. ಅಶೋಕ್ ಸ್ವಾಗತಿಸಿದರು. ಶ್ರೀ ಕೆ. ಕಾಂತರಾಜು ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ಪ್ರದೀಪ್‌ಕುಮಾರ್ ವಂದಿಸಿದರು. ಶ್ರೀಮತಿ ಕವಿತಾ ಉಮೇಶ್ ಕಾರ್ಯಕ್ರಮ ನಿರೂಪಿಸಿದರು.

**ನಾಲ್ವಡಿ ಕೃಷ್ಣರಾಜ ಒಡೆಯರು ಎಲ್ಲ ಕ್ಷೇತ್ರಗಳ ಅಭಿವೃದ್ಧಿಯ ಹರಿಕಾರರು**

ಅಂದಿನ ಕಾಲದಲ್ಲಿಯೇ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ನೀರಾವರಿ, ಶಿಕ್ಷಣ, ಆರೋಗ್ಯ ಕ್ಷೇತ್ರಗಳ ಅಭಿವೃದ್ಧಿಯಂತಹ ಶಾಶ್ವತ ಕೆಲಸವನ್ನು ಮಾಡಿದ ಹರಿಕಾರರು ಎಂದು ಪರಮಪೂಜ್ಯ ಜಗದ್ಗುರುಗಳವರು ಜುಲೈ 7ರಂದು ಕೆ.ಆರ್. ನಗರ ಮತ್ತು ಸಾಲಿಗ್ರಾಮ ತಾಲ್ಲೂಕು ನಾಗರಿಕ ವೇದಿಕೆಯಿಂದ ಆಯೋಜಿಸಿದ್ದ ನಾಗರಿಕ ಪೌರ ಸನ್ಮಾನ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಯದುವಂಶದ ರಾಜರು ಯಾವುದೇ ಕ್ಷೇತ್ರದಲ್ಲಿಯೂ ರಾಜಕೀಯ ಮಾಡಲಿಲ್ಲ. ಅಣೆಕಟ್ಟುಗಳನ್ನು ಕಟ್ಟುವ ಮೂಲಕ ಕೃಷಿಗೆ ನೀರಾವರಿ ಸೌಲಭ್ಯವನ್ನು ಒದಗಿಸಿದರು. ಮಾಜಿ ಸಚಿವರಾದ ಶ್ರೀ ಸಾ.ರಾ. ಮಹೇಶ್ ಬಹಳ ಶಿಸ್ತಿನ ರಾಜಕಾರಣಿಯಾಗಿ ಜನಸೇವೆ ಮಾಡಿದವರು. ಶ್ರೀ ಯದುವೀರ್‌ರವರು ಆ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ ಎಂದು ಹೇಳಿದರು.

ಸಂಸದರಾದ ಶ್ರೀ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್‌ರವರು ನಮ್ಮ ಪೂರ್ವಿಕರು ಎಂದೂ ಯಾವುದೇ ತಾರತಮ್ಯ ಮಾಡದೇ ಜನಸೇವೆ ಮಾಡಿದರು. ಅದರಂತೆಯೇ ನಾನೂ ಕೇವಲ ನನ್ನ ಸಂಸದ ಕ್ಷೇತ್ರಕ್ಕೆ ಸೀಮಿತವಾಗದೆ ರಾಜ್ಯದ ಜನರ ಕಷ್ಟ ಸುಖಗಳಿಗೆ ಸ್ಪಂದಿಸುತ್ತೇನೆ. ಜೊತೆಗೆ ಜನರಿಗೆ ಸಿಗಬೇಕಾದ ಸವಲತ್ತುಗಳನ್ನು ಕೊಡಿಸುವ ಪ್ರಯತ್ನ ಮಾಡುತ್ತೇನೆ ಎಂದರು.

ಸಂಸದರಾದ ಶ್ರೀ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್‌ರವರಿಗೆ ಪೌರ ಸನ್ಮಾನ ಮತ್ತು ವೈದ್ಯಕೀಯ ಸ್ನಾತಕೋತ್ತರ ಪದವಿಯಲ್ಲಿ ಮೂರನೇ ರ್‍ಯಾಂಕ್ ಪಡೆದ ಡಾ. ಸಾ.ರಾ. ಧನುಷ್‌ರವರಿಗೆ ಅಭಿನಂದನೆ ಸಲ್ಲಿಸಲಾಯಿತು.

ವಿಧಾನಪರಿಷತ್ ಸದಸ್ಯರಾದ ಶ್ರೀ ಅಡಗೂರು ಹೆಚ್. ವಿಶ್ವನಾಥ್, ಶ್ರೀ ಮಂಜೇಗೌಡ, ಮುಖಂಡರಾದ ಶ್ರೀ ಮಿರ್ಲೆ ಶ್ರೀನಿವಾಸಗೌಡ, ಶ್ರೀ ಎ.ಎಸ್. ಚನ್ನಬಸಪ್ಪ ಮೊದಲಾದವರು ಉಪಸ್ಥಿತರಿದ್ದರು.

**ಗುರು–ಶಿಷ್ಯ ಸಂಬಂಧದ ಪವಿತ್ರ ಸಂಕೇತ ಗುರುಪೂರ್ಣಿಮೆ**

ಗುರು–ಶಿಷ್ಯರ ನಡುವಿನ ಪವಿತ್ರ ಸಂಬಂಧದ ಸಂಕೇತವಾಗಿ ಗುರುಪೂರ್ಣಿಮೆಯನ್ನು ಆಚರಿಸಲಾಗುತ್ತದೆ ಎಂದು ಮೈಸೂರು ಆಕಾಶವಾಣಿಯ ನಿವೃತ್ತ ಹಿರಿಯ ಉದ್ಘೋಷಕರಾದ ಶ್ರೀ ಪ್ರಭುಸ್ವಾಮಿ ಚ. ಮಳಿಮಠರವರು ಜುಲೈ 10ರಂದು ಮೈಸೂರು ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಶ್ರೀ ಸುತ್ತೂರು ಮಠದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಜರುಗಿದ ಗುರುಪೂರ್ಣಿಮೆ ಹಾಗೂ 281ನೇ ಬೆಳದಿಂಗಳ ಸಂಗೀತ ಕಾರ್ಯಕ್ರಮದಲ್ಲಿ ತಿಳಿಸಿದರು.

ಸಂಸ್ಕೃತದಲ್ಲಿ "ಗು" ಎಂದರೆ ಅಂಧಃಕಾರ ಅಥವಾ ಅಜ್ಞಾನ, "ರು" ಎಂದರೆ ಕಳೆಯುವ ಅಥವಾ ದೂರ ಮಾಡುವ ಎನ್ನುವ ಅರ್ಥವಿದೆ. ಹೀಗಾಗಿ ಗುರು ಅಂಧಃಕಾರ ಮತ್ತು ಅಜ್ಞಾನವನ್ನು ದೂರ ಮಾಡುವವನು. ಭಾರತೀಯ ಪಂಚಾಂಗದಲ್ಲಿ ಆಷಾಢ ಮಾಸದ ಹುಣ್ಣಿಮೆಯ ದಿನವನ್ನು ಗುರುಪೂರ್ಣಿಮೆ ಎಂದು ಆಚರಿಸುತ್ತೇವೆ. ಈ ದಿನದಂದು ಗುರುವಿನ ಪ್ರಭಾವ ಬೇರೆ ದಿನಗಳಿಗಿಂತ ಹೆಚ್ಚು ಪ್ರಭಾವಶಾಲಿಯಾಗಿರುತ್ತದೆ. ಭಾರತೀಯರು ಈ ದಿನದಂದು ಗುರುವಿಗೆ ಪೂಜೆಯನ್ನು ಸಲ್ಲಿಸುವ ಸಂಪ್ರದಾಯವಿದೆ. ಗುರುಪೂರ್ಣಿಮೆಗೆ ಧಾರ್ಮಿಕವಾಗಿ ಮತ್ತು ಶೈಕ್ಷಣಿಕವಾಗಿಯೂ ಪ್ರಾಮುಖ್ಯತೆ ಇದೆ. ಭಾರತೀಯ ಪರಂಪರೆಯಲ್ಲಿ ವೇದವ್ಯಾಸ ಮಹರ್ಷಿಗಳ ಜನ್ಮದಿನದ ಅಂಗವಾಗಿ ಗುರುಪೂರ್ಣಿಮೆಯನ್ನು ಆಚರಿಸಿದರೆ, ಬೌದ್ಧ ಧರ್ಮದಲ್ಲಿ ಬುದ್ಧರು ಪ್ರಥಮ ಧರ್ಮೋಪದೇಶ ನೀಡಿದ ಅಂಗವಾಗಿ ಇದನ್ನು ಆಚರಿಸಲಾಗುತ್ತಿದೆ. ಭಾರತೀಯ ಶಾಸ್ತ್ರೀಯ ಸಂಗೀತವು ಗುರು–ಶಿಷ್ಯ ಪರಂಪರೆಯನ್ನು ಪಾಲಿಸುವುದರಿಂದ ಸಂಗೀತ ಕಲಿಯುವ ವಿದ್ಯಾರ್ಥಿಗಳು ಈ ಹಬ್ಬವನ್ನು ವಿಶೇಷವಾಗಿ ಆಚರಿಸುತ್ತಾರೆ. ಗುರುಗಳಿಗೆ ವಂದಿಸಿ, ಆರಾಧಿಸಿ ಗೌರವಿಸುತ್ತಾರೆ. ಧರ್ಮ ಗ್ರಂಥಗಳಲ್ಲಿ ಗುರುವಿಗೆ ದೇವರಿಗಿಂತಲೂ

ಹೆಚ್ಚಿನ ಸ್ಥಾನವಿದೆ. ಗುರುವೇ ಸರ್ವಸ್ವ, ಗುರುವಿಗೆ ನಿಷ್ಠೆಯೇ ಅಂತಿಮ ಧರ್ಮ ಎಂದು ಧರ್ಮ ಗ್ರಂಥಗಳು ಹೇಳುತ್ತವೆ. ಕನಕದಾಸರು ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ ಎಂದು ಗುರುವಿನ ಸ್ಥಾನ ಮತ್ತು ಮಹತ್ವವನ್ನು ಹೇಳಿದ್ದಾರೆ ಎಂದು ತಿಳಿಸಿದರು.

ನಂತರ ಜರುಗಿದ 281ನೇ ಬೆಳದಿಂಗಳ ಸಂಗೀತ ಕಾರ್ಯಕ್ರಮದಲ್ಲಿ ವಿದ್ವಾನ್ ಸಂಪಗೋಡು ಎಸ್. ವಿಘ್ನರಾಜರವರು ಗಾಯನ ಪ್ರಸ್ತುತಿ ಪಡಿಸಿದರು. ವಯೊಲಿನ್‌ನಲ್ಲಿ ವಿದ್ವಾನ್ ಎಸ್. ಜನಾರ್ದನ್, ಮೃದಂಗದಲ್ಲಿ ವಿದ್ವಾನ್ ಅನಿರುದ್ಧ ಎಸ್. ಭಟ್ ಮತ್ತು ಘಟಂನಲ್ಲಿ ವಿದ್ವಾನ್ ಎಂ.ಆರ್. ಮಂಜುನಾಥ್‌ರವರುಗಳು ಸಾಥ್ ನೀಡಿದರು. ಪ್ರೊ. ಕೆ. ರಾಮಮೂರ್ತಿರಾವ್‌ರವರು ಕಾರ್ಯಕ್ರಮವನ್ನು ನಿರೂಪಿಸಿದರು.

**ಪ್ರಕೃತಿಯ ಸಮತೋಲನ ಬಹಳ ಮುಖ್ಯ**

ಮನುಷ್ಯನು ದೈಹಿಕ ಮತ್ತು ಮಾನಸಿಕವಾಗಿ ಆರೋಗ್ಯವಾಗಿ ಇರಬೇಕಾದರೆ, ಪ್ರಕೃತಿಯ ಸಮತೋಲನ ಬಹಳ ಮುಖ್ಯವಾಗಿರುತ್ತದೆ ಎಂದು ಪರಮಪೂಜ್ಯ ಜಗದ್ಗುರುಗಳವರು ಜುಲೈ 18ರಂದು ಸುತ್ತೂರು ಶ್ರೀಕ್ಷೇತ್ರದಲ್ಲಿ ಜೆಎಸ್‌ಎಸ್ ವಸತಿ ಶಾಲೆಯ ಇಕೊ ಕ್ಲಬ್ ವತಿಯಿಂದ ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ಸಹಯೋಗದಲ್ಲಿ ಏರ್ಪಡಿಸಲಾಗಿದ್ದ ಸೀಡ್ ಬಾಲ್ ವಿತರಣಾ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಶುದ್ಧವಾದ ಗಾಳಿ, ನೀರು, ಆಹಾರ ಸೇವಿಸಿದಾಗ ಮಾತ್ರ ಮನುಷ್ಯನು ಆರೋಗ್ಯದಿಂದ ಇರಲು ಸಾಧ್ಯ. ಪರಿಸರದಲ್ಲಿ ಅಸಮತೋಲನ ಉಂಟಾದರೆ, ಮನುಷ್ಯನ ಆರೋಗ್ಯ ಹದಗೆಟ್ಟು ಔಷಧಿಗಳನ್ನು ಆಶ್ರಯಿಸಬೇಕಾಗುತ್ತದೆ. ಔಷಧಿಗಳಿಲ್ಲದೆ ಬದುಕಬೇಕೆಂದರೆ ಪ್ರಕೃತಿಯನ್ನು ಗುರುವಾಗಿ ಭಾವಿಸಿ, ಪೋಷಿಸಿ ಬೆಳೆಸಿದರೆ, ಮಾನವನ ಜೀವನಕ್ಕೆ ಉತ್ತಮವಾದ ಭವಿಷ್ಯವಿರುತ್ತದೆ. ಪ್ರತಿಯೊಬ್ಬರೂ ಸಸಿಯನ್ನು ಗಿಡವನ್ನು ನೆಟ್ಟು ಪೋಷಿಸಿದರೆ ಅದು ದೇಶಕ್ಕೆ ನೀಡುವ ದೊಡ್ಡ ಕೊಡುಗೆ ಎಂದು ಹೇಳಿದರು.

ಶಾಸಕರು ಹಾಗೂ ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರರವರು ಇಂದಿನ ದಿನಗಳಲ್ಲಿ ಪರಿಸರವು ನಾಶವಾಗುತ್ತಿರುವುದರಿಂದ ಜಾಗತಿಕ ತಾಪಮಾನವು ಏರಿಕೆಯಾಗುತ್ತಿದೆ. ಇದರಿಂದ ಮಾನವ ಕುಲಕ್ಕೆ ಅನೇಕ ಸಮಸ್ಯೆಗಳು ಉಂಟಾಗುತ್ತಿದೆ. ದಿನನಿತ್ಯದ ಜೀವನದಲ್ಲಿ ಪ್ಲಾಸ್ಟಿಕ್ ಬಳಸುವುದನ್ನು ಕಡಿಮೆ ಮಾಡಬೇಕು. ಇದು ಪರಿಸರಕ್ಕೆ ಮಾರಕವಾಗಿ ಪ್ರಾಣಿ–ಪಕ್ಷಿಗಳ ಸಂತತಿ ನಶಿಸುತ್ತಿದೆ. ವಿದ್ಯಾರ್ಥಿಗಳು ಪರಿಸರ ಪ್ರಜ್ಞೆಯನ್ನು ಬೆಳೆಸಿಕೊಂಡು, ಪರಿಸರ ಸಂರಕ್ಷಣೆಯನ್ನು ಮಾಡುವಂತಹ ಪ್ರಜೆಗಳಾಗಬೇಕು. ಗಿಡಮರಗಳನ್ನು ಬೆಳೆಸಿ, ಪ್ರಕೃತಿ ಮಾತೆಯನ್ನು ಉಳಿಸಬೇಕಾದಂತಹ ಮಹತ್ತರ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಪರಿಸರ ದಿನಾಚರಣೆಯು ಒಂದೇ

ದಿನಕ್ಕೆ ಸೀಮಿತವಾಗದೆ ವರ್ಷವಿಡೀ ಗಿಡಗಳನ್ನು ನೆಡುವುದರ ಮೂಲಕ ಪ್ರಕೃತಿ ಮಾತೆಗೆ ಗೌರವವನ್ನು ಸೂಚಿಸಬೇಕು ಎಂದರು.

ಲೋಕಸಭಾ ಸದಸ್ಯರಾದ ಶ್ರೀ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ರವರು ಸುತ್ತೂರು ಶ್ರೀಮಠವು ಅಕ್ಷರ, ಆರೋಗ್ಯ, ಅನ್ನ ದಾಸೋಹದ ಜೊತೆಗೆ ಇಂತಹ ಪರಿಸರ ಸಂರಕ್ಷಣೆಯಂತಹ ಕಾರ್ಯಕ್ರಮವನ್ನು ಏರ್ಪಡಿಸುತ್ತಿರುವುದು ತುಂಬಾ ಸಂತೋಷದ ಸಂಗತಿ. ಗಿಡಗಳನ್ನು ನೆಡುವುದರಿಂದ ಪ್ರಕೃತಿ ವಿಕೋಪಗಳಿಂದ ಉಂಟಾಗುವಂತಹ ಅನಾಹುತಗಳನ್ನು ತಡೆಗಟ್ಟಬಹುದು. ಸುತ್ತೂರು ಶ್ರೀಮಠಕ್ಕೂ ಮೈಸೂರು ಅರಮನೆಗೂ ಅವಿನಾಭಾವ ಸಂಬಂಧವಿದೆ. ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರ ಜನುಮ ದಿನದಂದು ಏರ್ಪಡಿಸಿರುವ ಈ ಕಾರ್ಯಕ್ರಮದಲ್ಲಿ ಭಾಗವಹಿಸಿರುವುದು ನನ್ನ ಪುಣ್ಯ ಎಂದರು.

ಶಾಸಕರಾದ ಶ್ರೀ ಟಿ.ಎಸ್. ಶ್ರೀವತ್ಸರವರು, ಮನುಷ್ಯನು ತನ್ನ ಸ್ವಾರ್ಥಕ್ಕಾಗಿ ಪರಿಸರವನ್ನು ನಾಶಮಾಡುತ್ತಿದ್ದಾನೆ. ಅಭಿವೃದ್ಧಿಯ ಹೆಸರಿನಲ್ಲಿ ಕಾಡುಗಳನ್ನು ನಾಶ ಮಾಡುತ್ತಿರುವುದರಿಂದ ಅನೇಕ ಸಂಕಷ್ಟಗಳನ್ನು ಎದುರಿಸುತ್ತಿದ್ದಾನೆ. ಆದ್ದರಿಂದ ಪರಿಸರವನ್ನು ರಕ್ಷಣೆ ಮಾಡಿ ಸಂಕಷ್ಟದಿಂದ ಪಾರಾಗಬೇಕು. ಎಲ್ಲರೂ ಗಿಡಗಳನ್ನು ನೆಡಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಬೀದರ್ ಶಾಸಕರಾದ ಡಾ. ಶೈಲೇಂದ್ರ ಬೆಲ್ದಾಳೆಯವರು, ಮೈಸೂರು ಗ್ರಾಮಾಂತರ ಬಿಜೆಪಿಯ ಅಧ್ಯಕ್ಷರಾದ ಶ್ರೀ ಕುಂಬ್ರಳ್ಳಿ ಸುಬ್ಬಣ್ಣರವರು, ಜೆಎಸ್‌ಎಸ್ ಮಹಾವಿದ್ಯಾಪೀಠದ ಅಧಿಕಾರಿಗಳು, ಸುತ್ತೂರು ಜೆಎಸ್‌ಎಸ್ ಸಂಸ್ಥೆಗಳ ಆಡಳಿತಾಧಿಕಾರಿಗಳು, ಮುಖ್ಯಸ್ಥರುಗಳು, ನೌಕರ ವರ್ಗದವರು, ವಿದ್ಯಾರ್ಥಿಗಳು ಭಾಗವಹಿಸಿದ್ದರು. ವಕೀಲರು ಹಾಗೂ ಕಲಾವಿದರಾದ ಶ್ರೀಮತಿ ಮಾಳವಿಕಾ ಅವಿನಾಶ್‌ರವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಸಾಂಕೇತಿಕವಾಗಿ ಸೀಡ್ ಬಾಲ್‌ಗಳನ್ನು ವಿತರಿಸಲಾಯಿತು. ಶಾಲಾ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಶ್ರೀ ಜಿ. ಶಿವಸ್ವಾಮಿ ಸ್ವಾಗತಿಸಿದರು. ಕು. ಹೆಚ್.ಎಂ. ಸವಿತಾ ವಂದಿಸಿದರು. ಶ್ರೀ ಎಸ್. ಚಂದ್ರಮೌಳೇಶ್ವರ ಕಾರ್ಯಕ್ರಮ ನಿರೂಪಿಸಿದರು.

**ದಲೈಲಾಮಾರವರು ಅಪರೂಪದ ಶ್ರೇಷ್ಠ ಸಂತರು**

ಟಿಬೆಟಿಯನ್ನರ 14ನೇ ಧರ್ಮಗುರು ಶ್ರೀ ದಲೈಲಾಮಾರವರು ಅಪರೂಪದ ಶ್ರೇಷ್ಠ ಸಂತರು ಎಂದು ಪರಮಪೂಜ್ಯ ಜಗದ್ಗುರುಗಳವರು ಮೈಸೂರು ಕಲಾಮಂದಿರದಲ್ಲಿ ಜುಲೈ 19ರಂದು ಶ್ರೀ ದಲೈಲಾಮಾರವರ 90ನೇ ಜನ್ಮದಿನದ ಪ್ರಯುಕ್ತ ಆಯೋಜಿಸಿದ್ದ ಟಿಬೆಟ್ ಉತ್ಸವದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಶ್ರೀ ದಲೈ ಲಾಮಾರವರು ಬೌದ್ಧ ಧರ್ಮದ ಮಾರ್ಗದರ್ಶಕರಾಗಿ ಜಗತ್ತಿನಾದ್ಯಂತ ಮಾನವೀಯತೆ,

ಅನುಕಂಪ, ಸೌಹಾರ್ದತೆ, ಕ್ಷಮಾ ಗುಣಗಳನ್ನು ಬಿತ್ತುತ್ತಿರುವ ಶಾಂತಿಧೂತರು. ಅವರ ಶಾಂತಿ ಸಂದೇಶಕ್ಕೆ ನೊಬೆಲ್ ಪ್ರಶಸ್ತಿ ಒಲಿದು ಬಂದಿದೆ. ಪ್ರಶಸ್ತಿಗಳು ಬಂದ ಕಾರಣದಿಂದ ಶ್ರೀ ದಲೈಲಾಮಾರವರು ದೊಡ್ಡವರಾಗಿಲ್ಲ. ಅವರಿಗೆ ಕೊಟ್ಟ ಕಾರಣದಿಂದ ಪ್ರಶಸ್ತಿಗಳ ಗೌರವ ಹೆಚ್ಚಾಗಿದೆ ಎಂದು ಹೇಳಿದರು.

ಗೃಹ ಸಚಿವರಾದ ಡಾ. ಜಿ. ಪರಮೇಶ್ವರ್‌ರವರು ಶ್ರೀ ದಲೈಲಾಮಾರವರು ಜಾತಿ, ಧರ್ಮ, ಭೇದಭಾವವನ್ನು ಮೆಟ್ಟಿ ನಿಂತು ಜಗತ್ತಿಗೆ ಶಾಂತಿಯ ಸಂದೇಶ ಸಾರಿದವರು. ಅವರನ್ನು ವಿಶ್ವವೇ ಮೆಚ್ಚಿದೆ. ಇಂದು ರಾಷ್ಟ್ರ–ರಾಷ್ಟ್ರಗಳ ನಡುವೆ ಭಿನ್ನಮತ ಹೆಚ್ಚಾಗುತ್ತಿದೆ. ಅದು ಹಿಂಸೆಯ ಮಾರ್ಗವನ್ನು ಹಿಡಿಯುತ್ತಿದೆ. ಆದರೆ 2,500 ವರ್ಷಗಳ ಹಿಂದೆಯೇ ಶಾಂತಿ ಸಂದೇಶ ಸಾರಿದ ಬುದ್ಧನ ಬೋಧನೆಗಳು ಇಂದಿಗೂ ಪ್ರಸ್ತುತವಾಗಿವೆ ಎಂದರು.

ಟಿಬೆಟ್ ಧರ್ಮಗುರುಗಳಾದ ಶ್ರೀ ಗೆಶೆ ಲಕ್ಪೋರ್, ಶ್ರೀ ನಾಜಿನ್ ತುಲ್ಕು, ಶ್ರೀ ಚೊಫೇಲ್ ತುಪ್ಟೆನ್, ಶ್ರೀ ಥುಪ್ಟೆನ್ ತ್ಸೆರಿಂಗ್, ಶ್ರೀ ಗೆಲೆಕ್ ಜಂಗ್ನಿ, ಶ್ರೀ ಚೈಮ್ ಡೋರ್ಜಿ, ಐಜಿಪಿ ಶ್ರೀ ಬೋರಲಿಂಗಯ್ಯ, ಮಾಜಿ ಶಾಸಕರಾದ ಶ್ರೀ ವೇಣುಗೋಪಾಲ್ ಉಪಸ್ಥಿತರಿದ್ದರು.

**ಸಹನೆ, ತಾಳ್ಮೆ, ನೈತಿಕತೆಯಿಂದ ಮಾತ್ರ ಯಶಸ್ಸು ಸಾಧ್ಯ**

ಯಾವುದೇ ಸಂಘ–ಸಂಸ್ಥೆಯಲ್ಲಿ ಸಹನೆ, ತಾಳ್ಮೆ, ಸಹಬಾಳ್ವೆ, ನೈತಿಕತೆ ಇದ್ದರೆ ಮಾತ್ರ ಅದು ಯಶಸ್ವಿಯಾಗಿ ಅಭಿವೃದ್ಧಿ ಹೊಂದಲು ಸಾಧ್ಯ ಎಂದು ಪರಮಪೂಜ್ಯ ಜಗದ್ಗುರುಗಳವರು ಜುಲೈ 20ರಂದು ಚಾಮರಾಜನಗರದ ಶ್ರೀ ಸಿದ್ದಮಲ್ಲೇಶ್ವರ ವಿರಕ್ತಮಠದ ಅನುಭವಮಂಟಪದಲ್ಲಿ ಜಿಲ್ಲಾ ವೀರಶೈವ ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘದ ರಜತಮಹೋತ್ಸವ ಸಮಾರೋಪ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಈ ದೇಶ ಭವ್ಯ ಪರಂಪರೆ ಹೊಂದಿದ ನೆಲವಾಗಿದೆ. ಅನೇಕ ಮಹಾಪುರುಷರು ಇಲ್ಲಿ ನೆಲೆಸಿ ಸುಸಂಸ್ಕೃತಿಯನ್ನು ಬಿತ್ತಿ ಬೆಳೆದಿದ್ದಾರೆ. ಇಂತಹ ನೆಲದಲ್ಲೂ ಕೂಡ ಕೆಲ ಅಹಿತಕರ ಘಟನೆಗಳು ನಡೆಯುತ್ತಿವೆ. ಈ ಬಗ್ಗೆ ಜಾಗೃತಿ ಮೂಡಿಸುವಂತಹ ಕೆಲಸಗಳಾಗಬೇಕು. ದೇಶದ ಏಕತೆಯ ಬಗ್ಗೆ ಚಿಂತಿಸಿ ಭವ್ಯ ಸಂಸ್ಕೃತಿಯನ್ನು ಶ್ರೀಮಂತಗೊಳಿಸಬೇಕು. ಯಾವುದೇ ಸಂಘಟನೆ ಇರಲಿ, ಅಲ್ಲಿ ಜವಾಬ್ದಾರಿ ಹೊತ್ತವರು ನಿಸ್ವಾರ್ಥ ಮನೋಭಾವನೆಯಿಂದ ಒಳ್ಳೆಯ ಕೆಲಸಗಳನ್ನು ಮಾಡಬೇಕು. ಆಗ ಮಾತ್ರ ಸಂಘ ಬೆಳೆಯಲು ಸಾಧ್ಯ. ಸಾರ್ವಜನಿಕ ಕ್ಷೇತ್ರದಲ್ಲಿ ಒಗ್ಗೂಡಿ ಕೆಲಸ ಮಾಡಬೇಕು. ಕಳೆದ ಇಪ್ಪತ್ತೈದು ವರ್ಷಗಳಿಂದ ಸಮಾಜದಲ್ಲಿ ಜಾಗೃತಿ ಮೂಡಿಸುವಂತಹ ಮೌಲ್ಯಯುತ ಕಾರ್ಯಕ್ರಮಗಳನ್ನು ಮಾಡಿಕೊಂಡು ಬಂದಿರುವುದು ಶ್ಲಾಘನೀಯವಾದುದು. ಮಾನವ ಜನ್ಮ ಶಾಶ್ವತವಲ್ಲ, ಸಂಘ ಶಾಶ್ವತ

ಎಂದು ತಿಳಿದು ಮುಂದೆ ಬರುವವರು ಒಳ್ಳೆಯ ಕಾರ್ಯಗಳನ್ನು ಮುಂದುವರಿಸಿಕೊಂಡು ಹೋಗಬೇಕು. ಸಂಘದ ಸುವರ್ಣ ಮಹೋತ್ಸವ ಆಚರಣೆ ಇತರ ಸಂಘಗಳಿಗೆ ಮಾದರಿಯಾಗಿರಲಿ ಎಂದು ಹೇಳಿದರು.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಸ್. ಷಡಕ್ಷರಿಯವರು ಸಂಘದಲ್ಲಿ ಭರವಸೆ, ಬೆಳಕು ಮೂಡಿಸುವ ಕೆಲಸ ಮಾಡಬೇಕು. ಈ ನಿಟ್ಟಿನಲ್ಲಿ ಜಿಲ್ಲಾ ವೀರಶೈವ ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘ ಮುನ್ನಡೆಯುತ್ತಿರುವುದು ಹೆಮ್ಮೆಯ ಸಂಗತಿ. ವೀರಶೈವ-ಲಿಂಗಾಯತರು ಭೇದಭಾವಗಳನ್ನು ಮರೆತು ಎಲ್ಲರು ಒಟ್ಟಾಗಿ ಹೋಗುವಂತಾಗಬೇಕು. ಆಗ ಮಾತ್ರ ಸಮಾಜ ಉಳಿಯಲು ಸಾಧ್ಯ. ಈ ನಿಟ್ಟಿನಲ್ಲಿ ಮಠ ಮಾನ್ಯಗಳು ಮಾರ್ಗದರ್ಶನ ನೀಡುತ್ತಿದ್ದು, ಅವುಗಳ ಮಾರ್ಗದರ್ಶನದಲ್ಲಿ ಮುನ್ನಡೆಯಬೇಕು. ಸಮಾಜದಲ್ಲಿ ಮಠಗಳು ಇಲ್ಲದಿದ್ದರೆ ಸಮುದಾಯ ಬಹಳ ಕಷ್ಟಪಡಬೇಕಿತ್ತು. ಅಕ್ಷರ, ಜ್ಞಾನ, ಅನ್ನ ದಾಸೋಹದ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗುತ್ತಿರುವ ಸುತ್ತೂರು, ಸಿದ್ಧಗಂಗಾ ಮಠಗಳು ಸೇರಿದಂತೆ ಅನೇಕ ಮಠಗಳು ಸಮಾಜದ ಏಳಿಗೆಗೆ ಶ್ರಮಿಸುತ್ತಿವೆ ಎಂದರು.

ಮರಿಯಾಲದ ಶ್ರೀ ಇಮ್ಮಡಿ ಮುರುಘರಾಜೇಂದ್ರ ಸ್ವಾಮಿಗಳು, ಚಾಮರಾಜನಗರದ ಶ್ರೀ ಚನ್ನಬಸವ ಸ್ವಾಮಿಗಳು, ಶಾಸಕರಾದ ಶ್ರೀ ಎಚ್.ಎಂ. ಗಣೇಶ್‌ಪ್ರಸಾದ್, ಕಾಡಾ ಅಧ್ಯಕ್ಷರಾದ ಶ್ರೀ ಪಿ. ಮರಿಸ್ವಾಮಿ, ಸಂಘದ ರಾಜ್ಯಾಧ್ಯಕ್ಷರಾದ ಶ್ರೀ ಸೋಮಶೇಖರಯ್ಯ, ಜಿಲ್ಲಾಧ್ಯಕ್ಷರಾದ ಶ್ರೀ ಸಿದ್ದಮಲ್ಲಪ್ಪ, ಶ್ರೀ ಎಂ. ಗೌರಿಶಂಕರ, ಶ್ರೀ ಬಿ.ಎಲ್. ಮುದ್ದುಬಸವಣ್ಣ ಉಪಸ್ಥಿತರಿದ್ದರು. ಶ್ರೀ ಎಸ್. ಪರಶಿವಮೂರ್ತಿ ಪ್ರಾರ್ಥಿಸಿದರು. ಶ್ರೀ ಎನ್. ಮಹದೇವಸ್ವಾಮಿ ಸ್ವಾಗತಿಸಿದರು. ಶ್ರೀ ಪಿ. ಬಸಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ಕೆ.ಎಸ್. ಮಹದೇವಸ್ವಾಮಿ ವಂದಿಸಿದರು. ಶ್ರೀ ಬಿ. ಅರ್ಕಪ್ಪ ಮತ್ತು ಶ್ರೀಮತಿ ಕೆ.ಬಿ. ಜ್ಯೋತಿ ಕಾರ್ಯಕ್ರಮ ನಿರೂಪಿಸಿದರು.

**ಮಠಮಾನ್ಯಗಳು ಸಂಸ್ಕೃತಿ ಹಾಗೂ ಸಂಸ್ಕಾರ ಬೆಳೆಸುತ್ತಿವೆ**

ಮಠಮಾನ್ಯಗಳು ಸಂಸ್ಕೃತಿ ಹಾಗೂ ಸಂಸ್ಕಾರ ಬೆಳೆಸುತ್ತಿವೆ ಎಂದು ಮೈಸೂರಿನ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರಾದ ಶ್ರೀ ಬಿ. ರಂಗೇಗೌಡರವರು ಸುತ್ತೂರು ಶ್ರೀಮಠದಲ್ಲಿ ಜುಲೈ 24ರಂದು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಲಕ್ಕಣ್ಣ ದಂಡೇಶನ ಶಿವತತ್ತ್ವ ಚಿಂತಾಮಣಿ ಕುರಿತ ಪ್ರವಚನ ಉದ್ಘಾಟನೆ ಕಾರ್ಯಕ್ರಮದಲ್ಲಿ ಮಾತನಾಡುತ್ತಾ ತಿಳಿಸಿದರು. ಹನ್ನೆರಡನೇ ಶತಮಾನದಲ್ಲಿ ಬಸವಣ್ಣನವರು ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಕ್ರಾಂತಿಯನ್ನೇ ಮಾಡಿದರು. ಧಾರ್ಮಿಕ, ಆಧ್ಯಾತ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಸುಧಾರಣೆ ತರುವಲ್ಲಿ ಮಹತ್ವದ ಪಾತ್ರ ವಹಿಸಿದರು. ಆಧುನಿಕತೆಯ ಸೋಗಿನಲ್ಲಿ ಮೊಬೈಲ್ ಗೀಳಿನಿಂದ ಭಜನೆ, ಪ್ರವಚನ ಹಾಗೂ ಧಾರ್ಮಿಕ

ಕಾರ್ಯಕ್ರಮಗಳು ಕಡಿಮೆಯಾಗುತ್ತಿದ್ದು, ಸುತ್ತೂರು ಮಠವು ಸೇರಿದಂತೆ ನಾಡಿನ ಮಠಮಾನ್ಯಗಳು ಅನೇಕ ಧಾರ್ಮಿಕ ಕಾರ್ಯಕ್ರಮಗಳನ್ನು ಆಯೋಜನೆ ಮಾಡುವುದರ ಮೂಲಕ ನಿರಂತರವಾಗಿ ಸಮಾಜದ ಉನ್ನತಿಗಾಗಿ ಶ್ರಮಿಸುತ್ತಿವೆ ಎಂದು ಹೇಳಿದರು.

ಮೈಸೂರಿನ ಉಪವಿಭಾಗಾಧಿಕಾರಿಗಳವರಾದ ಶ್ರೀ ಆಶಪ್ಪನವರು ಇಂದಿನ ದಿನಗಳಲ್ಲಿ ಮಾನವೀಯ ಮೌಲ್ಯಗಳು ಕಣ್ಮರೆಯಾಗುತ್ತಿದ್ದು, ಶಿಕ್ಷಣದ ಜೊತೆಗೆ ಸಂಸ್ಕಾರವೂ ಅವಶ್ಯಕವಾಗಿರುತ್ತದೆ. ಈ ನಿಟ್ಟಿನಲ್ಲಿ ಸಮಾಜದಲ್ಲಿ ಮೌಲ್ಯಗಳನ್ನು ಮಠಗಳು ನಿರಂತರವಾಗಿ ನೀಡುತ್ತಿವೆ. ಧಾರ್ಮಿಕ ಆಚರಣೆಗಳ ಮೂಲಕ ಜನರಲ್ಲಿ ಪರಸ್ಪರ ಸಹಕಾರ, ಸಹಬಾಳ್ವೆ ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ ಎಂದು ತಿಳಿಸಿದರು.

ಮುಡುಕುತೊರೆಯ ಶ್ರೀ ಕಲ್ಮಠದ ಶ್ರೀ ನಂದಿಕೇಶ್ವರ ಸ್ವಾಮಿಗಳವರು ಮಾಸಗಳಲ್ಲಿ ಶ್ರೇಷ್ಠವಾದದು ಶ್ರಾವಣಮಾಸ, ಪ್ರಾಚೀನ ಕಾಲದಲ್ಲಿ ಶಿಷ್ಯರು ತಾವು ಹಿಂದೆ ಕಲಿತ ವಿದ್ಯೆಯನ್ನು ಶ್ರಾವಣ ಮಾಸದಲ್ಲಿ ಗುರುವಿಗೆ ಒಪ್ಪಿಸುತ್ತಿದ್ದರು. ಹೊಸ ವೇದ ಪಾಠಗಳನ್ನು ಕಲಿಯುತ್ತಿದ್ದರು. ಪ್ರವಚನಗಳನ್ನು ಶ್ರವಣ ಮಾಡುವುದರಿಂದ ಮಾನವನು ಲೌಕಿಕ ಜಂಜಾಟದಿಂದ ಪಾರಾಗಬಹುದು ಎಂದು ನುಡಿದರು.

ಲಕ್ಕಣ್ಣ ದಂಡೇಶ ವಿರಚಿತ 'ಶಿವತತ್ತ್ವ ಚಿಂತಾಮಣಿ' ಕೃತಿಯ ಪ್ರವಚನವನ್ನು ಜೆಎಸ್‌ಎಸ್ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದ ಪ್ರೊ. ಎಚ್.ಬಿ. ದೇವಣ್ಣನವರು ನಡೆಸಿಕೊಟ್ಟರು. ನಿವೃತ್ತ ದೈಹಿಕ ಶಿಕ್ಷಣ ಶಿಕ್ಷಕರಾದ ಶ್ರೀ ಡಿ.ಎಸ್. ಸಿದ್ಧಲಿಂಗಸ್ವಾಮಿಯವರು ಕಾವ್ಯವಾಚನ ಮಾಡಿದರು. ಕಾರ್ಯಕ್ರಮದಲ್ಲಿ ಗುರುಕುಲದ ಸಾಧಕರು, ಜೆಎಸ್‌ಎಸ್ ಸಂಸ್ಥೆಗಳ ಅಧಿಕಾರಿ ವರ್ಗದವರು ಹಾಗೂ ಗ್ರಾಮಸ್ಥರುಗಳು, ಸುತ್ತಮುತ್ತಲ ಭಕ್ತರು ಭಾಗವಹಿಸಿದ್ದರು. ಶಾಲಾ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಶಿಕ್ಷಕರಾದ ಶ್ರೀಮತಿ ಬಿ. ವೇದಾವತಿ ಸ್ವಾಗತಿಸಿದರು. ಶ್ರೀಮತಿ ಜಿ. ನಂದಿನಿ ವಂದಿಸಿದರು. ಶ್ರೀ ಜಿ. ಶಿವಸ್ವಾಮಿ ಕಾರ್ಯಕ್ರಮ ನಿರೂಪಿಸಿದರು.

## ಎಲ್ಲ ಬಗೆಯ ಸಾಹಿತ್ಯಕ್ಕೂ ಓದುಗ ಪಡೆ ಇದ್ದೇ ಇರುತ್ತದೆ

ಎಲ್ಲ ಬಗೆಯ ಸಾಹಿತ್ಯಕ್ಕೂ ಓದುಗ ಪಡೆ ಇದ್ದೇ ಇರುತ್ತದೆ ಎಂದು ಪರಮಪೂಜ್ಯ ಜಗದ್ಗುರುಗಳವರು ಜುಲೈ 25ರಂದು ಮೈಸೂರಿನ ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯದಲ್ಲಿ ಪತ್ರಕರ್ತರಾದ ಶ್ರೀ ಐತಿಚಂಡ ರಮೇಶ್ ಉತ್ತಪ್ಪನವರ ಮೂರು ಕೃತಿಗಳ ಬಿಡುಗಡೆ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಸೇನಾನಿಯಾಗುವ ಆಕಾಂಕ್ಷೆ ಹೊಂದಿದ್ದ ರಮೇಶ್ ಉತ್ತಪ್ಪನವರು ಸಾಹಿತ್ಯ ರಚನೆಯ ಕೆಲಸ ಮಾಡಿದ್ದಾರೆ. ಗನ್ ಹಿಡಿಯಬೇಕಾಗಿದ್ದವರು ಪೆನ್ನು ಹಿಡಿದಿದ್ದಾರೆ. ಮೂರೂ ಕೃತಿಗಳ ವಿಷಯದ ಆಯ್ಕೆ ವಿಭಿನ್ನವಾಗಿದೆ. ಸಿಂಧೂರ ಪುಸ್ತಕದಲ್ಲಿರುವ ವೀರಯೋಧರ ಯಶೋಗಾಥೆಗಳು ಯುವಜನತೆಗೆ ಪ್ರೇರಣೆಯಾಗಿವೆ. ಗಲ್ಲಿ, ರಸ್ತೆಗಳ ಮಹತ್ವದ ಕುರಿತು ಬರೆದಿರುವುದು

ಉತ್ತಮ ಪ್ರಯೋಗವಾಗಿದೆ. ಗ್ರಾಮ, ವೃತ್ತ, ರಸ್ತೆ ಮತ್ತು ಗಲ್ಲಿಗಳಿಗೆ ಒಂದೊಂದು ಇತಿಹಾಸವಿರುತ್ತದೆ. ಈ ವಿಶೇಷತೆಯನ್ನು ಗುರುತಿಸುವ ಕೆಲಸವಾಗಬೇಕಿದೆ. ಈ ನಿಟ್ಟಿನಲ್ಲಿ ಪುಸ್ತಕ ರಚನೆ ಮಹತ್ವದ್ದಾಗಿದೆ ಎಂದು ಹೇಳಿದರು.

ಕರ್ನಾಟಕ ಪೊಲೀಸ್ ಅಕಾಡೆಮಿಯ ಸಹಾಯಕ ನಿರ್ದೇಶಕರಾದ ಶ್ರೀ ಸಂದೇಶ್‌ಕುಮಾರ್‌ರವರು ಯುವಜನರು ಓದಿನಿಂದ ವಿಮುಖವಾಗುತ್ತಿರುವ ಈ ಹೊತ್ತಿನಲ್ಲಿ ಇಂತಹ ಪುಸ್ತಕಗಳ ರಚನೆ ಔಚಿತ್ಯಪೂರ್ಣವಾಗಿವೆ. ಮುಂದಿನ ಪೀಳಿಗೆಗೆ ಪುಸ್ತಕಗಳನ್ನು ಕಾಪಿಡಬೇಕು ಎಂದರು.

ಶಾಸಕರಾದ ಶ್ರೀ ಟಿ.ಎಸ್. ಶ್ರೀವತ್ಸ, ಕುಲಪತಿಗಳಾದ ಪ್ರೊ. ನಾಗೇಶ್ ವಿ. ಬೆಟ್ಟಕೋಟೆ, ಲೆ.ಕ. ಶ್ರೀ ಪಿ.ಎಸ್. ಗಣಪತಿ, ಶ್ರೀ ಎ.ಪಿ. ನಾಗೇಶ್, ಶ್ರೀ ಐತಿಚಂಡ ರಮೇಶ್ ಉತ್ತಪ್ಪ, ಶ್ರೀ ಪ್ರಕಾಶ್ ಚಿಕ್ಕಪಾಳ್ಯ ಮೊದಲಾದವರು ಉಪಸ್ಥಿತರಿದ್ದರು.

**ಸದೃಢ ಸಮಾಜಕ್ಕೆ ಆರೋಗ್ಯವಂತ ವ್ಯಕ್ತಿಗಳ ಅಗತ್ಯವಿದೆ**

ಸದೃಢ ಸಮಾಜಕ್ಕೆ ಆರೋಗ್ಯವಂತ ವ್ಯಕ್ತಿಗಳ ಅಗತ್ಯವಿದೆ ಎಂದು ಪರಮಪೂಜ್ಯ ಜಗದ್ಗುರುಗಳವರು ಜುಲೈ 25ರಂದು ಗುಂಡ್ಲುಪೇಟೆಯ ಜೆಎಸ್‌ಎಸ್ ಅನುಭವ ಮಂಟಪದಲ್ಲಿ ಆಯೋಜಿಸಿದ್ದ 21ನೇ ಮದ್ಯವರ್ಜನ ಶಿಬಿರದ ಸಮಾರೋಪದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಯುವಜನರು ದುಶ್ಚಟಗಳಿಗೆ ಬಲಿಯಾಗು ತ್ತಿರುವುದು ವಿಷಾದನೀಯ ಸಂಗತಿ. ದುಶ್ಚಟಗಳಿಗೆ ಒಳಗಾಗುವವರು ವೈಯಕ್ತಿಕ ಗೌರವದ ಜೊತೆಗೆ ಕುಟುಂಬದ ಗೌರವವನ್ನು ಹಾಳು ಮಾಡುತ್ತಿದ್ದಾರೆ. ದುಶ್ಚಟಗಳಿಂದ ದೂರವಿರ ಬೇಕು. ಇಂತಹ ಶಿಬಿರಗಳನ್ನು ಏರ್ಪಡಿಸುತ್ತಿರುವುದರಿಂದ ಶೇ. 30ರಿಂದ 40ರಷ್ಟು ಸುಧಾರಣೆ ಸಾಧ್ಯವಾಗಿದೆ. ಸಾಕಷ್ಟು ಜನ ಮದ್ಯಪಾನದಂತಹ ದುಶ್ಚಟಗಳಿಂದ ಹೊರಬಂದು ಕುಟುಂಬದವರೊಂದಿಗೆ ಉತ್ತಮ ಜೀವನ ನಡೆಸುತ್ತಿದ್ದಾರೆ ಎಂದು ಹೇಳಿದರು.

ಶಾಸಕರಾದ ಶ್ರೀ ಹೆಚ್.ಎಂ. ಗಣೇಶ್‌ಪ್ರಸಾದ್‌ರವರು ಹಾಲಹಳ್ಳಿಯ ಸಂಗಮ ಪ್ರತಿಷ್ಠಾನವು ಸಮಾಜಮುಖಿ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿದೆ. ಜೆಎಸ್‌ಎಸ್ ಸಂಸ್ಥೆ ಆಯೋಜಿಸುವ ಮದ್ಯವರ್ಜನ ಶಿಬಿರಕ್ಕೆ ನೆರವಾಗುವ ಮೂಲಕ ಉತ್ತಮ ಸಮಾಜ ನಿರ್ಮಾಣಕ್ಕೆ ಸಹಕಾರ ನೀಡುತ್ತಿದೆ. ಈ ಬಗ್ಗೆ ಸಮಾಜ ಸಹ ಕಾಳಜಿ ತೋರಿಸಬೇಕು ಎಂದರು.

ಪರಂಪರೆ ಸಂಸ್ಥೆಯ ಮುಖ್ಯಸ್ಥರಾದ ಶ್ರೀ ಪಿ. ಕೃಷ್ಣಕುಮಾರ್‌ರವರು ಕುಡಿತಕ್ಕೆ ನಾನಾ ನೆಪಗಳಿರುತ್ತವೆ. ನಾನು 41 ವರ್ಷದ ಹಿಂದೆಯೇ ವ್ಯಸನಮುಕ್ತನಾಗಿದ್ದೇನೆ. ಪ್ರತಿ ವ್ಯಸನಿಯೂ ಆತ್ಮಾವಲೋಕನ ಮಾಡಿಕೊಳ್ಳುವ ಮೂಲಕ ವ್ಯಸನಗಳಿಂದ ದೂರವಿರಬೇಕು. ಕುಡಿತದಿಂದ ದೂರವಿದ್ದ ಪ್ರತಿವರ್ಷವೂ ಅವರ ಹುಟ್ಟುಹಬ್ಬವಿದ್ದಂತೆ ಎಂದು ಹೇಳಿದರು.

ಚಿಕ್ಕತುಪ್ಪೂರು ಶ್ರೀಗಳು, ಮಾಜಿ ಶಾಸಕರಾದ ಶ್ರೀ ಸಿ.ಎಸ್. ನಿರಂಜನ್‌ಕುಮಾರ್, ನಗರಸಭೆ ಅಧ್ಯಕ್ಷರಾದ ಶ್ರೀ ಜಿ.ಎನ್. ಮಧುಸೂದನ್, ಶ್ರೀ ಹೆಚ್.ಎಸ್. ನಂಜಪ್ಪ ಉಪಸ್ಥಿತರಿದ್ದರು. ಶ್ರೀ ಬಂಗಾರ ನಾಯಕ ಪ್ರಾರ್ಥಿಸಿದರು. ಶ್ರೀ ಹೆಚ್.ಎಸ್. ರಾಜಶೇಖರಪ್ಪ ಸ್ವಾಗತಿಸಿದರು. ಶ್ರೀ ಎಸ್. ಬಸವರಾಜು ವರದಿ ಮಂಡಿಸಿದರು. ಶಿಬಿರಾರ್ಥಿಗಳಾದ ಶ್ರೀ ಪೂರ್ಣಕ್ರಾಂತಿ, ಶ್ರೀ ಹೆಚ್.ಪಿ. ರಘು, ಶ್ರೀ ತ್ರಿಶಂಕಕುಮಾರ್, ಶ್ರೀ ನಂದಕುಮಾರ್‌ರವರುಗಳು ಅನಿಸಿಕೆ ಹಂಚಿಕೊಂಡರು. ಶ್ರೀ ಎಂ.ಸಿ. ಮಂಜುನಾಥ್ ವಂದಿಸಿದರು. ಡಾ. ಎಂ.ಪಿ. ಸೋಮಶೇಖರ್ ಕಾರ್ಯಕ್ರಮ ನಿರೂಪಿಸಿದರು.

**ಯುವಜನರ ಮನಸ್ಸುಗಳು ಆಂತರಿಕವಾಗಿ ವಿಕಸನಗೊಳ್ಳಬೇಕು**

ಯುವಜನರು ಕೇವಲ ಬಹಿರಂಗದ ಆಕರ್ಷಣೆಗಳಿಗೆ ಒಳಗಾಗದೆ ಆಂತರಿಕವಾಗಿ ಬುದ್ಧಿ ಮತ್ತು ಮನಸ್ಸನ್ನು ವಿಕಸನಗೊಳಿಸಿಕೊಳ್ಳಬೇಕು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ. ಎಂ.ಡಿ. ಸುದರ್ಶನ್‌ರವರು ಜುಲೈ 25ರಂದು ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಶ್ರಾವಣ ಮಾಸದ ಪೂಜಾನುಷ್ಠಾನ ಮತ್ತು ಲಕ್ಕಣ್ಣ ದಂಡೇಶನ ಶಿವತತ್ತ್ವ ಚಿಂತಾಮಣಿ ಕುರಿತ ಪ್ರವಚನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಾ ತಿಳಿಸಿದರು. ಇಂದಿನ ಯುವಜನರು ಬಾಹ್ಯಜೀವನದ ರೋಮಾಂಚನಕ್ಕೆ ಒಳಗಾಗುತ್ತಿದ್ದಾರೆ. ಇಂತಹ ಭ್ರಮಾಲೋಕದಿಂದ ಅವರು ಹೊರಬರಬೇಕು. ಮಹನೀಯರ ಪ್ರತಿಮೆಗಳನ್ನು ಸ್ಥಾಪಿಸುವಲ್ಲಿ ತೋರಿಸುವ ಉತ್ಸಾಹದಂತೆಯೇ ಅವರ ವಿಚಾರಧಾರೆಗಳನ್ನು ಮನಸ್ಸಿನಲ್ಲಿ ಸ್ಥಾಪಿಸಿಕೊಂಡು ಜೀವನದಲ್ಲಿ ಪಾಲಿಸಬೇಕಾದ ಅಗತ್ಯತೆ ಇದೆ. ಇಂದು ಜನರು ಬಿಜ್ಜಳನ ಆಸ್ಥಾನದಲ್ಲಿದ್ದ ರಾಜ ಪೋಷಾಕಿನ ಕುದುರೆಯ ಮೇಲಿರುವ ಬಸವಣ್ಣನವರನ್ನು ವೈಭವೋಪೇತವಾಗಿ ಕಾಣುವ ಬದಲು ಆಧ್ಯಾತ್ಮಿಕ ಮೇರುವಾದ ವಚನಗಳನ್ನು ರಚಿಸಿದ ಬಸವಣ್ಣನವರನ್ನು ಆರಾಧಿಸುವ ಕಡೆ ಗಮನ ಹರಿಸಬೇಕು. ಖಡ್ಗಕ್ಕಿಂತ ಲೇಖನಿ ಹರಿತ ಎಂಬಂತೆ ಬಸವಣ್ಣನವರು ಖಡ್ಗವನ್ನು ತ್ಯಜಿಸಿ ಲೇಖನಿಯನ್ನು ಹಿಡಿದು ವಚನಗಳನ್ನು ರಚಿಸಿದರು. ಅದರ ಮೂಲಕ ಅವರು ಸಮಾಜವನ್ನು ತಿದ್ದುವ ಕಾರ್ಯವನ್ನು ಮಾಡಿದರು. ಬಸವಾದಿ ಶರಣರು ಅನುಭವ ಮಂಟಪದಲ್ಲಿ ಆರಂಭಿಸಿದ ದಾರಿಯಲ್ಲಿ ಎಲ್ಲರೂ ಸಾಗಬೇಕು. ಅವರ ಅತ್ಯುತ್ತಮ ಆಲೋಚನೆಗಳನ್ನು ಎಲ್ಲರೂ ಆತ್ಮವಿಮರ್ಶೆಗೆ ಒಳಪಡಿಸಿಕೊಂಡು ಬದುಕಿನಲ್ಲಿ ದೃಢ ನಿರ್ಧಾರಗಳನ್ನು ಕೈಗೊಳ್ಳಬೇಕು. ಕನ್ನಡ ನಾಡಿನ ಚರಿತ್ರೆಯಲ್ಲಿ ಲಕ್ಕಣ್ಣ ದಂಡೇಶನ ಕಾಲ ಬಹಳ ವಿಶಿಷ್ಟವಾದುದು. ಎರಡು ಸಾವಿರಕ್ಕೂ ಹೆಚ್ಚು ಪದ್ಯಗಳನ್ನು ವಾರ್ಧಕ ಷಟ್ಪದಿಯಲ್ಲಿ ರಚಿಸಿರುವುದು ವಿಶೇಷವಾದ ಸಂಗತಿ. ಶಿವತತ್ತ್ವ ಚಿಂತಾಮಣಿ ಗ್ರಂಥ ಬಸವಯುಗದ ನಂತರ ಶೈವ ಮತ್ತು ವೀರಶೈವ ಸಂಸ್ಕೃತಿಯ ಕೊಂಡಿಯಾಗಿದೆ ಎಂದು ತಿಳಿಸಿದರು.

ಸಂಗಮ ಕ್ಷೇತ್ರದ ಶ್ರೀ ಕಾರ್ಯಸ್ವಾಮಿ ಮಠದ ಶ್ರೀ ಮಹೇಶ್ವರ ಸ್ವಾಮಿಗಳು ಆತ್ಮವೆಂಬುದು ನಿತ್ಯ ಪರಿಶುದ್ಧವಾದುದು. ಓಂ ತತ್ ಸತ್ ಎಂಬಂತೆ ಪರಮಾತ್ಮನೇ ಅಂತಿಮ ಸತ್ಯ. ಇದು ಭಗವಂತನ ಅವ್ಯಕ್ತ ವಾಸ್ತವ ಮತ್ತು ಸತ್ಯವನ್ನು ಸೂಚಿಸುತ್ತದೆ. ಭಗವಂತನ ಸ್ವರೂಪಗಳು ಅನೇಕವಾಗಿದ್ದರೂ ದೇವರು ಒಬ್ಬನೇ. ಆಧ್ಯಾತ್ಮ ಸಾಧನೆಯಲ್ಲಿ ಶ್ರವಣಕ್ಕೆ ಮೊದಲ ಸ್ಥಾನವಿದೆ. ಕೇಳಿದ್ದನ್ನು ಬದುಕಿನಲ್ಲಿ ಅಳವಡಿಸಿಕೊಂಡು ಪಾಲಿಸಿದರೆ ಜೀವನ ಪಾವನವಾಗುತ್ತದೆ ಎಂದು ತಿಳಿಸಿದರು.

ಡಾ. ಕೆ. ಅನಂತರಾಮುರವರು ಶ್ರಾವಣಕ್ಕೂ-ಶ್ರವಣಕ್ಕೂ ಅವಿನಾಭಾವ ಸಂಬಂಧವಿದೆ. ಈ ಮಾಸದಲ್ಲಿ ಸದ್ವಿಚಾರಗಳ ಚಿಂತನೆ ಮಾಡಿದರೆ ಸಾಲದು, ಬದುಕಿನಲ್ಲಿ ಅವುಗಳನ್ನು ಅಳವಡಿಸಿಕೊಳ್ಳಬೇಕು. ಸುಸಂಸ್ಕೃತರಾಗಿ ಬೆಳೆಯಲು ಇಂತಹ ಸತ್ಸಂಗಗಳು, ಪ್ರವಚನಗಳು ನಡೆಯುತ್ತಲೇ ಇರಬೇಕು. ಇದರಿಂದ ಚಿತ್ತಶುದ್ಧಿಯಾಗುತ್ತದೆ ಮತ್ತು ಏಕಾಗ್ರತೆ ಹೆಚ್ಚುತ್ತದೆ. ಪೀಳಿಗೆಯಿಂದ ಪೀಳಿಗೆಗೆ ಬುದ್ಧಿ ಬೆಳೆಯುತ್ತಿದೆ, ಆದರೆ ವಿವೇಕ ಬೆಳೆಯುತ್ತಿಲ್ಲ. ಶಾಲಾ-ಕಾಲೇಜುಗಳಲ್ಲಿ ಸರಿಯಾದ ನೈತಿಕ ಶಿಕ್ಷಣ ದೊರೆಯುತ್ತಿಲ್ಲ. ಇಂದಿನ ಮಕ್ಕಳು ಕೇವಲ ಅಂಕದಾಹಕ್ಕೆ ಸಿಲುಕಿದ್ದಾರೆ. ಗಾಂಧೀಜಿಯವರು ನೀತಿ ಇಲ್ಲದ ಶಿಕ್ಷಣ ಸಾಮಾಜಿಕ ಪಾಪಕ್ಕೆ ಸಮವೆಂದಿದ್ದಾರೆ. ಯುವಜನರು ಇಂತಹ ಪ್ರವಚನ ಕಾರ್ಯಕ್ರಮಗಳಲ್ಲಿ ಹೆಚ್ಚಾಗಿ ಪಾಲ್ಗೊಳ್ಳಬೇಕು. ಬದುಕು ಉತ್ತಮ ಮೌಲ್ಯಗಳಿಂದ ರೂಪಗೊಳ್ಳಬೇಕು. ಕುವೆಂಪು ಅವರು ಹೇಳುವಂತೆ ಬುದ್ಧಿ ಮತ್ತು ಭಾವ ಒಂದಕ್ಕೊಂದು ಬೆಸೆದುಕೊಳ್ಳಬೇಕು. ಶ್ರಾವಣ ಮಾಸ ಭಕ್ತಿಯ ಬೀಜಗಳನ್ನು ಬಿತ್ತುವ ಕಾಲ. ಯಾವುದೇ ಕಾರ್ಯವನ್ನು ಶ್ರದ್ಧೆ ಮತ್ತು ಭಕ್ತಿಯಿಂದ ನಿರಂತರವಾಗಿ ಮಾಡುವುದೇ ಅನುಷ್ಠಾನ. ಅಂತಹ ಅನುಷ್ಠಾನ ಶ್ರೀಮಠದಲ್ಲಿ ನೂರಾರು ವರ್ಷಗಳಿಂದ ನಡೆದುಕೊಂಡು ಬರುತ್ತಿದೆ. ಪೂಜ್ಯ ಶ್ರೀ ಶಿವರಾತ್ರಿ ದೇಶಿಕೇಂದ್ರ ಶ್ರೀಗಳವರು ಅದಕ್ಕೆ ಸಾವಿರಪಟ್ಟು ವೇಗವನ್ನು ನೀಡಿದ್ದಾರೆ ಎಂದು ಹೇಳಿದರು.

ಗಮಕ ವಿದ್ವಾನ್ ಕೃ. ರಾಮಚಂದ್ರರವರು ವಾಚನ ಮಾಡಿದರು. ಪ್ರೊ. ಮೊರಬದ ಮಲ್ಲಿಕಾರ್ಜುನರವರು ಸ್ವಾಗತಿಸಿದರು. ಶ್ರೀ ವೀರಭದ್ರಸ್ವಾಮಿ ವಂದಿಸಿದರು. ಶ್ರೀ ಬಿ. ನಿರಂಜನಮೂರ್ತಿ ಕಾರ್ಯಕ್ರಮ ನಿರೂಪಿಸಿದರು. ಜೆಎಸ್ಎಸ್ ಲಲಿತಕಲಾ ವೃಂದದವರು ಪ್ರಾರ್ಥಿಸಿದರು. ಮೈಸೂರು ಶ್ರೀ ಸುತ್ತೂರು ಮಠದ ಸಿಬ್ಬಂದಿವರ್ಗದವರು ಸೇವಾರ್ಥ ನೆರವೇರಿಸಿದರು.

□

# ಪ್ರಸಾದ



## ಕೃತಿ–ಸ್ವೀಕೃತಿ

**ಗೋಪಾಲಗೌಡ ಶಾಂತವೇರಿ**
**ಅಂತರಂಗ–ಬಹಿರಂಗ**
ಡಾ. ಎಚ್.ಸಿ. ವಿಷ್ಣುಮೂರ್ತಿ
ಪ್ರ: ಅನನ್ಯ ಪ್ರಕಾಶನ
ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ
ಪು : 684, ಬೆಲೆ : 800/–

**ಬಸವಗೀತೆ**
**(ಬಸವಣ್ಣನವರ ವಚನಾಧಾರಿತ ಗೀತ ಸಂಕಲನ)**
ಶ್ರೀ ಮಾರೇನಹಳ್ಳಿ ಲೋಕೇಶ್
ಪ್ರ: ಶರಣಸ್ಥಲ
ಎಪಿಎಂಸಿ ಹಿಂಭಾಗ, ಕೃಷ್ಣರಾಜಪೇಟೆ
ಪು : 72, ಬೆಲೆ : 70/–

**ನಿಜಗುರುವಿನೆಡೆಗೆ**
ಶ್ರೀ ಮಾರೇನಹಳ್ಳಿ ಲೋಕೇಶ್
ಪ್ರ: ಅತ್ತಿಗುಪ್ಪೆ ಸಾಹಿತ್ಯ ಬಳಗ
ಕೃಷ್ಣರಾಜಪೇಟೆ, ಮಂಡ್ಯ ಜಿಲ್ಲೆ
ಪು : 112, ಬೆಲೆ : 150/–

**ಕೃಷ್ಣರಾಜಪೇಟೆ ತಾಲ್ಲೂಕು**
**ಸಾಹಿತಿ–ಮಾಹಿತಿ**
ಶ್ರೀ ಎಸ್. ಶಿವಕುಮಾರ್
ಪ್ರ: ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು
ಚಾಮರಾಜಪೇಟೆ, ಬೆಂಗಳೂರು
ಪು : 88, ಬೆಲೆ : 100/–

**ಶ್ರೀ ಶಿವಕುಮಾರ ವಾಣಿ – 1**
**(ಡಾ. ಶ್ರೀ ಶಿವಕುಮಾರ ಮಹಾಸ್ವಾಮೀಜಿ**
**ಗಳವರ ಅಮರ ಸಂದೇಶಗಳು)**
ಶ್ರೀ ಬಾಲಚಂದ್ರ ಎಂ.
ಪ್ರ: ಪವಾಡಶ್ರೀ ಪ್ರಕಾಶನ
ನೆಲಮಂಗಲ, ಬೆಂಗಳೂರು
ಪು : 172, ಬೆಲೆ : 200/–

**ಶ್ರೀ ಶಿವಕುಮಾರ ವಾಣಿ – 2**
**(ಡಾ. ಶ್ರೀ ಶಿವಕುಮಾರ ಮಹಾಸ್ವಾಮೀಜಿ**
**ಯವರ ದಿವ್ಯ ಸಂದೇಶಗಳು)**
ಶ್ರೀ ಬಾಲಚಂದ್ರ ಎಂ.
ಪ್ರ: ಪವಾಡಶ್ರೀ ಪ್ರಕಾಶನ
ನೆಲಮಂಗಲ, ಬೆಂಗಳೂರು
ಪು : 164, ಬೆಲೆ : 200/–

**ಶ್ರೀ ಶಿವಕುಮಾರ ದರ್ಶನ**
**(ಡಾ. ಶ್ರೀ ಶಿವಕುಮಾರ ಮಹಾಸ್ವಾಮೀಜಿ**
**ಯವರ ಜೀವನ ಮತ್ತು ಸಾಧನೆ)**
ಶ್ರೀ ಬಾಲಚಂದ್ರ ಎಂ.
ಪ್ರ: ಪವಾಡಶ್ರೀ ಪ್ರಕಾಶನ
ನೆಲಮಂಗಲ, ಬೆಂಗಳೂರು
ಪು : 628, ಬೆಲೆ : 750/–

**ಶ್ರೀ ಶಿವಕುಮಾರ ವಾಣಿ – 3**
**(ನುಡಿ ಸಂದೇಶಗಳು)**
ಶ್ರೀ ಬಾಲಚಂದ್ರ ಎಂ.
ಪ್ರ: ಪವಾಡಶ್ರೀ ಪ್ರಕಾಶನ
ನೆಲಮಂಗಲ, ಬೆಂಗಳೂರು
ಪು : 132, ಬೆಲೆ : 150/–

**Sri Shivakumara Vani**
ಶ್ರೀ ಬಾಲಚಂದ್ರ ಎಂ.
ಪ್ರ: ಪವಾಡಶ್ರೀ ಪ್ರಕಾಶನ
ನೆಲಮಂಗಲ, ಬೆಂಗಳೂರು
ಪು : 148, ಬೆಲೆ : 150/–

**ಎನ್ನೊಳಗಣ ಬಸವಪ್ರಭು**
ಪುಷ್ಪ ಬಸವರಾಜ ಬಣಕಾರ
ಪ್ರ: ಶುಭದ ಪ್ರಕಾಶನ
ಜರಗನಹಳ್ಳಿ, ಜೆ.ಪಿ.ನಗರ ಅಂಚೆ
ಬೆಂಗಳೂರು
ಪು : 124, ಬೆಲೆ : 100/–

**ವಚನವಲ್ಲರಿ (ಆಧುನಿಕ ವಚನಗಳು)**
ಪುಷ್ಪ ಬಸವರಾಜ ಬಣಕಾರ
ಪ್ರ: ಶುಭದ ಪ್ರಕಾಶನ
ಜರಗನಹಳ್ಳಿ, ಜೆ.ಪಿ.ನಗರ ಅಂಚೆ
ಬೆಂಗಳೂರು
ಪು : 102, ಬೆಲೆ : 100/–

# ಲೇಖಕರ ವಿಳಾಸ

**ಡಾ. ಬಿ. ನಂಜುಂಡಸ್ವಾಮಿ**
ಪಂಡಿತ ತಾರಾನಾಥ ಆಯುರ್ವೇದ
ಚಿಕಿತ್ಸಾಲಯ ಬಿ.ಹೆಚ್. ರಸ್ತೆ
ತುಮಕೂರು 572 102
ಮೊ: 98809 96196

**ಎಚ್.ಎಸ್. ಸಿದ್ಧಗಂಗಪ್ಪ**
ನಂ.1617, ಮಾತೃಶ್ರೀ,
ಸರ್ ಎಂ.ವಿ. ಮುಂದುವರೆದ ಬಡಾವಣೆ
8ನೇ ಬ್ಲಾಕ್, ಸ್ಫೂರ್ತಿಧಾಮದ ಎದುರು
ಮುದ್ದಿನಪಾಳ್ಯ ಮುಖ್ಯರಸ್ತೆ
ಬೆಂಗಳೂರು 560 091
ಮೊ: 98455 65871

**ಶ್ರೀ ಸ.ರಾ. ಸುಳಕೂಡೆ**
ನಂ.1319, 'ಶ್ರೀ ಶವಪ್ರಸಾದ'
ರಾಮತೀರ್ಥನಗರ
ಬೆಳಗಾವಿ 590 015
ಮೊ.: 98555 53343

**ಡಾ. ಎಸ್.ಜಿ. ರಾಮದಾಸ ರೆಡ್ಡಿ**
ಇತಿಹಾಸ ಪ್ರಾಧ್ಯಾಪಕರು
ಎಚ್.ಐ.ಜಿ. 32, ಗ್ರೂಪ್–1
ಕೆ.ಎಚ್.ಬಿ. ಕಾಲೋನಿ
ಹೂಟಗಳ್ಳಿ
ಮೈಸೂರು 570018
ಮೊ: 98453 09081

ಹರತೇರು ಬಿತ್ತಿದ ಗಿಡವಿನ ಹೂವ್ವ ಕೊಯ್ದು
ಊರೆಲ್ಲ ಕಟ್ಟಿದ ಕೆರೆ ನೀರ ತಂದು
ನಾಡೆಲ್ಲ ನೋಡಿರಿಯೆಂದು ಪೂಜಿಸುವ ಪುಣ್ಯ
ನೀರಿಗೊ ಹುವ್ವಿಗೊ ನಾಡೆಲ್ಲಕ್ಕೊ ಪೂಜಿಸಿದಾತಗೊ
ಇದ ನಾನರಿಯೆ ನೀ ಹೇಳೆಂದಾತ
ನಮ್ಮ ದಿಟ್ಟ ವೀರಾಧಿವೀರ
ನಿಜ ಭಕ್ತ ಅಂಬಿಗರ ಚೌಡಯ್ಯನು
**– ಅಂಬಿಗರ ಚೌಡಯ್ಯ**

ಹಿಂಬದಿ ಪುಟದ ಚಿತ್ರ


ಮೈಸೂರು ಶ್ರೀ ಸುತ್ತೂರು ಮಠಕ್ಕೆ 2025ರ ಅಂತಾರಾಷ್ಟ್ರೀಯ ಬೂಕರ್ ಪ್ರಶಸ್ತಿ ಪುರಸ್ಕೃತರಾದ ಶ್ರೀಮತಿ ಬಾನು ಮುಷ್ತಾಕ್‌ರವರು ಭೇಟಿ ನೀಡಿದ ಸಂದರ್ಭದಲ್ಲಿ ಪರಮಪೂಜ್ಯ ಜಗದ್ಗುರುಗಳವರು ಸನ್ಮಾನಿಸಿ ಆಶೀರ್ವದಿಸಿದರು. ಡಾ. ಪಿ. ಶಿವರಾಜು, ಡಾ. ಸಿ.ಜಿ. ಬೆಟಸೂರಮಠ ಹಾಗೂ ಶ್ರೀ ಎಸ್.ಪಿ. ಮಂಜುನಾಥ್ ಮೊದಲಾದವರುಗಳಿದ್ದಾರೆ (5 ಜುಲೈ 2025)




ಮೈಸೂರು ಜೆಎಸ್ಎಸ್ ಫಾರ್ಮಸಿ ಕಾಲೇಜಿನ 'ಸಮವರ್ತನ' ಪದವಿ ಪ್ರದಾನ ಕಾರ್ಯಕ್ರಮವು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿತು. ಡಾ. ಟಿ.ಎಂ. ಪ್ರಮೋದ್‌ಕುಮಾರ್, ಡಾ. ಆರ್. ಸುಧೀಂದ್ರ ಭಟ್, ಡಾ. ಹೆಚ್. ಬಸವನಗೌಡಪ್ಪ, ಡಾ. ಗಿರೀಶ್ ಕಪೂರ್, ಡಾ. ಸಿ.ಜಿ. ಬೆಟಸೂರಮಠ, ಡಾ. ಬಿ. ಮಂಜುನಾಥ್, ಡಾ. ವಿಶಾಲ್‌ಕುಮಾರ್ ಗುಪ್ತಾ, ಡಾ. ಜಿ.ವಿ. ಪೂಜಾರ್‌ರವರುಗಳೊಂದಿಗೆ ಪದಕ ವಿಜೇತ ಪದವೀಧರರುಗಳಿದ್ದಾರೆ (1 ಜುಲೈ 2025)





ಬೆಂಗಳೂರಿನಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಹಾಗೂ ಶಂಕರ ಬಿದರಿ ಫೌಂಡೇಷನ್ ವತಿಯಿಂದ ಆಯೋಜಿಸಿದ್ದ ವಚನ ಪಿತಾಮಹ ಡಾ. ಫ.ಗು. ಹಳಕಟ್ಟಿಯವರ ಜನ್ಮ ದಿನಾಚರಣೆಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ಕೆ.ವಿ. ನಾಗರಾಜಮೂರ್ತಿ, ಡಾ. ವೂಡೇ ಪಿ. ಕೃಷ್ಣ, ಶ್ರೀ ಚಂದ್ರಕಾಂತ ಸಿ. ಬೆಲ್ಲದ, ಶ್ರೀ ಹೆಚ್.ಕೆ. ಪಾಟೀಲ್, ಶ್ರೀ ಶಂಕರ ಎಂ. ಬಿದರಿ, ಡಾ. ಸಿ. ಸೋಮಶೇಖರ್ ಹಾಗೂ ಶ್ರೀ ಮಹಾಂತೇಶ್ ಬಿರಾದಾರ್‌ರವರುಗಳಿದ್ದಾರೆ (2 ಜುಲೈ 2025)




ಮೈಸೂರು ಸರಸ್ವತಿಪುರಂ ಮಂತ್ರಮಹರ್ಷಿ ಸಭಾಂಗಣದಲ್ಲಿ ಶ್ರೀಮತಿ ಮಲ್ಲಿಕಾ ಮಳವಳ್ಳಿಯವರ ಅಭಿನಂದನಾ ಕೃತಿ 'ಸದಾಚಾರ ಸಂಪನ್ನೆ' ಬಿಡುಗಡೆ ಕಾರ್ಯಕ್ರಮದಲ್ಲಿ ಶ್ರೀಮತಿ ಮಲ್ಲಿಕಾ ಮಳವಳ್ಳಿ ದಂಪತಿಗಳನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಅಭಿನಂದಿಸಲಾಯಿತು. ಡಾ. ಪಿ. ಶಿವರಾಜು, ಡಾ. ಹೆಚ್.ಎಸ್. ಮುದ್ದೇಗೌಡ, ಡಾ. ಪ್ರದೀಪಕುಮಾರ ಹೆಬ್ರಿ, ಶ್ರೀ ಮರಿತಿಬ್ಬೇಗೌಡ, ಡಾ. ಎಸ್. ಶಿವರಾಜಪ್ಪ, ಶ್ರೀ ಮಾಣಿಕ್‌ಚಂದ್ ಬಲ್ಡೋಟರವರುಗಳೊಂದಿಗೆ ಕುಟುಂಬವರ್ಗದವರಿದ್ದಾರೆ (13 ಜುಲೈ 2025)



ಮೈಸೂರು ಸ್ಪಂದನ ವೀರಶೈವ ಬಳಗದ ವತಿಯಿಂದ ಆಯೋಜಿಸಿದ್ದ ಬಸವ ಜಯಂತಿ ಹಾಗೂ ಬಳಗದ 20ನೇ ವಾರ್ಷಿಕೋತ್ಸವವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀಮತಿ ಶಾರದಾ ಶಿವಲಿಂಗಸ್ವಾಮಿ, ಶ್ರೀಮತಿ ಗೀತಾ ಈಶ್ವರ್, ಶ್ರೀ ಹೆಚ್.ಎಂ. ಗಣೇಶ್‌ಪ್ರಸಾದ್, ಡಾ. ಜಯಪ್ಪ ಹೊನ್ನಾಳಿ, ಶ್ರೀ ಪುಟ್ಟರಾಜು ಹಾಗೂ ರಾಮಾಪುರ ಶ್ರೀಗಳಿದ್ದಾರೆ (13 ಜುಲೈ 2025)



ಮೈಸೂರಿನ ಸೋಸಲೆ ಶ್ರೀ ವ್ಯಾಸರಾಜ ಮಠದ ಶ್ರೀ ವಿದ್ಯಾಶ್ರೀಶತೀರ್ಥ ಶ್ರೀಪಾದಂಗಳವರ 9ನೇ ಪೀಠಾರೋಹಣ ವಾರ್ಷಿಕೋತ್ಸವ ಮತ್ತು ಶ್ರೀ ವ್ಯಾಸತೀರ್ಥ ವಿದ್ಯಾಪೀಠದ 10ನೇ ವಾರ್ಷಿಕೋತ್ಸವದಲ್ಲಿ ಶ್ರೀಗಳನ್ನು ಪರಮಪೂಜ್ಯ ಜಗದ್ಗುರುಗಳವರು ಸನ್ಮಾನಿಸಿದರು. ಶ್ರೀ ಕೆ. ಜಯರಾಜ್, ಡಾ. ಹೆಚ್.ಎಸ್. ರಾಘವೇಂದ್ರರಾವ್, ಶ್ರೀ ಪ್ರಹ್ಲಾದ್ ರಾಮರಾವ್ ಮೊದಲಾದವರುಗಳಿದ್ದಾರೆ (4 ಜುಲೈ 2025)




ಕೆ.ಆರ್. ನಗರ ಮತ್ತು ಸಾಲಿಗ್ರಾಮ ತಾಲ್ಲೂಕು ನಾಗರಿಕ ವೇದಿಕೆಯಿಂದ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಶ್ರೀ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಡಾ. ಸಾ.ರಾ. ಧನುಷ್ ಹಾಗೂ ಶ್ರೀ ಸಾ.ರಾ. ಮಹೇಶ್‌ರವರನ್ನು ಪರಮಪೂಜ್ಯ ಜಗದ್ಗುರುಗಳವರು ಸನ್ಮಾನಿಸಿ ಆಶೀರ್ವದಿಸಿದರು. ಶ್ರೀ ಸಿ.ಎನ್. ಮಂಜೇಗೌಡ, ಶ್ರೀ ಎ.ಹೆಚ್. ವಿಶ್ವನಾಥ್ ಹಾಗೂ ಶ್ರೀ ಎ.ಎಸ್. ಚನ್ನಬಸಪ್ಪ ಮೊದಲಾದವರುಗಳಿದ್ದಾರೆ (7 ಜುಲೈ 2025)




ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಆಷಾಢ ಮಾಸದ ಕೊನೆಯ ಶುಕ್ರವಾರದಂದು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಶ್ರೀ ಚಾಮುಂಡೇಶ್ವರಿ ಪಾದದ ದೇವಸ್ಥಾನದಲ್ಲಿ ವಿಶೇಷಪೂಜೆ ಹಾಗೂ ಪ್ರಸಾದ ವಿನಿಯೋಗ (ಅನ್ನದಾನ) ಕಾರ್ಯಕ್ರಮ ನೆರವೇರಿತು. ಶ್ರೀ ಎಸ್. ಶಿವಕುಮಾರಸ್ವಾಮಿ, ಡಾ. ಸಿ.ಜಿ. ಬೆಟಸೂರಮಠ ಹಾಗೂ ಶ್ರೀ ಎಸ್.ಪಿ. ಮಂಜುನಾಥ್‌ರವರುಗಳಿದ್ದಾರೆ (18 ಜುಲೈ 2025)




ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಶ್ರಾವಣ ಮಾಸದ ಪೂಜಾನುಷ್ಠಾನ ಮತ್ತು ಪ್ರವಚನ ಕಾರ್ಯಕ್ರಮವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ. ಎಂ.ಡಿ. ಸುದರ್ಶನ್‌ರವರು ಉದ್ಘಾಟಿಸಿದರು. ಸಂಗಮ ಕ್ಷೇತ್ರದ ಕಾರ್ಯಸ್ವಾಮಿ ಮಠದ ಶ್ರೀಗಳು, ಡಾ. ಕೆ. ಅನಂತರಾಮು ಹಾಗೂ ವಿದ್ವಾನ್ ಕೃ. ರಾಮಚಂದ್ರರವರಿದ್ದಾರೆ (25 ಜುಲೈ 2025)






ಸುತ್ತೂರು ಶ್ರೀಕ್ಷೇತ್ರದಲ್ಲಿ ಶ್ರಾವಣಮಾಸದ ಪೂಜಾನುಷ್ಠಾನ ಮತ್ತು ಪ್ರವಚನ ಕಾರ್ಯಕ್ರಮವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉಪ ವಿಭಾಗಾಧಿಕಾರಿಗಳವರಾದ ಶ್ರೀ ಆಶಪ್ಪರವರು ಉದ್ಘಾಟಿಸಿದರು. ಪ್ರೊ. ಹೆಚ್.ಬಿ. ದೇವಣ್ಣ, ಮುಡುಕುತೊರೆಯ ಶ್ರೀ ಕಲ್ಮಠದ ಶ್ರೀ ನಂದಿಕೇಶ್ವರ ಸ್ವಾಮಿಗಳು ಹಾಗೂ ಶ್ರೀ ಡಿ.ಎಂ. ಸಿದ್ಧಲಿಂಗಸ್ವಾಮಿಯವರುಗಳಿದ್ದಾರೆ. ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರಾದ ಶ್ರೀ ಬಿ. ರಂಗೇಗೌಡರವರು ಮಾತನಾಡುತ್ತಿರುವುದು (25 ಜುಲೈ 2025)




ಮೈಸೂರು ಕಲಾಮಂದಿರದಲ್ಲಿ ದಲೈಲಾಮಾರವರ 90ನೇ ಜನ್ಮದಿನದ ಪ್ರಯುಕ್ತ ಆಯೋಜಿಸಿದ್ದ ಟಿಬೆಟ್ ಉತ್ಸವವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ಗೆಲೆಕ್ ಜಂಗ್ನಿ, ಶ್ರೀ ಗೆಶೆ ಲಕ್ಡೋರ್, ಗೃಹ ಸಚಿವರಾದ ಡಾ. ಜಿ. ಪರಮೇಶ್ವರ, ಶ್ರೀ ವೇಣುಗೋಪಾಲ್, ಡಾ. ಎಂ.ಬಿ. ಬೋರಲಿಂಗಯ್ಯ ಹಾಗೂ ಶ್ರೀ ಚೈಮ್ ಡೋರ್ಜಿಯವರುಗಳಿದ್ದಾರೆ (19 ಜುಲೈ 2025)




ಮೈಸೂರಿನ ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯದಲ್ಲಿ ಪತ್ರಕರ್ತರಾದ ಶ್ರೀ ಐತಿಚಂಡ ರಮೇಶ್ ಉತ್ತಪ್ಪನವರ ಮೂರು ಕೃತಿಗಳನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಬಿಡುಗಡೆಗೊಳಿಸಲಾಯಿತು. ಶ್ರೀ ಎಂ.ಜಿ. ಮಂಜುನಾಥ್, ಶ್ರೀ ಪ್ರಕಾಶ್ ಚಿಕ್ಕಪಾಳ್ಯ, ಲೆಫ್ಟಿನಂಟ್ ಕರ್ನಲ್ ಶ್ರೀ ಪಿ.ಎಸ್. ಗಣಪತಿ, ಶ್ರೀ ಟಿ.ಎಸ್. ಶ್ರೀವತ್ಸ, ಶ್ರೀ ಸಂದೇಶಕುಮಾರ್, ಪ್ರೊ. ನಾಗೇಶ್ ಬೆಟ್ಟಕೋಟೆ, ಶ್ರೀ ಎ.ಪಿ. ನಾಗೇಶ್ ಹಾಗೂ ಶ್ರೀ ಐತಿಚಂಡ ರಮೇಶ್ ಉತ್ತಪ್ಪರವರುಗಳಿದ್ದಾರೆ (25 ಜುಲೈ 2025)



ಗುಂಡ್ಲುಪೇಟೆ ಜೆಎಸ್‌ಎಸ್ ಅನುಭವ ಮಂಟಪದಲ್ಲಿ ಆಯೋಜಿಸಿದ್ದ 21ನೇ ಮದ್ಯವರ್ಜನ ಶಿಬಿರದ ಸಮಾರೋಪವು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿತು. ಶ್ರೀ ಎಸ್. ನಂಜಪ್ಪ, ಶ್ರೀ ಪಿ. ಕೃಷ್ಣಕುಮಾರ್, ಶ್ರೀ ಹೆಚ್.ಎಂ. ಗಣೇಶ್‌ಪ್ರಸಾದ್, ಶ್ರೀ ಸಿ.ಎಸ್. ನಿರಂಜನ್‌ಕುಮಾರ್, ಶ್ರೀ ಜಿ.ಎನ್. ಮಧುಸೂದನ್‌ರವರು ಹಾಗೂ ಸ್ವಯಂಸೇವಕರುಗಳೊಂದಿಗೆ ಶಿಬಿರಾರ್ಥಿಗಳಿದ್ದಾರೆ (23 ಜುಲೈ 2025)




ಚಾಮರಾಜನಗರದ ಶ್ರೀ ಸಿದ್ದಮಲ್ಲೇಶ್ವರ ವಿರಕ್ತಮಠದ ಅನುಭವಮಂಟಪದಲ್ಲಿ ಜಿಲ್ಲಾ ವೀರಶೈವ–ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘದ ರಜತಮಹೋತ್ಸವ ಸಮಾರೋಪ ಸಮಾರಂಭವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ಪಿ. ಬಸಪ್ಪ, ಶ್ರೀ ಪಿ. ಮರಿಸ್ವಾಮಿ, ಶ್ರೀ ಹೆಚ್.ಎಂ. ಗಣೇಶಪ್ರಸಾದ್, ಮರಿಯಾಲ ಮತ್ತು ಚಾಮರಾಜನಗರ ಶ್ರೀಗಳು, ಶ್ರೀ ಸಿದ್ಧಮಲ್ಲಪ್ಪನವರುಗಳಿದ್ದಾರೆ (20 ಜುಲೈ 2025)



ಮಾಗಡಿಯ ಶ್ರೀ ಜಡೇದೇವರ ಮಠದಲ್ಲಿ ತೃತೀಯ ವರ್ಷದ ಆಷಾಢಮಾಸದ ಏಕಾದಶ ಮಹಾರುದ್ರಾಭಿಷೇಕ ವಿಶೇಷಪೂಜೆ ನೆರವೇರಿದ ಸಂದರ್ಭದಲ್ಲಿ ಪೂಜ್ಯರನ್ನು ಭಕ್ತಿಪೂರ್ವಕವಾಗಿ ಗೌರವಿಸುತ್ತಿರುವುದು. ಜಡೇದೇವರ ಮಠದ ಶ್ರೀಗಳು ಹಾಗೂ ಮೊದಲಾದವರುಗಳಿದ್ದಾರೆ (19 ಜುಲೈ 2025)




ಮೈಸೂರು ಜೆ.ಪಿ. ನಗರದಲ್ಲಿ ಶ್ರೀ ಸಿದ್ಧಲಿಂಗೇಶ್ವರಸ್ವಾಮಿಯ ದೇವಸ್ಥಾನ ನಿರ್ಮಾಣ ಶಿಲಾನ್ಯಾಸ ಕಾರ್ಯಕ್ರಮವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ಸಿ.ಎನ್. ಮಂಜೇಗೌಡ, ಶ್ರೀ ಟಿ.ಎಸ್. ಶ್ರೀವತ್ಸ, ಶ್ರೀ ಬಿ.ವೈ. ವಿಜಯೇಂದ್ರ, ಚಂದ್ರನವನ ಆಶ್ರಮದ ಶ್ರೀಗಳು, ಶ್ರೀ ಜಿ.ಟಿ. ದೇವೇಗೌಡ, ಶ್ರೀ ಹೆಚ್.ಎಂ. ಗಣೇಶ್‌ಪ್ರಸಾದ್, ಶ್ರೀ ಎಂ. ಪ್ರದೀಪ್‌ಕುಮಾರ್ ಹಾಗೂ ಶ್ರೀ ಬಿ.ಕೆ. ನಾಗರಾಜುರವರುಗಳಿದ್ದಾರೆ (6 ಜುಲೈ 2025)



ಮೈಸೂರು ಕಲಾಮಂದಿರದಲ್ಲಿ ಆಯೋಜಿಸಿದ್ದ ಕದಳಿ ಮಹಿಳಾ ವೇದಿಕೆಯ ರಜತ ಮಹೋತ್ಸವದಲ್ಲಿ ವೈದ್ಯರಾದ ಡಾ. ವಿಜಯಲಕ್ಷ್ಮಿ ದೇಶಮಾನೆಯವರಿಗೆ ಸುತ್ತೂರು ಮತ್ತು ಆನಂದಪುರಂ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಕದಳಿಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು. ಕು. ಎಂ.ಎ. ನೀಲಾಂಬಿಕ, ಶ್ರೀ ಸುಧಾ ಮತ್ಯುಂಜಯಪ್ಪ, ಶ್ರೀಮತಿ ಶೈಲಾ ಸಿದ್ರಾಮಪ್ಪ, ಶ್ರೀಮತಿ ಜಯಾಗೌಡ, ಶ್ರೀಮತಿ ಶಾರದ ಶಿವಲಿಂಗಸ್ವಾಮಿ, ಡಾ. ಲೀಲಾದೇವಿ ಆರ್. ಪ್ರಸಾದ್, ಶ್ರೀ ಹೆಳವರಹುಂಡಿ ಸಿದ್ದಪ್ಪ, ಡಾ. ಸಿ. ಸೋಮಶೇಖರ್, ಶ್ರೀ ಗೊ.ರು. ಚನ್ನಬಸಪ್ಪ ಹಾಗೂ ಶ್ರೀಮತಿ ವಾಗ್ದೇವಿಯವರುಗಳಿದ್ದಾರೆ (27 ಜುಲೈ 2025)

Registered with the Registrar of Newspapers in India Under No. 50622 / 1986
'Prasada' Monthly, Vol. 40 Issue No. 7, July 2025



ISSN 2583-7648
9 772583 764006

ಬಿಡಿ ಪ್ರತಿ : ರೂ.10/-

e-mail: prasada@jssonline.org ⋆ www.jssonline.org